ಫೆಬ್ರವರಿ 1, 2026

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2022

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ನಕಲಿ ಹೋರಾಟಗಾರನ ಲ್ಯಾಂಡ್ ಫ್ರಾಡ್!

## ಓನರ್ ಏಮಾರಿಸಿ ತದ್ರೂಪಿ ತೋರಿಸಿ ಲ್ಯಾಂಡ್ ರಿಜಿಸ್ಟರ್!




## ಕಾಂಗೆಸ್ಸಿಗರೇ ಹುಷಾರ್... ಮೋದಿ ದಂಡಯಾತ್ರೆ ಬರುತ್ತಿದ್ದಾರೆ!

## ಕೆಂಭಾವಿ ರಕ್ಷಕನೇ ಭಕ್ಷಕನಾದಾಗ...



## ಮಹಾ ಡಿಸಿಎಂ ಅಜಿತ್ ಪವಾರ್ ನಿಗೂಢ ಕೊಲೆ?!

## ದಂಡುಪಾಳ್ಯ ಹಂತಕ ಚಿಕ್ಕ ಹನುಮ ಕಡೆಗೂ ಸಿಕ್ಕಿಬಿದ್ದ!



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)
**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)
**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)
**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)
**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)
**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)
**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)
**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)
**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)
**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)
**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)
**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)
**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94
**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)
**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)
**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)
**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)
**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)
**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)
**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)
**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)
**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ಮಹಾ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಏರ್ ಕ್ರ್ಯಾಶ್‌ನಲ್ಲಿ ದುರ್ಮರಣ....





ಮಹಾರಾಷ್ಟ್ರದ ಬಾರಾಮತಿ ಬಳಿ ಸಂಭವಿಸಿದ ವಿಮಾನ ದುರಂತದಲ್ಲಿ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಸೇರಿದಂತೆ ಐದು ಮಂದಿ ಮೃತಪಟ್ಟಿದ್ದಾರೆ ಎಂದು ನಾಗರೀಕ ವಿಮಾನಯಾನ ನಿರ್ದೇಶನಾಲಯ ತಿಳಿಸಿದೆ. ಮುಂಬೈನಿಂದ ಬಾರಾಮತಿಗೆ ತೆರಳುತ್ತಿದ್ದ ಲಿಯರ್‌ಜೆಟ್ 45 ಏರ್ ಕ್ರಾಫ್ಟ್ ಲ್ಯಾಂಡಿಂಗ್ ಆಗುವ ವೇಳೆ ಬಾರಾಮತಿಯ ಹೊಲದಲ್ಲಿ ಅಪಘಾತಕ್ಕೆ ಈಡಾಗಿದೆ ಎಂದು ಡಿಜಿಸಿಎ ತಿಳಿಸಿದೆ.

ಮುಂಬೈನಿಂದ ಬುಧವಾರ ಬೆಳಗ್ಗೆ 8.10ಕ್ಕೆ ವಿಮಾನ ಬಾರಾಮತಿ ಕಡೆ ಪ್ರಯಾಣ ಮಾಡಿತ್ತು. ಇನ್ನೇನು ಬಾರಾಮತಿಯಲ್ಲಿ ಲ್ಯಾಂಡಿಂಗ್ ಆಗಬೇಕು ಎನ್ನುವಾಗ ಈ ಅಪಘಾತ ಸಂಭವಿಸಿದೆ. 45 XR ಮಾದರಿಯ ಸಣ್ಣ ಏರ್‌ಕ್ರಾಫ್ಟ್ ಇದಾಗಿದ್ದು, ಬೆಳಗ್ಗೆ 8.10ಕ್ಕೆ ಮುಂಬೈನಿಂದ ಹೊರಟಿತ್ತು. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮುನ್ನ ಪವಾರ್ ನಾಲ್ಕು ಪ್ರಮುಖ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಬೇಕಿತ್ತು.

ಅಜಿತ್ ಪವಾರ್ ಅವರು ಪೃಥ್ವಿರಾಜ್ ಚವಾಣ್, ದೇವೇಂದ್ರ ಫಡ್ನವೀಸ್, ಉದ್ಧವ್ ಠಾಕ್ರೆ ಮತ್ತು ಏಕನಾಥ್ ಶಿಂಧೆ ಮುಂತಾದವರ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು 1991ರಲ್ಲಿ ಬಾರಾಮತಿ ಸಂಸದೀಯ ಕ್ಷೇತ್ರದಿಂದ ಮೊದಲ ಬಾರಿಗೆ ಲೋಕಸಭೆಗೆ ಆಯ್ಕೆಯಾಗಿದ್ದರು. ನಂತರ ತಮ್ಮ ಚಿಕ್ಕಪ್ಪ ಶರದ್ ಪವಾರ್ ಅವರಿಗೆ ಆ ಸ್ಥಾನವನ್ನು ಬಿಟ್ಟುಕೊಟ್ಟರು. ಅವರು ಬಾರಾಮತಿ ವಿಧಾನಸಭಾ ಕ್ಷೇತ್ರದಿಂದ ಏಳು ಬಾರಿ ಮಹಾರಾಷ್ಟ್ರ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅವರು ಮೊದಲು 1991ರ ಉಪಚುನಾವಣೆಯಲ್ಲಿ ಗೆದ್ದು ನಂತರ 1995, 1999, 2004, 2009 ಮತ್ತು 2014 ರಲ್ಲಿ ಸತತ ಸರಣಿ ಗೆಲುವು ಸಾಧಿಸಿದ್ದರು.

2019 ರ ನವೆಂಬರ್‌ನಲ್ಲಿ NCPಯಲ್ಲಿ ಒಡಕು ಮೂಡಿತು. ಹೀಗಾಗಿ ಭಾರತೀಯ ಜನತಾ ಪಕ್ಷದ ನೇತೃತ್ವದ ಸರ್ಕಾರವನ್ನು ಸೇರಿಕೊಂಡು ಉಪಮುಖ್ಯಮಂತ್ರಿಯಾಗಿದ್ದರು. 2024ರ ಫೆಬ್ರವರಿಯಲ್ಲಿ, ಚುನಾವಣಾ ಆಯೋಗವು ಅಜಿತ್ ಪವಾರ್ ನೇತೃತ್ವದ ಬಣಕ್ಕೆ ಪಕ್ಷದ ಹೆಸರು ಮತ್ತು ಚಿಹ್ನೆಯನ್ನು ನೀಡಿತ್ತು. ಒಟ್ಟಾರೆ,ಪವರ್ ಫುಲ್ ಪೊಲಿಟೀಷಿಯನ್ ಆಗಿದ್ದ ಅಜಿತ್ ಪವಾರ್ ಇದೀಗ ದುರಂತ ಅಂತ್ಯವಾಗಿದ್ದು, ಅವರ ಪತ್ನಿ ಸುನೇತ್ರಾ, ಮಕ್ಕಳಾದ ಅಜಯ್ ಮತ್ತು ಪಾರ್ಥ ಅನಾಥ ರಾಗಿದ್ದಾರೆ!

**ಏರ್ ಕ್ರ್ಯಾಶ್‌ನಲ್ಲಿ ಮೃತರಾದ ಇತರೆ ಗಣ್ಯರು....**

★**ವಿಜಯ್ ರೂಪಾನಿ (2025):** ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರು ಜೂನ್ 12, 2025 ರಂದು ಅಹಮದಾಬಾದ್‌ನಿಂದ ಹೊರಟ ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಮೃತಪಟ್ಟರು.

☞ 3

# ಕಾನೂನು ಕಾಯ್ದೆ ಕೈಗೆತ್ತಿಕೊಂಡರೆ ಶಿಕ್ಷೆ ತಪ್ಪಿದ್ದಲ್ಲ....



ಸಂಪಾದಕ
ಎಂ. ರಾಹುಲ್

ಇತ್ತೀಚಿನ ಸಾಮಾಜಿಕ ಸ್ಥಿತ್ಯಂತರಗಳನ್ನು ಗಮನಿಸಿದಾಗ, ಹಕ್ಕು ಮತ್ತು ಬಾಧ್ಯತೆಗಳ ನಡುವಿನ ಸಂಘರ್ಷವೊಂದು ಎದ್ದು ಕಾಣುತ್ತಿದೆ. 'ಸಮಾಜ ಸೇವೆ' ಅಥವಾ 'ಪಕ್ಷದ ಕೆಲಸ'ದ ಪವಿತ್ರ ಹಣೆಪಟ್ಟಿಯಡಿಯಲ್ಲಿ ಕಾನೂನಿನ ಚೌಕಟ್ಟನ್ನು ಮೀರಿದ ವರ್ತನೆಗಳು ಇಂದು ಅರಾಜಕತೆಯ ಮುನ್ಸೂಚನೆಯಂತೆ ಭಾಸವಾಗುತ್ತಿವೆ. ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಶ್ನಿಸುವ ಸಂವಿಧಾನಬದ್ಧ ಹಕ್ಕು ಎಲ್ಲರಿಗೂ ಇದೆ ಎಂಬುದು ನಿಜ, ಆದರೆ ಆ ಹಕ್ಕು ಇತರರ ಕರ್ತವ್ಯ ನಿರ್ವಹಣೆಗೆ ಅಡ್ಡಿಯಾದಾಗ ಅದು ನಾಗರಿಕ ಸಮಾಜಕ್ಕೆ ಮುಳುವಾಗುತ್ತದೆ.

ಇದೇ ಹಿನ್ನೆಲೆಯಲ್ಲಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಕಾರ್ಯಕರ್ತರ ಕಾನೂನುಬಾಹಿರ ನಡವಳಿಕೆಗಳ ವಿರುದ್ಧ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಹೊರಡಿಸಿರುವ ಕಟ್ಟುನಿಟ್ಟಿನ ಆದೇಶವು ಅತ್ಯಂತ ಮಹತ್ವದ ಬೆಳವಣಿಗೆಯಾಗಿದೆ. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಕಾರ್ಯಕರ್ತರ ಕಾರ್ಯವೈಖರಿಯು ಸೀಮೆ ಮೀರುತ್ತಿರುವುದನ್ನು ಮನಗಂಡಿರುವ ರಾಜ್ಯ ಪೊಲೀಸ್ ಇಲಾಖೆ, ಈಗ ಶೂನ್ಯ ಸಹಿಷ್ಣುತೆಯ ಹಾದಿ ತುಳಿದಿದೆ. ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ವ್ಯವಸ್ಥಿತವಾಗಿ ಅಡ್ಡಿಪಡಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಅಸಭ್ಯವಾಗಿ ವರ್ತಿಸುವುದು ಮತ್ತು ಪೊಲೀಸ್ ಠಾಣೆಗಳ ಪಾವಿತ್ರ್ಯತೆಗೆ ಧಕ್ಕೆ ತರುವಂತಹ ಘಟನೆಗಳನ್ನು ಇಲಾಖೆಯು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ರಾಜ್ಯ ಪೊಲೀಸ್ ಮಹಾನಿರ್ದೇಶಕರು ರಾಜ್ಯದ ಎಲ್ಲಾ ವಲಯಗಳ ಎಸ್‌ಪಿಗಳು, ಕೆಜಿಎಫ್ ಹಾಗೂ ರೈಲ್ವೇ ಪೊಲೀಸ್ ಘಟಕಗಳಿಗೆ ಅಧಿಕೃತ ನಿರ್ದೇಶನ ನೀಡಿ, ಇಂತಹ ಕೃತ್ಯಗಳಲ್ಲಿ ತೊಡಗುವವರ ವಿರುದ್ಧ ತಕ್ಷಣವೇ ಪ್ರಕರಣ ದಾಖಲಿಸಲು ಸೂಚಿಸಿದ್ದಾರೆ.

ಇದು ಕೇವಲ ಒಂದು ಸಾಧಾರಣ ಎಚ್ಚರಿಕೆಯಲ್ಲ; ಬದಲಿಗೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಜ್ಯದ ಉನ್ನತ ಪೊಲೀಸ್ ಅಧಿಕಾರಿ ನೀಡಿದ ಅಧಿಕೃತ ಮುದ್ರೆ ಹಾಗೂ ಆಡಳಿತಾತ್ಮಕ ಕಟ್ಟುನಿಟ್ಟಿನ ಕ್ರಮವಾಗಿದೆ.

ಪ್ರಜಾಪ್ರಭುತ್ವದ ಪ್ರತಿಭಟನೆಯ ಸ್ವರೂಪವು ಇಂದು ವಿಕೃತ ರೂಪ ಪಡೆಯುತ್ತಿರುವುದಕ್ಕೆ 'ಸನ್ಮಾನದ ನೆಪದಲ್ಲಿ ಅವಮಾನ ಮಾಡುವ' ತಂತ್ರವೊಂದು ಜ್ವಲಂತ ಉದಾಹರಣೆಯಾಗಿದೆ. ಗೌರವದ ಸಂಕೇತವಾದ ಹೂವಿನ ಹಾರವನ್ನು ಅಧಿಕಾರಿಗಳ ಮೇಲೆ ಹೇರಿ, ಅವರನ್ನು ಸಾರ್ವಜನಿಕವಾಗಿ ಲೇವಡಿ ಮಾಡುವ ಮತ್ತು ಮಾನಸಿಕವಾಗಿ ಕುಗ್ಗಿಸುವ ವಿಚಿತ್ರ ಮನಸ್ಥಿತಿಯನ್ನು ಕಾರ್ಯಕರ್ತರು ಪ್ರದರ್ಶಿಸುತ್ತಿದ್ದಾರೆ.



ಸರ್ಕಾರಿ ಕಚೇರಿಗಳಿಗೆ ಯಾವುದೇ ಪೂರ್ವಾನುಮತಿಯಿಲ್ಲದೆ ನುಗ್ಗಿ, ಅಲ್ಲಿನ ಶಿಸ್ತನ್ನು ಹಾಳುಗೆಡವಿ, ಅಧಿಕಾರಿಗಳ ನೈತಿಕ ಸ್ಥೈರ್ಯವನ್ನು ಕುಂದಿಸುವ ಇಂತಹ ಕೃತ್ಯಗಳು ಸಾಂಸ್ಕೃತಿಕ ಅಶಿಸ್ತಿನ ಪರಾಕಾಷ್ಠೆಯಾಗಿದೆ. ಈ ಅತಿರೇಕದ ವರ್ತನೆಗಳಿಗೆ ಕಡಿವಾಣ ಹಾಕಲೇಬೇಕಾದ ಅನಿವಾರ್ಯತೆಯನ್ನು ಮನಗಂಡೇ ಡಿಜಿಐಜಿಪಿ ಈ ಆದೇಶ ನೀಡಿದ್ದಾರೆ.

'ಸರ್ಕಾರಿ ನೌಕರರಿಗೆ ಕಿರುಕುಳ ನೀಡಿದರೆ ಕಾನೂನು ಕ್ರಮ ಅನಿವಾರ್ಯ' ಈ ಸಂದೇಶದ ಮೂಲಕ ಪೊಲೀಸ್ ಇಲಾಖೆಯು ತನ್ನ ಸಿಬ್ಬಂದಿ ಹಾಗೂ ಇತರೆ ಸರ್ಕಾರಿ ನೌಕರರ ರಕ್ಷಣೆಗೆ ದೃಢವಾಗಿ ನಿಂತಿದೆ. ಸಂವಿಧಾನ ಬದ್ಧವಾಗಿ ಕೆಲಸ ಮಾಡುವ ಅಧಿಕಾರಿಗೆ ಸಮಾಜದ ಸಣ್ಣ ಗುಂಪೊಂದು ಅಡ್ಡಿಪಡಿಸುವುದನ್ನು ತಡೆಗಟ್ಟುವುದು ಈ ಆದೇಶದ ಮೂಲ ಉದ್ದೇಶವಾಗಿದೆ.

ರಾಜ್ಯವ್ಯಾಪಿ ಈ ಕಟ್ಟುನಿಟ್ಟಿನ ಆದೇಶ ಹೊರಬರಲು ಚನ್ನಪಟ್ಟಣದಲ್ಲಿ ನಡೆದ ಘಟನೆಯೇ ಮೂಲ ಪ್ರೇರಣೆಯಾಗಿದೆ. ಚನ್ನಪಟ್ಟಣದ ಟೌನ್ ಇನ್ಸ್‌ಪೆಕ್ಟರ್ ರವಿಕಿರಣ್ ಅವರೊಂದಿಗೆ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ತೋರಿದ ಉದ್ಧಟತನವು ಪೊಲೀಸ್ ಇಲಾಖೆಯ ಸಂಯಮದ ಕಟ್ಟೆ ಒಡೆಯುವಂತೆ ಮಾಡಿತು. 'ಒನ್ ವೇ' ರಸ್ತೆಯಲ್ಲಿ ಅಕ್ರಮವಾಗಿ ಬಸ್ ಚಲಾಯಿಸಿ ಸಂಚಾರ ನಿಯಮವನ್ನು ಗಾಳಿಗೆ ತೂರಿದ್ದನ್ನು ಪೊಲೀಸರು ಪ್ರಶ್ನಿಸಿದಾಗ, ತಮ್ಮ ತಪ್ಪನ್ನು ಒಪ್ಪುವ ಬದಲು ಅಧಿಕಾರಿಯ ಮೇಲೆಯೇ ದರ್ಪ ತೋರಿ, ವಾಗ್ವಾದಕ್ಕಿಳಿದಿದ್ದು ಇಡೀ ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದಿದೆ. ಈ ಘಟನೆಯ ಬಗ್ಗೆ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸಲ್ಲಿಸಿದ ಸವಿಸ್ತಾರ ವರದಿಯು, ಈ ಕಾರ್ಯಕರ್ತರ ನಡವಳಿಕೆಯು ಕೇವಲ ಆಕಸ್ಮಿಕವಲ್ಲ, ಬದಲಿಗೆ ಇದೊಂದು ನಿರಂತರ ಮಾದರಿಯಾಗಿದೆ ಎಂಬ ಸತ್ಯವನ್ನು ತೆರೆದಿಟ್ಟಿತು. ಈ ವರದಿಯ ಆಧಾರದ ಮೇಲೆಯೇ ಡಿಜಿಐಜಿಪಿ ಅವರು ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಈ ಕಟ್ಟುನಿಟ್ಟಿನ ಆದೇಶವನ್ನು ಹೊರಡಿಸಿದ್ದಾರೆ.



ಪ್ರಜಾಪ್ರಭುತ್ವದ ಯಶಸ್ಸು ಸತ್ಪ್ರಜೆಗಳ ಜವಾಬ್ದಾರಿಯುತ ನಡವಳಿಕೆಯಲ್ಲಿದೆ. ವ್ಯವಸ್ಥೆಯನ್ನು ಪ್ರಶ್ನಿಸುವುದು ನಾಗರಿಕನ ಹಕ್ಕು, ಆದರೆ ಆ ಪ್ರಶ್ನೆಗಳು ಕಾಯ್ದೆಯ ಚೌಕಟ್ಟಿನಲ್ಲಿದ್ದಾಗ ಮಾತ್ರ ಅದಕ್ಕೆ ನೈತಿಕ ಬಲ ಸಿಗುತ್ತದೆ. ಸುಧಾರಣೆಯ ಹೆಸರಿನಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವುದು ಅಥವಾ ಅಧಿಕಾರಿಯ ಮೇಲೆ ಒತ್ತಡ ಹೇರುವುದು ಅಂತಿಮವಾಗಿ ಅರಾಜಕತೆಗೆ ದಾರಿಯಾಗುತ್ತದೆ.

ಈ ಇಡೀ ಬೆಳವಣಿಗೆಯು ನಮ್ಮ ಮುಂದೆ ಒಂದು ಗಂಭೀರವಾದ ಪ್ರಶ್ನೆಯನ್ನು ಇಡುತ್ತದೆ: 'ನಾವು ಸಮಾಜದ ಸುಧಾರಣೆ ಬಯಸುವಾಗ, ನಾವೇ ಕಾನೂನನ್ನು ಉಲ್ಲಂಘಿಸುವುದು ಎಷ್ಟು ಸರಿ?' ನೈತಿಕ ಹೊಣೆಗಾರಿಕೆ ಇಲ್ಲದ ಹೋರಾಟವು ಸಮಾಜಕ್ಕೆ ಎಂದಿಗೂ ಹಿತಕರವಲ್ಲ ಎಂಬುದು ನಮಗೆ ನೆನಪಿರಲಿ.....


-ಸಂ.

2 ☞

★ಜನರಲ್ ಬಿಪಿನ್ ರಾವತ್ (2021): ಭಾರತದ ಮೊದಲ ಸಿಡಿಎಸ್ ಜನರಲ್ ಬಿಪಿನ್ ರಾವತ್ ಅವರು ಡಿಸೆಂಬರ್ 8, 2021 ರಂದು ತಮಿಳುನಾಡಿನ ಕೂನೂರ್ ಬಳಿ ನಡೆದ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತರಾದರು.






★ದೋರ್ಜಿ ಖಂಡು (2011): ಅರುಣಾಚಲ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ದೋರ್ಜಿ ಖಂಡು ಅವರು ಏಪ್ರಿಲ್ 2011ರಲ್ಲಿ ತವಾಂಗ್‌ನಿಂದ ಇಟಾನಗರಕ್ಕೆ ಪ್ರಯಾಣಿಸುತ್ತಿದ್ದಾಗ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತರಾದರು.

★ ವೈ.ಎಸ್. ರಾಜಶೇಖರ ರೆಡ್ಡಿ (2009): ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ವೈ.ಎಸ್. ಆರ್ ಅವರು ಸೆಪ್ಟೆಂಬರ್ 2, 2009 ರಂದು ನಲ್ಲಮಲ ಅರಣ್ಯ ಪ್ರದೇಶದಲ್ಲಿ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಸಾವನ್ನಪ್ಪಿದರು.

★ ಓ.ಪಿ. ಜಿಂದಾಲ್ ಮತ್ತು ಸುರೇಂದ್ರ ಸಿಂಗ್ (2005): ಹರಿಯಾಣದ ಮಂತ್ರಿಗಳಾಗಿದ್ದ ಇವರು ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ಸಂಭವಿಸಿದ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟರು.

★ಸೌಂದರ್ಯ (2004): ಕನ್ನಡದ ಖ್ಯಾತ ನಟಿ ಮತ್ತು ಬಿಜೆಪಿ ನಾಯಕಿಯಾಗಿದ್ದ ಸೌಂದರ್ಯ ಅವರು ಚುನಾವಣಾ ಪ್ರಚಾರಕ್ಕಾಗಿ ಪ್ರಯಾಣಿಸುತ್ತಿದ್ದಾಗ ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದ ಬಳಿ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತರಾದರು.




★ ಜಿ.ಎಂ.ಸಿ. ಬಾಲಯೋಗಿ (2002): ಲೋಕಸಭೆಯ ಸ್ಪೀಕರ್ ಆಗಿದ್ದ ಬಾಲಯೋಗಿ ಅವರು ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯಲ್ಲಿ ನಡೆದ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತರಾದರು.

★ ಮಾಧವರಾವ್ ಸಿಂಧಿಯಾ (2001): ಕಾಂಗ್ರೆಸ್ ಹಿರಿಯ ನಾಯಕ ಸಿಂಧಿಯಾ ಅವರು ಉತ್ತರ ಪ್ರದೇಶದ ಮೈನ್‌ಪುರಿ ಜಿಲ್ಲೆಯಲ್ಲಿ ವಿಮಾನ ಅಪಘಾತಕ್ಕೀಡಾಗಿ ಮೃತಪಟ್ಟರು.

★ ಸಂಜಯ್ ಗಾಂಧಿ (1980): ಇಂದಿರಾ ಗಾಂಧಿಯವರ ಪುತ್ರ ಸಂಜಯ್ ಗಾಂಧಿ ಅವರು ದೆಹಲಿಯ ಸಫ್ದರ್‌ಜಂಗ್ ವಿಮಾನ ನಿಲ್ದಾಣದ ಬಳಿ ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದರು.

★ ನೇತಾಜಿ ಸುಭಾಷ್ ಚಂದ್ರ ಬೋಸ್ (1945): ಭರತಖಂಡದ ಯುವಕರ ಕಣ್ಮಣಿ ಸ್ವಾತಂತ್ರ್ಯ ಸೇನಾನಿ ಸುಭಾಷ್ ಚಂದ್ರ ಬೋಸ್ ರವರು ತೈವಾನ್‌ನಲ್ಲಿ ನಡೆದ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾರೆ ಎಂದು ದಾಖಲೆಗಳು ಹೇಳುತ್ತವೆ. ☯

# ದಕ್ಷಿಣದ ದಂಡಯಾತ್ರೆ ಆರಂಭಿಸಿದ ಮೋದಿ ಎಚ್ಚೆತ್ತುಕೊಳ್ಳದಿದ್ದರೆ ಕಾಂಗ್ರೆಸ್‌ಗೆ ಉಳಿಗಾಲವಿಲ್ಲ!

**ರಾಜಕೀಯ ನಾಯಕರಿಗೆ ಅದರಲ್ಲೂ ರಾಷ್ಟ್ರೀಯ ಪಕ್ಷಗಳ ಸಾರಥ್ಯ ವಹಿಸಿದವರಿಗಂತೂ ಪ್ರತಿದಿನವೂ ಹೋರಾಟವೇ ಏಕೆಂದರೆ ವರ್ಷದಲ್ಲಿ ಒಂದಲ್ಲ ಒಂದು ಕಡೆ ಚುನಾವಣೆಗಳು ನಡೆಯುತ್ತಲೇ ಇರುವುದರಿಂದ ಪಕ್ಷದ ಗೆಲುವಿಗೆ ಬೇಕಾದ ಸಿದ್ಧತೆಗಳನ್ನು ಮಾಡಲೇ ಬೇಕಾದ ಅನಿವಾರ್ಯತೆ ಇದ್ದೇ ಇರುತ್ತದೆ. ಇವತ್ತು ಚುನಾವಣೆ ಎನ್ನುವುದು ಬರೀ ಚುನಾವಣೆಯಾಗಿ ಉಳಿದಿಲ್ಲ. ಅದೊಂದು ರೀತಿಯ ಯುದ್ಧದಂತೆಯೇ ಭಾಸವಾಗುತ್ತಿದೆ. ಹೀಗಾಗಿ ಚುನಾವಣಾ ಸಮರ ಗೆಲ್ಲಬೇಕಾದರೆ ಹೋರಾಟ ಮತ್ತು ತಂತ್ರಗಳನ್ನು ಮಾಡಬೇಕಾಗುತ್ತದೆ.**



ವಿಶ್ವದಲ್ಲೇ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದಲ್ಲಿ ಯಾರು ಬೇಕಾದರೂ ಪ್ರಧಾನಿಯಾಗಬಹುದು ಎಂಬುದನ್ನು ಈಗಾಗಲೇ ತೋರಿಸಿಕೊಟ್ಟಿದೆ. ಇದು ಇಲ್ಲಿನ ಪ್ರಜಾಪ್ರಭುತ್ವಕ್ಕೆ ಇರುವ ಶಕ್ತಿಯಾಗಿದೆ. ಕುಟುಂಬ ರಾಜಕಾರಣ ಮೇಳೈಸಿದ್ದರೂ ಬದಲಾದ ಕಾಲದಲ್ಲಿ ಇಲ್ಲಿನ ಮತದಾರರು ಅದಕ್ಕೊಂದು ಇತಿಶ್ರೀ ಹಾಡಿದ್ದನ್ನು ರಾಜಕೀಯ ಇತಿಹಾಸ ನಮಗೆ ತೆರೆದಿಡುತ್ತದೆ. ಎಲ್ಲದಕ್ಕೂ ಒಂದು ಅಂತ್ಯ ಇದ್ದೇ ಇರುತ್ತದೆ. ಹೀಗಾಗಿ ಕೋಟೆ ಕಟ್ಟಿ ಮೆರೆದವರು ಬದಲಾದ ಕಾಲಘಟ್ಟದಲ್ಲಿ ತೆರೆಮರೆಗೆ ಸರಿದಿದ್ದಾರೆ.

ಸ್ವಾತಂತ್ರ್ಯ ನಂತರ ಇಡೀ ದೇಶದಲ್ಲಿ ತನ್ನ ಪ್ರಾಬಲ್ಯ ಸಾಧಿಸುವ ಮೂಲಕ ನೆಹರು ಕುಟುಂಬದ ಹಿಡಿತದಲ್ಲಿಯೇ ಮುನ್ನಡೆಯುತ್ತಿರುವ ಕಾಂಗ್ರೆಸ್‌ನ ಪರಿಸ್ಥಿತಿ ಇವತ್ತು ಏನಾಗಿದೆ ಎಂಬುದು ನಮ್ಮ ಕಣ್ಣಮುಂದೆಯೇ ಇದೆ. ನೆಹರು ಕುಟುಂಬದ ಹಿಡಿತದಿಂದ ಬಿಡಿಸಿಕೊಂಡು ಈಚೆಗೆ ಬರಲಾರದೆ, ಹೈಕಮಾಂಡ್ ಎಂದರೆ ನೆಹರು ಕುಟುಂಬದ ಕುಡಿಗಳು ಎಂಬಂತಾಗಿದ್ದು, ಇದರಿಂದಾಗಿ ಆ ಕುಟುಂಬದಾಚೆಗೆ ಒಬ್ಬ ಪ್ರಭಾವಿ ನಾಯಕ ಹುಟ್ಟಿಕೊಳ್ಳಲೇ ಇಲ್ಲ ಎಂಬುದನ್ನು ತಳ್ಳಿಹಾಕಲಾಗದು.

ಇವತ್ತು ಕಾಂಗ್ರೆಸ್‌ನ ಪ್ರಮುಖ ನಾಯಕನಾಗಿ



ಪಕ್ಷದ ಹಿಡಿತವನ್ನು ತನ್ನಲ್ಲಿಟ್ಟುಕೊಂಡಿರುವ ರಾಹುಲ್ ಗಾಂಧಿ ಚುನಾವಣಾ ತಂತ್ರಗಳನ್ನು ಬಳಸುವಲ್ಲಿ ಮತ್ತು ಮತದಾರರ ಮನಗೆಲ್ಲುವಲ್ಲಿ ವಿಫಲರಾಗಿದ್ದಾರೆ. ಇದಕ್ಕೆ ಲೋಕಸಭಾ ಚುನಾವಣೆಯ ನಂತರ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿರುವುದೇ ಪ್ರಮುಖ ಕಾರಣವಾಗಿದೆ. ಇನ್ನು ಚುನಾವಣೆಗಳನ್ನು ತಮ್ಮದೇ ನೇತೃತ್ವದಲ್ಲಿ ನಡೆಸುವಷ್ಟು ಸಬಲರಾಗಿರುವ ನಾಯಕರು ಕಾಂಗ್ರೆಸ್‌ನಲ್ಲಿ ಇದ್ದರೂ ಅವರಿಗೆ ಯಾವುದೇ ರೀತಿಯ ಅಧಿಕಾರ ನೀಡದ ಕಾರಣದಿಂದಾಗಿ ಅವರು ಎಲೆ ಮರೆಯ ಕಾಯಿಯಂತೆ ಉಳಿದು ಹೋಗಿದ್ದಾರೆ.

ರಾಹುಲ್ ಗಾಂಧಿ ಅವರು ಚುನಾವಣೆಯ ಸಂದರ್ಭದಲ್ಲಿ ಯಾವುದೇ ರೀತಿಯ ತಂತ್ರಗಳನ್ನು ಮಾಡಿದರೂ ಅದಕ್ಕೆ ಪ್ರತಿತಂತ್ರಗಳನ್ನು ಮೋದಿ ಮತ್ತು ಅಮಿತ್ ಶಾ ಜೋಡಿ ಮಾಡುತ್ತಿದೆ. ಚುನಾವಣೆ ಎನ್ನುವುದು ಬರೀ ಸಮಾವೇಶ ನಡೆಸುವುದು, ಪಾದಯಾತ್ರೆ ತೆರಳುವುದು, ಯಾವುದೋ ಒಂದು ವಿಚಾರವನ್ನಿಟ್ಟುಕೊಂಡು ಅದನ್ನೇ ಹೇಳಿಕೊಂಡು ಓಡಾಡುವುದಲ್ಲ. ಅದರಾಚೆಗೂ ಪಕ್ಷದ ಪ್ರತಿ ನಾಯಕನಿಗೂ ಕೆಲಸಕೊಟ್ಟು ಅವನನ್ನು ಫೀಲ್ಡ್‌ಗೆ ಇಳಿಸುವುದಾಗಿದೆ. ಇಷ್ಟೇ ಇಲ್ಲದೆ ಪಕ್ಷದಲ್ಲಿ ಕಾರ್ಯಕರ್ತರನ್ನು ಹುಟ್ಟು ಹಾಕುವ ಕೆಲಸ ಮಾಡಬೇಕಾಗಿದೆ. ಕಾರ್ಯಕರ್ತರೇ ಪಕ್ಷದ ಅಡಿಪಾಯವಾಗಿರುವುದರಿಂದ ಅವರು ತಳಮಟ್ಟದಲ್ಲಿ ಕೆಲಸ ಮಾಡದೆ ಹೋದರೆ ಯಾವುದೇ ಪಕ್ಷವಾಗಲಿ ಬಲಿಷ್ಠವಾಗಿ ಬೆಳೆಯಲು ಸಾಧ್ಯವಾಗುವುದಿಲ್ಲ.

ನಿಜ ಹೇಳಬೇಕೆಂದರೆ ಇವತ್ತು ಕಾಂಗ್ರೆಸ್ ಬಹುತೇಕ ಕಡೆಗಳಲ್ಲಿ ಕಾರ್ಯಕರ್ತರನ್ನು ಕಳೆದು ಕೊಂಡಿದೆ. ರಾಹುಲ್ ಗಾಂಧಿ ನಡೆಸುವ ಸಮಾವೇಶಗಳಿಗೆ ತಳಮಟ್ಟದ ನಾಯಕರು ಹಣ ನೀಡಿಯೋ, ದುಂಬಾಲು ಬಿದ್ದೋ ಒಂದಷ್ಟು ಜನರನ್ನು ಸೇರಿಸುತ್ತಾರೆ. ಹೀಗಾಗಿ ಮೇಲ್ನೋಟಕ್ಕೆ ಸಮಾವೇಶಗಳು ಯಶಸ್ವಿಯಾಗುತ್ತವೆ. ಆದರೆ ಅವು ಮತಗಳಾಗಿ ಪರಿವರ್ತನೆಯಾಗದ ಕಾರಣದಿಂದಾಗಿ ಕಾಂಗ್ರೆಸ್ ಸೋಲು ಕಾಣುತ್ತಿದೆ. ಇನ್ನು ಕಾಂಗ್ರೆಸ್‌ನಲ್ಲಿ ರಾಹುಲ್ ಗಾಂಧಿಗೆ ರಾಜಕೀಯವಾಗಿ ಸಲಹೆ ನೀಡುವ

✍ ಬಿ.ಎಂ. ಲವಕುಮಾರ್


ಮುಖಂಡರು ಇಲ್ಲವೋ? ಅಥವಾ ಮುಖಂಡರು ನೀಡುವ ಸಲಹೆಯನ್ನು ಅವರು ಸ್ವೀಕರಿಸುತ್ತಿಲ್ಲವೋ? ಗೊತ್ತಿಲ್ಲ.

ರಾಹುಲ್ ಗಾಂಧಿ ಎಲ್ಲಿ ಸೋಲುತ್ತಿದ್ದಾರೆ ಎಂದರೆ ಅವರು ಒಮ್ಮೆ ಸೋತ ಕಡೆಗಳಲ್ಲಿ ಮತ್ತೆ ಗೆಲ್ಲಬೇಕೆಂದು ಯೋಚಿಸುವುದೇ ಇಲ್ಲ. ಸೋತ ರಾಜ್ಯಗಳ ಕಡೆಗೆ ಅವರು ತಲೆಹಾಕುವುದೇ ಇಲ್ಲ. ಸೋತಲ್ಲೇ ಮತ್ತೆ ಗೆಲುವು ಪಡೆಯಬೇಕೆಂಬ ಹಠ ಅವರಲ್ಲಿ ಇಲ್ಲವೇ ಇಲ್ಲ. ಹೀಗಾಗಿ



ಬಹುತೇಕ ರಾಜ್ಯಗಳಲ್ಲಿ ಅವರು ಪ್ರಾದೇಶಿಕ ಪಕ್ಷಗಳ ಮುಂದೆ ಮಂಡಿಯೂರುವಂತಾಗಿದೆ. ಇನ್ನು ಬಿಜೆಪಿಯನ್ನು ಸೋಲಿಸಲೇ ಬೇಕೆಂಬ ಕಾರಣಕ್ಕಾಗಿ ಸ್ಥಳೀಯ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ರಾಷ್ಟ್ರೀಯ ಪಕ್ಷದ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ.

ಹಾಗೆ ನೋಡಿದರೆ ದೇಶದ ಎಲ್ಲ ರಾಜ್ಯಗಳಲ್ಲಿಯೂ ಕಾಂಗ್ರೆಸ್ ಆಡಳಿತ ನಡೆಸಿದೆ. ಆದರೆ ಅದೇ ರಾಜ್ಯಗಳಲ್ಲಿ ಒಂದೇ ಒಂದು ಸ್ಥಾನವನ್ನು ಗೆಲ್ಲಲು ಸಾಧ್ಯವಾಗದ ಪರಿಸ್ಥಿತಿಗೆ ಬಂದು ನಿಂತಿದೆ. ಬಹುತೇಕ ರಾಜ್ಯಗಳಲ್ಲಿ ಅಲ್ಲಿನ ಪ್ರಾದೇಶಿಕ ಪಕ್ಷಗಳನ್ನು ಎದುರಿಸಲು ಸಾಧ್ಯವಾಗದ ಸ್ಥಿತಿಗೆ ತಲುಪಿದೆ. ಹೀಗಿದ್ದರೂ ರಾಹುಲ್ ಗಾಂಧಿಗಾಗಲೀ, ಕಾಂಗ್ರೆಸ್ ನಾಯಕರಾಗಲೀ ತಳಮಟ್ಟದಿಂದ ಪಕ್ಷವನ್ನು ಕಟ್ಟಿ ನಿಲ್ಲಿಸಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳದಿರುವುದು ಬೇಸರದ ಸಂಗತಿಯಾಗಿದೆ. ಕೇವಲ ಟೀಕೆ, ಟಿಪ್ಪಣಿಗಳನ್ನು ಮಾಡುವುದರಿಂದ ಗೆಲ್ಲಬಹುದು ಎಂಬುದು ಮೂರ್ಖತನದ ಪರಮಾವಧಿ.



ಕಾಂಗ್ರೆಸ್ ಕೇವಲ ಮೂರು ರಾಜ್ಯಗಳಲ್ಲಿ ಆಡಳಿತದಲ್ಲಿದೆ. ಉಳಿದಂತೆ ಹೆಚ್ಚಿನ ರಾಜ್ಯಗಳಲ್ಲಿ ಬಿಜೆಪಿ ಪಾರುಪತ್ಯೆ ಸಾಧಿಸಿದೆ. ಆದರೆ ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಕರ್ನಾಟಕ ಹೊರತು ಪಡಿಸಿದರೆ ಬೇರೆ ರಾಜ್ಯಗಳಲ್ಲಿ ಅಸ್ತಿತ್ವವೇ ಇಲ್ಲದಾಗಿದೆ. ಅಲ್ಲಿ ಏನೇ ಲಾಗ ಹೊಡೆದರೂ ಒಂದೇ ಒಂದು ಸ್ಥಾನವನ್ನು ಗೆಲ್ಲುವುದು ಕೂಡ ಕಷ್ಟವೇ. ಹೀಗಿದ್ದರೂ ಬಿಜೆಪಿ ಅಂತಹ ರಾಜ್ಯಗಳಲ್ಲಿ ಸುಮ್ಮನೆ ಕುಳಿತಿಲ್ಲ. ತನ್ನ ಪ್ರಯತ್ನವನ್ನು ಮಾಡುತ್ತಲೇ ಇದೆ.

ಮುಂದಿನ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆ ಹೊತ್ತಿಗೆ ಒಂದಷ್ಟು ಸ್ಥಾನದ ಜೊತೆಗೆ ಮತ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಕ್ಕೆ ಕೈ ಹಾಕಿದೆ. ಅಷ್ಟೇ ಅಲ್ಲದೆ ಸ್ಥಳೀಯ ಪ್ರಾದೇಶಿಕ ಪಕ್ಷಗಳ ಸಖ್ಯ ಬೆಳೆಸಿ ಆ ಮೂಲಕ ಆಡಳಿತರೂಢರಿಗೆ ಟಾಂಗ್ ನೀಡುವ ಪ್ರಯತ್ನ ಆರಂಭವಾಗಿದೆ. ಅದರ ಮುನ್ಸೂಚನೆಯನ್ನು ಪ್ರಧಾನಿ ನರೇಂದ್ರ ಮೋದಿ ಈಗಾಗಲೇ ತಮಿಳುನಾಡು, ಕೇರಳಕ್ಕೆ ಭೇಟಿ ನೀಡಿ ಸಮಾವೇಶ ನಡೆಸುವ ಮೂಲಕ ದಂಡಯಾತ್ರೆ ಆರಂಭಿಸಿದ್ದೇವೆ ಎನ್ನುವ ಸಂದೇಶ ರವಾನಿಸಿದ್ದಾರೆ.

ಇದೀಗ ಕೇರಳ ಮತ್ತು ತಮಿಳುನಾಡಿನಲ್ಲಿ ನಡೆಸಿರುವ ಸರಣಿ ರ್‍ಯಾಲಿಗಳು 2026ರ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಪೂರ್ವಸಿದ್ಧತೆ ಎಂದರೂ ತಪ್ಪಾಗಲಾರದು. ಜತೆಗೆ ನಾವು ರಾಜಕೀಯ ಸಮರಕ್ಕೆ ಈಗಿನಿಂದಲೇ ತಯಾರಾಗಿದ್ದೇವೆ ಎಂಬ ಸಂದೇಶ ಇದಾಗಿದೆ. ಮೋದಿ ಬಂದು ಹೋದ ಬೆನ್ನಲ್ಲೇ ಇನ್ನೊಂದಷ್ಟು ನಾಯಕರು ಇಲ್ಲಿಗೆ ಆಗಮಿಸುವ ಸಾಧ್ಯತೆಯಿದೆ. ಅದರಾಚೆಗೆ ರಾಜಕೀಯ ತಂತ್ರಗಳು ಶುರುವಾಗಲಿವೆ. ಈಗಾಗಲೇ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯಲ್ಲಿದ್ದ ಕೇರಳದಲ್ಲಿಯೂ ಕಮಲ ನಿಧಾನವಾಗಿ ಅರಳಲು ಆರಂಭಿಸಿದೆ.

ತಮಿಳುನಾಡನ್ನು ಟಾರ್ಗೆಟ್ ಮಾಡಿರುವ ಬಿಜೆಪಿ ಅಲ್ಲಿನ ಸ್ಟಾಲಿನ್ ನೇತೃತ್ವದ ಡಿಎಂಕೆಯನ್ನು ಕೆಳಗಿಳಿಸಿ ಎನ್‌ಡಿಎ ನೇತೃತ್ವದ ಸರ್ಕಾರ ರಚಿಸುವ ಕೆಲಸಕ್ಕೆ ಮುಂದಾಗಿದೆ. ಎಡಪ್ಪಾಡಿ ಕೆ. ಪಳನಿಸ್ವಾಮಿ ನೇತೃತ್ವದ ಎಐಎಡಿಎಂಕೆ, ಟಿಟಿವಿ ದಿನಕರನ್ ಅವರ ಎಎಂಎಂಕೆ ಮತ್ತು ಅನ್ಬುಮಣಿ ರಾಮದಾಸ್ ಅವರ ಪಿಎಂಕೆಯನ್ನು ಒಂದೇ ವೇದಿಕೆಗೆ ತಂದು ಎನ್‌ಡಿಎಯನ್ನು ಗಟ್ಟಿಗೊಳಿಸಿರುವುದು ರಾಜಕೀಯ ತಂತ್ರಗಳಲ್ಲಿ ಒಂದಾಗಿದೆ. ಇದು ಅಲ್ಲಿನ ಡಿಎಂಕೆಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ತಮಿಳುನಾಡಿನಲ್ಲಿ ಕಾಂಗ್ರೆಸ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಪರಿಸ್ಥಿತಿಯಲ್ಲಿದೆ. ಡಿಎಂಕೆ ಸಖ್ಯದಲ್ಲಿರುವ ಕಾಂಗ್ರೆಸ್ ಚುನಾವಣೆ ವೇಳೆ ಯಾವ ಪಾತ್ರ ವಹಿಸುತ್ತದೆ ಎಂಬುದನ್ನು ನೋಡಬೇಕಾಗಿದೆ. ಕಾಂಗ್ರೆಸ್ ಅಲ್ಲಿಂದ ಪಲಾಯನ ಮಾಡಿ ಐದಾರು ದಶಕಗಳೇ ಕಳೆದು ಹೋಗಿದೆ. ಮತ್ತೆ ಅಲ್ಲಿ ಅಸ್ತಿತ್ವ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾ ಗೊತ್ತಿಲ್ಲ. ಆದರೆ ಅಸ್ತಿತ್ವವೇ ಇಲ್ಲದ ತಮಿಳುನಾಡಿನಲ್ಲಿ ಬಿಜೆಪಿ ತನ್ನದೇ ಚಾಣಕ್ಯತನವನ್ನು ಪ್ರದರ್ಶಿಸುತ್ತಿದ್ದು ಚುನಾವಣೆಯ ಆಟ ಶುರುಮಾಡಿದೆ.

ಕೇರಳದಲ್ಲಿ ಲೋಕಸಭಾ ಚುನಾವಣೆ ವೇಳೆ ಎಡಪಕ್ಷ ಮತ್ತು ಕಾಂಗ್ರೆಸ್ ಒಂದೇ ವೇದಿಕೆಯಲ್ಲಿದ್ದರೂ ವಿಧಾನಸಭಾ ಚುನಾವಣೆಯಲ್ಲಿ ಎದುರಾಳಿಯಾಗಿ ಹೋರಾಟ ಮಾಡುತ್ತಿದ್ದಾರೆ. ಅಲ್ಲಿನ ಎಡಪಕ್ಷಗಳಿಗೆ ಕಾಂಗ್ರೆಸ್ ವಿರೋಧ ಪಕ್ಷವಾಗಿರುವುದರಿಂದ



ಭಯವಂತು ಇದ್ದೇ ಇದೆ. ಮತದಾರರು ಕಾಂಗ್ರೆಸ್ ಕಡೆಗೆ ಒಲವು ತೋರುತ್ತಿದ್ದಾರೆ. ಅಲ್ಲಿಯೂ ಬಿಜೆಪಿ ಅಸ್ತಿತ್ವಕ್ಕಾಗಿ ಹೋರಾಡುತ್ತಿದೆ. ಕೇರಳದಲ್ಲಿ ಬಿಜೆಪಿಯ ರಾಜಕೀಯ ಬೆಳವಣಿಗೆಯನ್ನು ನೋಡಿದ್ದೇ ಆದರೆ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಮತ ಹಂಚಿಕೆ ಶೇ. 20ರ ಸಮೀಪಕ್ಕೆ ತಲುಪಿದೆ. ಕೇವಲ ಒಂದು ಲೋಕಸಭಾ ಸ್ಥಾನ ಗೆದ್ದಿತ್ತು. ಇತ್ತೀಚೆಗಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಒಂದು ಪಾಲಿಕೆಯ ಅಧಿ ಕಾರ ಪಡೆದುಕೊಂಡಿದೆ.

ಇದೆಲ್ಲವನ್ನು ಗಮನಿಸಿದ್ದೇ ಆದರೆ ಬಿಜೆಪಿ ಸೋಲು ಮತ್ತು ಗೆಲುವಿನಾಚೆಗೂ ಪಕ್ಷದ ಸಂಘಟನೆಗಾಗಿ ಹೋರಾಟ ಮಾಡುತ್ತಲೇ ಬರುತ್ತಿದೆ. ಹೀಗಿರುವಾಗ ಕಾಂಗ್ರೆಸ್ ಈಗಿನಿಂದಲೇ ಎಚ್ಚೆತ್ತುಕೊಳ್ಳದೆ ಹೋದರೆ ರಾಜಕೀಯವಾಗಿ ಉಳಿಗಾಲವಿಲ್ಲ ಎನ್ನುವುದಂತು ಸತ್ಯ.

# ರೌಡಿಶೀಟರ್ ಕೋತಿ ಕೃಷ್ಣ ಜೈಲು ಸೇರಿದ್ಯಾಕೇ?!

ಬೆಂಗಳೂರು

✍ ಹೆಚ್.ಕೆ. ಮಹದೇವ್

ಕೃಷ್ಣಪ್ಪ ಅಲಿಯಾಸ್ ಕೋತಿ ಕೃಷ್ಣ ಆನೇಕಲ್ ತಾಲೂಕಿನ ಸೂರ್ಯ ಸಿಟಿ ಪೊಲೀಸ್ ಠಾಣೆಯ ರೌಡಿ ಪಟ್ಟಿಯಲ್ಲಿರುವ ಆಸಾಮಿ. ಇದೀಗ ತನ್ನ ಪಾಪದ ಕೊಡ ತುಂಬಿ ಪರಪ್ಪನ ಅಗ್ರಹಾರ ಜೈಲು ಸೇರಿ ಮುದ್ದೆ ಮುರಿಯುತ್ತಿದ್ದಾನೆ. ಸುಮಾರು ವರ್ಷಗಳ ಹಿಂದೆ ಇಸವಿ 2011ರಲ್ಲಿ ಆನೇಕಲ್ ಮರಸೂರು ಗೇಟ್ ಬಳಿ ಸೈಟ್ ಗಲಾಟೆಯಲ್ಲಿ ರೆಡ್ಡಿ ಸಂಘದ ಆನೇಕಲ್ ಅಧ್ಯಕ್ಷ ರಮೇಶ್ ಬಾಬುವನ್ನು ಪಿಸ್ತೂಲ್ ನಿಂದ ಶೂಟ್ ಮಾಡಿ ಸಾಯಿಸಿ, ಇದೇ ಕೋತಿ ಕೃಷ್ಣ ಕೇಂದ್ರ ಕಾರಾಗೃಹದಲ್ಲಿ ಮುದ್ದೆಮುರಿಯುವ ಮೊದಲೇ ಅನೇಕ ಬಾರಿ ಈತ ಹಲವಾರು ರಾಬರಿ ಕೇಸುಗಳಲ್ಲಿ, ಡೌಟ್ ಡಕಾಯಿತಿ ಪ್ರಕರಣಗಳಲ್ಲಿ ಜೈಲಿನ ಖಾಯಂ ಗಿರಾಕಿಯಾಗಿದ್ದವನು.


ರೌಡಿ ಶೀಟರ್ ಕೋತಿ ಕೃಷ್ಣ

ಜೈಲಿಗೆ 'ಸ್ಟೂಡೆಂಟ್' ಆಗಿ ಎಂಟ್ರಿಕೊಟ್ಟವನು ಅಲ್ಲಿದ್ದ ದೊಡ್ಡ ದೊಡ್ಡ ಡಾನ್‌ಗಳಿಗೆ ಶಿಷ್ಯನಾಗಿ ಗುರುತಿಸಿಕೊಂಡು ಸೀನಿಯರ್ ಸೆಲೆಬ್ರಿಟಿತರ ಫೀಲ್ ಮಾಡ್ಕೊಂಡು ರಿಲೀಸ್ ಆಗಿ ಹೊರಬಂದು ಆನೇಕಲ್ ನಲ್ಲಿ ರಿಯಲ್ ಎಸ್ಟೇಟ್ ನಲ್ಲಿ ದುಡ್ಡು ಕಾಸು ಮಾಡಿಕೊಂಡು ಬಿಳಿಚಪ್ಲಿ, ಬಿಳಿ ಶರ್ಟು, ಬಿಳಿ ಪ್ಯಾಂಟು ಧರಿಸಿಕೊಂಡು ಜನನಾಯಕನ ಪೋಸ್ ಕೊಡಲು ಶುರುಹಚ್ಚಿಕೊಂಡಿದ್ದ!

**ಶೋಕಿಗಾಗಿ ಪಿಸ್ತುಲ್ ಇಟ್ಟುಕೊಂಡಿದ್ದ....**

ಕಂಡೋರ ಭೂಮಿಗೆ ಕಾಂಪೌಂಡ್ ಹಾಕಿ ಕೈಗೆ ಬಂದ ಕಾಸಲ್ಲಿ ಒಂದಷ್ಟು ಹಣವನ್ನು ಅಂದಿನ ಆನೇಕಲ್ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿಗೆ ಕೊಟ್ಟು ಸೊಂಟದಲ್ಲಿ ಪಿಸ್ತುಲ್ ಇಟ್ಟುಕೊಂಡು (ಶೋಕಿಗಾಗಿ ಸೆಕ್ಯೂರಿಟಿ ಹೆಸರಲ್ಲಿ ಸಣ್ಣದೊಂದು ಪಿಸ್ತೂಲ್ ಕೊಂಡುಕೊಂಡಿದ್ದ) ರೆಡ್ಡಿ ಸಂಘದ ಜೆಡಿಎಸ್ ಲೀಡರ್ ಮರಸೂರು ರಮೇಶ್ ಬಾಬು ಕೊಲೆ ಕೇಸಿನ ನಂತರ ಕೋತಿ ಕೃಷ್ಣನ ಕೈಲಿದ್ದ ಪಿಸ್ತೂಲ್ ಕಿತ್ತುಕೊಂಡ ಪೊಲೀಸರು ಕೈಗೊಂದು ಸ್ಲೇಟ್ ಕೊಟ್ಟು ರೌಡಿ ಶೀಟ್ ಮಾಡಿದ್ದರು. ಜೈಲಿನಿಂದ ಹೊರ ಬಂದವನು ಪ್ರಾಣಭಯದಿಂದ ಮನೆಯೊಳಗೇ ಸೇರಿಕೊಂಡು, ಮನೆಯ ಸುತ್ತಾ ಕಬ್ಬಿಣದ ಗ್ರಿಲ್, ಸಿಸಿಟಿವಿ ಕ್ಯಾಮೆರಾ ಹಾಕಿಸಿಕೊಂಡು ಕುಳಿತಲ್ಲೇ ಮೊಬೈಲ್ ಮೂಲಕ ಧಮ್ಕಿ ಹಾಕುತ್ತಾ ರಿಯಲ್ ಎಸ್ಟೇಟ್ ಧಂಧೆಗಿಳಿದ!

**ಯಾ ಪೇರು ಸೊಲ್ ಮಾಣಾ!**

ಜೊತೆಗೆ ಬೌನ್ಸರ್ ಗಳನ್ನು ತುಂಬಿಕೊಂಡು ಓಡಾಡುತ್ತಾ ಸೋಷಿಯಲ್ ಮೀಡಿಯಾ ವೀಡಿಯೋಸ್ ಮಾಡಿ ಶೋಕಿ ಕೊಡುತ್ತಿದ್ದ. ಆನೇಕಲ್ ಪುಂಡ ಪುಡಿ ರೌಡಿಗಳಿಗೆ ಎಣ್ಣೆ, ದುಡ್ಡು ಕಾಸು ಕೊಟ್ಟು ಸಾಕಿದ. 'ಆನೇಕಲ್ ನಲ್ಲಿ ಒಂದು ದೊಡ್ಡ ವಿಕೇಟ್ ಹೊಡಿತೀವಿ ಗುರು!' ಎನ್ನುತ್ತಾ ಈತನಿಗೆ ಬಿಸ್ಕೆಟ್ ಹಾಕುತ್ತಾ ಖರ್ಚಿಗೆ ಕಾಸು ಕೀಳುತ್ತಿದ್ದ ಚುಲ್ಟುಪಲ್ಟು ಸಮಾಜ ಘಾತುಕರ ಕಾರುಗಳಿಗೆ ಸೆಕೆಂಡ್ಸ್ ಟಯರ್ ಹಾಕಿಸಿ 'ಯಾ ಪೇರು ಸೊಲ್ ಮಾಣಾ..!' ಎಂದು ಹೇಳುತ್ತಲೇ ಬ್ಯಾಕ್‌ನಲ್ಲಿ ಇದ್ದುಕೊಂಡೇ ಕ್ರೈಂ ಚಟುವಟಿಕೆ ನಡೆಸುತ್ತಿದ್ದಾನೆಂಬ ಆಪಾದನೆಗಳಿವೆ!

**ಡೂಪ್ಲಿಕೇಟ್ ವ್ಯಕ್ತಿಕೂರಿಸಿ ಅಗ್ರಿಮೆಂಟ್ ಕ್ಯಾನ್ಸಲ್!**


ಈಗ ದಲಿತ ಮುಖಂಡ ಕಲ್ಲಬಾಳು ಗ್ರಾಮ ಪಂಚಾಯತಿ ಸದಸ್ಯ ಕೋನಸಂದ್ರ ಮಂಜುನಾಥ್ ಎಂಬ ವ್ಯಕ್ತಿಗೇ ಆತನ ಜೊತೆಗೆ ಇದ್ದುಕೊಂಡು, ಆತನ ಬಳಿಯೇ ತಿಂದುಂಡು ದುಡ್ಡು ಕಿತ್ತುಕೊಂಡು ಆತನಿಗೆ ಮೋಸ ಮಾಡಿ ಮೊನ್ನೆ ಜೈಲಿಗೆ ಹೋಗಿದ್ದಾನೆ. ಕೋನಸಂದ್ರ ಮಂಜುಗೆ ಈ ಕೋತಿ ಕೃಷ್ಣ ತನ್ನ ಹೆಂಡತಿ ಮಂಗಳ ಹೆಸರಿನಲ್ಲಿದ್ದ ಮೇಡಹಳ್ಳಿ ಸರ್ವೆ ನಂ. 61ರ 02 ಎಕರೆ ಜಮೀನನ್ನು ಕೋನಸಂದ್ರ ಮಂಜುನಾಥ್ ಹೆಸರಿಗೆ 40 ಲಕ್ಷ ರೂಪಾಯಿ ಮುಂಗಡ ಪಡೆದು ಅಗ್ರಿಮೆಂಟ್ ರಿಜಿಸ್ಟರ್ ಮಾಡಿದ್ದವನು ನಂತರ ಒಳಗೊಳಗೇ ಅಗ್ರಿಮೆಂಟ್ ಹೋಲ್ಡರ್ ಕೋನಸಂದ್ರ ಮಂಜುಗೆ ಗೊತ್ತಿಲ್ಲದಂತೆ ಅಸಲಿ ವ್ಯಕ್ತಿ ಮಂಜುನಾಥನನ್ನೇ ಹೋಲುವ ಡೂಪ್ಲಿಕೇಟ್ ವ್ಯಕ್ತಿಯನ್ನು ಕೂರಿಸಿ ನೊಂದಣಿ ವಜಾಗೊಳಿಸಿದ್ದಾನೆ!

**ಡೆಕೋರೇಟರ್ ಗುರುರಾಜ್!**

ಕರಾರು ಕ್ರಯ ಪತ್ರದ ಮೂಲಕ ನೊಂದಣಿ ಮಾಡಿಕೊಟ್ಟಿದ್ದನ್ನು ಮರಳಿ ಆ ವ್ಯಕ್ತಿಯನ್ನೇ ಹೋಲುವ ಮತ್ತೋರ್ವ ವ್ಯಕ್ತಿಯನ್ನು ಉಪ ನೊಂದಣಾಧಿಕಾರಿಗಳ ಮುಂದೆ ಕುಳ್ಳರಿಸಿ ಸಹಿ, ಹೆಬ್ಬೆಟ್ಟು ಪೋಟೋ ನಕಲಿಸಿ ನೊಂದಣಿ ವಜಾಗೊಳಿಸಿ ವಂಚನೆ ಮಾಡಿರುವುದು ಮೆಲ್ನೋಟಕ್ಕೆ ಸಾಬೀತಾಗಿದೆ. ಮಂಜುನಾಥ್ ತನ್ನ ಜೊತೆಗಾರ ಕೃಷ್ಣಪ್ಪನನ್ನು ಆನೇಕಲ್ ನ್ಯಾಯಾಲಯದ ಮೂಲಕವೂ ಮಾರಾಟ ಕುರಿತು ಲೋಕಾದಾಲತ್ನಲ್ಲಿ ಮರಳಿ ಕೃಷ್ಣಪ್ಪನ ಕಡೆಯಿಂದ ಪ್ರಕರಣದ ಮೂಲಕ ಖಚಿತಪಡಿಸಿಕೊಂಡಿದ್ದರೂ ಕೂಡ ಅನಂತರ ಮರಸೂರು ಕೃಷ್ಣಪ್ಪ, ಮೂರು ತಿಂಗಳ ತರುವಾಯ ಮಂಜುನಾಥ್‌ರನ್ನೇ ಹೋಲುವ ಅತ್ತಿಬೆಲೆ ಆಟೋ ಚಾಲಕ ಹಾಗು ಹೂ ಡೆಕೋರೇಟರ್ ಗುರುರಾಜ್ ನನ್ನು ಕರೆತಂದು ಉಪ ನೊಂದಣಾಧಿ ಕಾರಿ ಕಚೇರಿಯಲ್ಲಿ ಇವರೇ ಮಂಜುನಾಥ್ ಎಂದು ನಂಬಿಸಿ ದಾಖಲಾತಿಗಳಲ್ಲಿನ ಮಂಜುನಾಥ್ ಸಹಿ, ಬೆರಳಚ್ಚು, ಮಂಜುನಾಥ್ ಭಾವಚಿತ್ರವನ್ನು ಹೊರಗಡೆ ನಕಲೀಕರಿಸಿ ವಂಚಿಸಿ ಕರಾರುಪತ್ರ ರದ್ದು ಮಾಡಿದ್ದಾರೆ. ಈ ಸಂಬಂಧ ಬೆಂಗಳೂರು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಪೊಲೀಸರಿಗೆ ಮಂಜುನಾಥ್ ದೂರು ನೀಡಿ ಪ್ರಕರಣ ದಾಖಲಿಸಿದ್ದರು.


ಎಸ್ಪಿ ಎಂ.ವಿ. ಚಂದ್ರಕಾಂತ್


ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್


KARNATAKA STATE POLICE

FIRST INFORMATION REPORT
(Under Section 173 Bharatiya Nagarik Suraksha Sanhita)

Before the Honourable Court of Prl. Civil Judge(Jr. Dn) & JMFC Court,Anekal, Bangalore Rural Dist.

1. District : Bengaluru Dist Circle/Sub Division : Anekal Sub Division PS : Anekal PS
Crime No : 0012/2026 FIR Date : 14/01/2026

2. Act & Section : THE BHARATIYA NYAYA SANHITA (BNS), 2023

3. (a) Occurrence of Offence Day : Saturday From Date : 06/09/2025 To Date : 06/09/2026
(b) Information received at the PS : 14/01/2026 18:40:00 Written/Oral : Written
(c) Reasons for Delay in reporting by the Complainant / Informant
(d) General Diary reference Entry No. & Time : 2., 18:40:00

4. (a) Place of occurrence with full address
Sub Registrar Office, Maza Road, Anekal Town, Anekal Town, Kasaba Hobli,Bengaluru Dist., Karnataka, 562106
(b) Distance from PS : 02 KM Towards West
(c) Village : NIRJA ROAD Beat Name : AKL TOWN BEAT 1 & 4
(d) If the place belongs to another jurisdiction,PS. Name :
District :


5. Complainant/Informant
(a) Name : Hithendra D Father's/Husband's Name : X

ಎಫ್‌ಐಆರ್ ಪ್ರತಿಗಳು

**ಅಧಿಕಾರಿಗಳ ಮೇಲೂ ಕೇಸ್!**

ಇದರನ್ವಯ ತನಿಖೆ ಕೈಗೊಂಡ ಡಿಸಿಆರ್‌ಇ ಪೊಲೀಸ್ ಅಧಿಕಾರಿಗಳು ಮರಸೂರು ಕೃಷ್ಣಪ್ಪನನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿದ್ದಾರೆ. ನಕಲಿ ಪೇಪರ್ ತಯಾರಿಕೆ, ಅಗ್ರಿಮೆಂಟ್ ಕ್ಯಾನ್ಸಲ್‌ನಲ್ಲಿ ಹಣ ಪಡೆದು ಸಹಕಾರ ನೀಡಿದ್ದಾರೆಂಬ ಆಪಾದನೆ ಮೇಲೆ ಆನೇಕಲ್ ಉಪ ನೊಂದಣಿ ಅಧಿಕಾರಿ ತಿಮ್ಮ ರೆಡ್ಡಿ, ಮ್ಯಾನೇಜರ್ ಹಿತೇಂದ್ರ, ಕ್ಲರ್ಕ್ ಸದಣ್ಣ ವಿಜಯಲಕ್ಷ್ಮಿ ಮೇಲೂ ದೂರು ದಾಖಲಾಗಿದೆ! ಸರಿಯಾಗಿ ಜಮೀನು ಪತ್ರ ಚೆಕ್ ಮಾಡದೇ, ಅಕ್ರಮದಲ್ಲಿ ಭಾಗಿಯಾಗಿ ಜಮೀನು ಪರ್ಚೆಸ್ ಮಾಡಿರುವ ಮಂಟಪ ಪಂಚಾಯತಿಯ ವಾಜರಳ್ಳಿ ಅಜಯ್ ಕರಿಯಪ್ಪನಹಳ್ಳಿ ವರುಣ್ ಮೇಲೆ ವಂಚನೆ, ಅಟ್ರಾಸಿಟಿ ಕೇಸು ದಾಖಲಾಗಿವೆ. ತಮ್ಮ ಥಪ್ಪು ಮುಚ್ಚಿಟ್ಟು ಕೊಳ್ಳಲು ಈ ಪ್ರಕರಣ ನಡೆದ ಎಷ್ಟೋ ತಿಂಗಳ ನಂತರ ತಮ್ಮ ಮೇಲೆ ಕಂಪ್ಲೇಂಟ್ ದಾಖಲಾದ ನಂತರ ಆನೇಕಲ್ ಉಪ ನೊಂದಣಾಧಿಕಾರಿ ಕಚೇರಿಯ ಮೇನೇಜರ್ ಹಿತೇಂದ್ರ ಆನೇಕಲ್ ಠಾಣೆಯಲ್ಲಿ ದೂರು ದಾಖಲಿಸಿ ನಡೆದ ವಂಚನೆ ಕುರಿತು, ಮಂಗಳ, ಕೃಷ್ಣಪ್ಪ, ಮತ್ತಿತರರ ವಿರುದ್ಧ ದೂರು ದಾಖಲಿಸಿ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ!


ಮೋಸ ಹೋದ ಮಂಜುನಾಥ್


ಡೂಪ್ಲಿಕೇಟ್ ಮಂಜುನಾಥ್

ಇದಲ್ಲವೇ ಡ್ರಾಮಾ ಅಂದ್ರೆ. ಭ್ರಷ್ಟಾಚಾರದ ಕೊಂಪೆಯಾಗಿರುವ, ಕೆಲವು ಕಾಂಗ್ರೆಸ್ ಮುಖಂಡರ ಕಮಿಷನ್ ಕಛೇರಿಯಾಗಿ ಪರಿವರ್ತನೆ ಆಗಿರುವ ಆನೇಕಲ್ ಸಬ್ ರಿಜಿಸ್ಟರ್ ಆಫೀಸಿನಲ್ಲಿ ಇಷ್ಟೆಲ್ಲ ನಡೆಯುತ್ತಿದ್ದರೂ ಹ್ಯಾಟ್ರಿಕ್ ಗುಂಗಿನಲ್ಲೆ ತೇಲುವ ಶಾಸಕ ಶಿವಣ್ಣ ಮಾತ್ರ ತನಗೇನೂ ಗೊತ್ತಿಲ್ಲವೆಂಬಂತೆ ತೆಪ್ಪಗಿದ್ದಾರೆ! 'ಕೆಲ ಪತ್ರಕರ್ತರ ಒತ್ತಾಯಕ್ಕೆ ಮಣಿದು ಈ ಕೋತಿಕೃಷ್ಣನಿಗೆ ಸಹಾಯ ಮಾಡಿ ಹಳ್ಳಕ್ಕೆ ಬಿದ್ವಿ' ಎನ್ನುತ್ತಿರುವ ನೊಂದಣಿ ಅಧಿಕಾರಿಗಳು, ಆನೇಕಲ್ ನ ಕೆಲ ಪತ್ರಕರ್ತರು, ಭ್ರಷ್ಟಾಚಾರ, ರೋಲ್ ಕಾಲ್‌ಗಳಲ್ಲಿ ಭಾಗಿಯಾಗುತ್ತಿರುವುದಕ್ಕೆ ಸಾಕ್ಷಿಯಾಗಿದ್ದಾರೆ!

**ರೋಲ್ ಕಾಲ್ ಪತ್ರಕರ್ತರು!!**

ಇತ್ತೀಚೆಗೆ ಆನೇಕಲ್ ಮೀಟರ್ ಬಡ್ಡಿ ಪಿಂಟೂನ ಗ್ಯಾಂಗ್ ಲಾಂಗ್ ಹಿಡಿದು ಮನೆಯೊಂದಕ್ಕೆ ನುಗ್ಗಿದ್ದ ಪ್ರಕರಣದಲ್ಲಿ 4ಲಕ್ಷ ಕಾಸು ಕೇಳಿದ್ದ ರೋಲ್ ಕಾಲ್ ಪತ್ರಕರ್ತರು ಕೊನೆಗೆ 70ಸಾವಿರಕ್ಕೆ ಸೆಟ್ಲ್‌ಮೆಂಟ್ ಮಾಡಿ ಕೊಂಡು ನ್ಯೂಸ್ ಕೈ ಬಿಟ್ಟು ರೌಡಿ ಪುಂಡ ಪೋಕರಿಗಳ ಕ್ರೈಂ ಚಟುವಟಿಕೆಗಳಿಗೆ ಜೈ ಎನ್ನುತ್ತಿರುವುದು ಮಾತ್ರ ತೀರಾ ಅಸಹ್ಯ.

**2012ಕ್ಕೆ ಬ್ಯಾಂಕ್ ಆರಂಭ! 2011ರಲ್ಲೇ ಸ್ಟಾಂಪ್ ಪೇಪರ್ ಪರ್ಚೆಸ್ ಮಾಡಿದ್ದ ಕೃಷ್ಣಪ್ಪ!!**

ಯಡವನಹಳ್ಳಿ ಗ್ರಾಮದ ಸರ್ವೆ ನಂ 63 ರ ಜಮೀನಿನ ವಿಷಯವೊಂದು ರೌಡಿಶೀಟರ್ ಕೋತಿ ಕೃಷ್ಣನ ಖತರ್ನಾಕ್ ವಂಚನೆ, ನಕಲಿ ಪೇಪರ್ ತಯಾರಿಕ ಜಾಲವನ್ನು ತೆರೆದಿಟ್ಟಿದೆ. ಸರ್ಜಾಪುರ ಶಂಭಯ್ಯ (ಸದ್ದಾಂ) ಗೆ ಕರಾರು ಕ್ರಯ ಪತ್ರ ಮಾಡಲು ಆನೇಕಲ್ ತಿಲಕ್ ಸರ್ಕಲ್ ನಲ್ಲಿರುವ ಚೌಡೇಶ್ವರಿ ದೇವಾಲಯ ಮುಂಭಾಗದ ಸನ್ ಸ್ಟಾರ್ ಕೋಆಪರೇಟಿವ್ ಸೊಸೈಟಿಯಲ್ಲಿ ಇಸ್ಟಾಂಪ್ ಪೇಪರ್ ನ್ನು 2011 ರಲ್ಲಿ ಖರೀದಿಸಿರುವ ಇದೇ ಕೋತಿ ಕೃಷ್ಣ, ಅದರಲ್ಲಿ ಮೊದಲ ಪಾರ್ಟಿ ಯಡವನಹಳ್ಳಿ ಕೆ. ವೆಂಕಟಸ್ವಾಮಿ ಬಿನ್ (ಜಮೀನುದಾರ) ಲೇಟ್ ಕರಗಪ್ಪ ಆಗಿದ್ದು ಸೆಕೆಂಡ್ ಪಾರ್ಟಿ ಸದ್ದಾಂ ಎಂದು ನಮೂದಿಸಿರುತ್ತಾರೆ! ಆದರೆ ಇಡೀ ಸ್ಟಾಂಪ್ ಪೇಪರ್ ಒಕ್ಕಣೆಗಳಲ್ಲಿ ಕೋತಿ ಕೃಷ್ಣ ಜಮೀನು ಅಗ್ರಿಮೆಂಟ್ ಮಾಡಿಕೊಂಡ ಹಾಗೆ ಕೆ. ವೆಂಕಟಸ್ವಾಮಿಯ ನಕಲಿ ಸಹಿ ಸೃಷ್ಟಿಸಿ ವಂಚನೆ ಎಸೆಗಿರುತ್ತಾನೆ! ಅಲ್ಲದೆ ಆ ಸ್ಟಾಂಪ್ ಪೇಪರ್ 2012-13ರಲ್ಲಿ ಪ್ರಾರಂಭಗೊಂಡ ಸಹಕಾರಿ ಬ್ಯಾಂಕಿಂದ 2011 ರಲ್ಲಿ ಭಾನುವಾರ ಪಡೆದಿರುವುದು ವಿಶೇಷವಾಗಿದೆ! ಇದು ಸಂಪೂರ್ಣ ಫೇಕ್ ಸ್ಟಾಂಪ್ ಪೇಪರ್ ಎಂದು ಮೇಲ್ನೋಟಕ್ಕೆ ಸಾಭೀತಾಗಿದೆ.

ಈ ಪ್ರಕರಣದಲ್ಲಿ ಮೋಸ ಹೋಗಿರುವ ಭೂಮಾಲೀಕ ಕೆ ವೆಂಕಟಸ್ವಾಮಿ ಆನೇಕಲ್ ಭಾಗದ ಹಿರಿಯ ದಲಿತ ಚಳವಳಿಯ ನಿಷ್ಟಾವಂತ ಹೋರಾಟಗಾರನಾಗಿದ್ದು ಮಕ್ಕಳಿರುವುದಿಲ್ಲವೆಂದು ಕೋತಿ ಕೃಷ್ಣ ಆತನನ್ನ ಯಾಮಾರಿಸಿ ಪೊಲೀಸರೊಡಗೂಡಿ ಜಮೀನು ಹೊಡೆಯಲು ಸಂಚು ರೂಪಿಸಿ ಕಾಂಪೌಂಡ್ ಹಾಕಿಸಿರುತ್ತಾನೆ. ಕೊನೆಗೆ ವೆಂಕಟಸ್ವಾಮಿ ನೆರವಿಗೆ ದಲಿತ ಸಂಘರ್ಷ ಸಮಿತಿ ಪರಿವರ್ತನಾ ವಾದ ಆನೇಕಲ್ ನಲ್ಲಿ ಮಾಧ್ಯಮ ಘೋಷ್ಠಿ ಕರೆದು ಈ ಕುರಿತು ದಾಖಲೆ ಸಮೇತ ಮಾಹಿತಿ ನೀಡಿದ್ದಲ್ಲದೆ ಅದು ಬಿತ್ತರವೂ ಆಗಿರುತ್ತದೆ. ಅದಾದ ನಂತರ ಅತ್ತಿಬೆಲೆ ಠಾಣೆಯಲ್ಲಿ ಈ ಕುರಿತು ರೌಡಿ ಕೋತಿ ಕೃಷ್ಣನ ಮೇಲೆ ಪ್ರಕರಣ ದಾಖಲಾಗಿದೆ.

**ಆನೇಕಲ್ ಪೊಲೀಸ್ ಕೈಕೊಟ್ರು...! ಡಿಸಿಆರ್‌ಇ ಪೊಲೀಸ್ ಕೈ ಹಿಡಿದ್ರು!!**

ಆನೇಕಲ್ ಪೊಲೀಸರು ಕೋತಿ ಕೃಷ್ಣನನ್ನು ಸಾಕಿ ಸಲಹುತ್ತಿರುವುದರಿಂದ ಆತನಿಗೆ ಶ್ರೀರಕ್ಷೆಯಾಗಿರುವುದು ಈ ಎಲ್ಲ ಅಪರಾಧಗಳ ಮಾಡಲು ಕುಮ್ಮಕ್ಕು ನೀಡುತ್ತಿರುವುದರಿಂದ ಆನೇಕಲ್ ಪೊಲೀಸರನ್ನು ನೆಚ್ಚಿಕೊಳ್ಳದೆ ಕೋನಸಂದ್ರ ಮಂಜುನಾಥ್ ಡಿಸಿಆರ್ ಇ ಬೆಂಗಳೂರು ಪೊಲೀಸರಿಗೆ ದೂರು ನೀಡಿ ನ್ಯಾಯ ಕೇಳಿದ್ದರಿದಲೆ ಇದೀಗ ಕೋತಿ ಕೃಷ್ಣ ಜೈಲಿನಲ್ಲಿದ್ದಾನೆ.

**ದಲಿತರ ಭೂಮಿ ಕಬಳಿಸಲು ಅಂಬೇಡ್ಕರ್ ಹೆಸರು ಬಳಕೆ!**

ಇದು ಒಂದು ಅಸಹ್ಯದ ಪರಮಾವಧಿ. ಇತ್ತೀಚಿಗೆ ರಾಜ್ಯದ ಹಲವು ಕಡೆ ಕೆಲವು ದುರುಳ ಭೂಗಳ್ಳರು, ಅಂಬೇಡ್ಕರ್ ತತ್ವ ಸಿದ್ಧಾಂತದ ವಿರೋಧಿ ಗಳು, ತಮ್ಮ ಬೇಳೆ ಬೇಯಿಸಿಕೊಳ್ಳಲು ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾಕ್ಟರ್ ಬಿ. ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳನ್ನು, ಹೆಸರನ್ನು ಬಳಸಿಕೊಂಡು

☞ 10

# ಕುಡಿದ ನಶೆಯಲ್ಲಿ ಸ್ನೇಹಿತರ ನಡುವೆ ಕಿತ್ತಾಟ ಜಾರ್ಖಂಡ್ ಯುವಕನ ಮರ್ಡರ್!

**ಲಿಕೋ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮೂವರು ಸ್ನೇಹಿತರು ಆಗಾಗ ಡ್ರಿಂಕ್ಸ್ ಪಾರ್ಟಿ ಮಾಡುತ್ತಿದ್ದರು. ಒಂದು ದಿನ ಪಾರ್ಟಿ ಮಾಡುವಾಗ ಕುಡಿದ ನಶೆಯಲ್ಲಿ ಯಾವುದೋ ಕ್ಷುಲ್ಲಕ ಕಾರಣಕ್ಕೆ ಸ್ನೇಹಿತರ ನಡುವೆ ಕಿತ್ತಾಟವಾಗಿ ಒಬ್ಬನಿಗೆ ಚಾಕು ಹಾಕಿದ್ದು ನಂತರ ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸುವಾಗ, ನಾನು ಹುಷಾರಾದ ಮೇಲೆ ನಿಮಗೂ ಚಾಕು ಹಾಕದೆ ಬಿಡೋದಿಲ್ಲವೆಂದು ಧಮಕಿ ಹಾಕಿದನು. ಇವನ ಮಾತಿನಿಂದ ಕೋಪಗೊಂಡ ಸ್ನೇಹಿತರು ಇವನನ್ನು ಬಿಡಬಾರದು ಮುಗಿಸಿಬಿಡಬೇಕೆಂದು, ಚಾಕುವಿನಿಂದ ಅವನ ಕತ್ತು ಕೊಯ್ದು, ಚರಂಡಿಗೆ ತಳ್ಳಿ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಸಾಯಿಸಿ ಕೊಲೆ ಬಗ್ಗೆ ವೇಮಗಲ್ ಪೊಲೀಸರಿಗೆ ಫೋನ್ ಮಾಡಿ ತಿಳಿಸಿ ನಂತರ ಠಾಣೆಗೆ ಬಂದು ಶರಣಾಗಿರುವ ಘಟನೆ ನಡೆದಿದೆ.**


ಪ್ರದೀಪ್ ಸಿಂಗ್ ಬದುಕಿದ್ದಾಗ


ಪ್ರಮುಖ ಆರೋಪಿ ಮನೋಜ್ ಒಡೆಯರ್


**ಕೋ**ಲಾರ ತಾಲ್ಲೂಕಿನ ನರಸಾಪುರ ಮತ್ತು ವೇಮಗಲ್‌ನ ಕೈಗಾರಿಕಾ ಪ್ರದೇಶದಲ್ಲಿ ನೂರಾರು ಕೈಗಾರಿಕೆಗಳು ಮತ್ತು ಕಂಪನಿಗಳು ಪ್ರಾರಂಭವಾಗಿದ್ದು, ಜಿಲ್ಲೆಯ ಸ್ಥಳೀಯರು ಸೇರಿದಂತೆ ರಾಜ್ಯ ಮತ್ತು ಹೊರ ರಾಜ್ಯಗಳಿಂದ ಸಾವಿರಾರು ಜನ ನಿರುದ್ಯೋಗಿ ಯುವಕ, ಯುವತಿಯರು ಬಂದು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ದೂರದ ಊರುಗಳಿಂದ ಕೆಲಸ ಹುಡುಕಿಕೊಂಡು ಬಂದವರಲ್ಲಿ ಜಾರ್ಖಂಡ್‌ನ ಪಲಮು ಜಿಲ್ಲೆಯ ಪೋಲ್ಪೋಲ್ ಗ್ರಾಮದ, ಮೋದಿನಿ ನಗರದ ವಾಸಿ ಕೂಲಿ ಕಾರ್ಮಿಕ ಉಪೇಂದ್ರ ಸಿಂಗ್ ಮತ್ತು ಮಮತಾಬಾಯಿ ದಂಪತಿಗಳಿಗೆ ಸಂದೀಪ್‌ಕುಮಾರ್ ಸಿಂಗ್ ಮತ್ತು ರಾಜೇಂದ್ರ ಕುಮಾರ್ ಸಿಂಗ್ ಎಂಬ ಇಬ್ಬರು ಗಂಡು ಮಕ್ಕಳಿದ್ದು, ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಉಪೇಂದ್ರ ಸಿಂಗ್ ತನ್ನ ಮಕ್ಕಳನ್ನು ಚೆನ್ನಾಗಿ ಓದಿಸಿ ಕೆಲಸಕ್ಕೆ ಸೇರಿಸಬೇಕೆಂಬ ಕನಸು ಕಂಡಿದ್ದರು. ಆದರೆ ವಿಧಿಯಾಟವೇ ಬೇರೆಯಾಗಿತ್ತು. ಮಕ್ಕಳು ಚಿಕ್ಕವರಿರುವಾಗಲೇ ಉಪೇಂದ್ರ ಸಿಂಗ್‌ರವರು ಅಕಾಲಿಕಾ ಮೃತ್ಯುವಿಗೆ ತುತ್ತಾಗಿ ಹೆಂಡತಿ, ಮಕ್ಕಳನ್ನು ಅನಾಥರನ್ನಾಗಿ ಮಾಡಿ ಹೊರಟುಬಿಟ್ಟರು. ಆಗ ಪತ್ನಿ ಮಮತಾಬಾಯಿಯು ಮನೆ ಮತ್ತು ಮಕ್ಕಳ ಜವಾಬ್ದಾರಿಯನ್ನು ವಹಿಸಿಕೊಂಡವರು ಕೂಲಿ ನಾಲಿ ಮಾಡಿ ಮಕ್ಕಳನ್ನು ಸಾಕಿ ಬೆಳೆಸಿದರು. ದೊಡ್ಡವರಾದ ಮಕ್ಕಳು ತಮ್ಮ ಓದಿಗೆ ತಕ್ಕ ಕೆಲಸಗಳು ಸಿಗದೆ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಇದರ ಜೊತೆಗೆ ಹೆಚ್ಚಿನ ಸಂಬಳ ಕೊಡುವಂತಹ ಕಂಪನಿಗಳಿಗೆ ಅರ್ಜಿಗಳನ್ನು ಹಾಕಿ ಹುಡುಕಾಟ ನಡೆಸುತ್ತಿದ್ದರು.


ಕೊಲೆಯಾದ ಪ್ರದೀಪ್ ಸಿಂಗ್

ಉತ್ತರ ಭಾರತದ ಕಡೆ ಯುವಕರಿಗೆ ಕೆಲಸವಿಲ್ಲದೆ ಕಮ್ಮಿ ಸಂಬಳಕ್ಕೆ ಕೆಲಸ ಮಾಡಲಾಗದೆ ಕರ್ನಾಟಕಕ್ಕೆ ಬಂದು ಜಾರ್ಖಂಡ್‌ನ ಎಷ್ಟೋ ಜನರು ಕೋಲಾರ ತಾಲ್ಲೂಕಿನ ನರಸಾಪುರ ಮತ್ತು ವೇಮಗಲ್‌ನ ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ವಿಚಾರವನ್ನು ತಿಳಿದುಕೊಂಡ ಸಂದೀಪ್‌ಕುಮಾರ್ ಸಿಂಗ್ ತಾಯಿ ಮತ್ತು ತಮ್ಮನಿಗೆ ತಿಳಿಸಿ ಕಳೆದ ಆರು ತಿಂಗಳ ಹಿಂದೆ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿರುವ ಲಿಕೋ ಕಂಪನಿಯಲ್ಲಿ ಕಾಂಟ್ರಾಕ್ಟ್ ಸೂಪರ್‌ವೈಸರ್ ಆಗಿ ಕೆಲಸಕ್ಕೆ ಸೇರಿಕೊಂಡು ಕುರುಗಲ್ ಗ್ರಾಮದ ಗೇಟ್ ಸಮೀಪ ಇರುವ ಮುನಿರಾಜುರವರ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದರು. ತಿಂಗಳ ಸಂಬಳದಲ್ಲಿ ಖರ್ಚಿಗಾಗಿ ಸ್ವಲ್ಪ ಹಣವನ್ನು ಇಟ್ಟುಕೊಂಡು ಉಳಿದ ಹಣವನ್ನು ತಾಯಿಗೆ ಕಳುಹಿಸಿ ಕೊಡುತ್ತಿದ್ದರು. ಇಲ್ಲಿ ಇನ್ನೊಬ್ಬ ಒರಿಸ್ಸಾದ ಬದಂಬ ತಾಲ್ಲೂಕಿನ ಬಂಗಾರಸಿಂಘಿ ಗದ್ರಾಮದ ವಾಸಿ ಪ್ರಣಬದ್ದ ಪ್ರದಾನ್‌ರವರ ಮಗ ಅನಿರುದ್ಧ್ ಪ್ರದಾನ್ ಕೆಲಸ ಹುಡುಕಿಕೊಂಡು ಕೋಲಾರಕ್ಕೆ ಬಂದು ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿರುವ ಲಿಕೋ ಕಂಪನಿಯಲ್ಲಿ ಸಾಮಾನ್ಯ ಕೂಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿ ಕುರುಗಲ್ ಗ್ರಾಮದ ಗೇಟ್‌ನಲ್ಲಿರುವ ನವೀನ್ ಎಂಬುವವರಿಗೆ ಸೇರಿರುವ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿರುತ್ತಾರೆ. ಇದೇ ರೀತಿ ಮತ್ತೊಬ್ಬನಾದ ಬೆಂಗಳೂರಿನ ನಾಗೇನಹಳ್ಳಿಯ ಸರ್ಕಾರಿ ಶಾಲೆಯ ಸಮೀಪ ವಾಸವಾಗಿರುವ ರಮೇಶ್ ಒಡೆಯರ್‌ರವರ ಮಗ ಮನೋಜ್ ಒಡೆಯರ್ ಇದೇ ಲಕೋ ಕಂಪನಿಯಲ್ಲಿ ಸೆಕ್ಯೂರಿಟಿ ಆಫೀಸರ್ ಆಗಿ ಕೆಲಸ ಮಾಡಿಕೊಂಡು ವೇಮಗಲ್ ಪಟ್ಟಣದ ಬಿ. ಬ್ಲಾಕ್‌ನ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿರುತ್ತಾರೆ. ಲಿಕೋ ಕಂಪನಿಯಲ್ಲಿ ಕೆಲಸ ಮಾಡುವಾಗ ಸೆಕ್ಯೂರಿಟಿ ಆಫೀಸರ್ ಮನೋಜ್ ಒಡೆಯರ್, ಸಂದೀಪ್‌ಕುಮಾರ್ ಸಿಂಗ್ ಹಾಗೂ ಅನಿರುದ್ಧ್ ಪ್ರದಾನ್‌ರವರಿಗೆ ಪರಿಚಯವಾಗಿ ದಿನ, ವಾರಗಳು ಕಳೆಯುತ್ತಿದ್ದಂತೆ ಮೂವರು ಸ್ನೇಹಿತರಾಗಿರುತ್ತಾರೆ.

**ಕೋಲಾರ**

✍ **ಕೋಲಾರ ಮಂಜು**


ಎಸ್ಪಿ ಬಿ. ನಿಖಿಲ್


ಎಎಸ್ಪಿ ರವಿಶಂಕರ್


ಡಿವೈಎಸ್ಪಿ ಎಂ.ಹೆಚ್. ನಾಗ್ತೆ


ಸಿಪಿಐ ಬಿ.ಪಿ. ಮಂಜು

ಲಿಕೋ ಕಂಪನಿಯಲ್ಲಿ ಕೆಲಸ ಮಾಡುವಾಗ ತಿಂಡಿ, ಊಟ ಕೊಡುತ್ತಾರೆ. ಕಂಪನಿಯಿಂದ ಹೊರಗೆ ಬಂದ ಮೇಲೆ ರೂಂನಲ್ಲಿಯೇ ತಿಂಡಿ, ಊಟ ಮಾಡಿಕೊಳ್ಳಬೇಕಾಗಿತ್ತು. ಸಮಯ ಸಿಕ್ಕಾಗ ಅಡಿಗೆ ಮಾಡಿಕೊಳ್ಳುತ್ತಿದ್ದರು. ಇಲ್ಲವಾದರೆ ಕುರುಗಲ್ ಗೇಟ್‌ನಲ್ಲಿರುವ ಹೋಟೆಲ್‌ವೊಂದರಲ್ಲಿ ಊಟ ಮಾಡಿ ರೂಂಗೆ ಹೋಗಿ ಮಲಗುತ್ತಿದ್ದರು. ಇವರು ಪದೇ ಪದೇ ಹೋಟೆಲ್‌ಗೆ ಬಂದು ತಿಂಡಿ, ಊಟ ತಿಂದು ಹೋಗುವಾಗ ಹೋಟೆಲ್‌ನಲ್ಲಿ ಅಡಿಗೆ ಕೆಲಸ ಮಾಡುತ್ತಿದ್ದ ಬಳ್ಳಾರಿ ತಾಲ್ಲೂಕಿನ ಬೂದಿಹಾಳ ಗ್ರಾಮದ ವಾಸಿ ಗೋಪಾಲ ರೆಡ್ಡಿರವರ ಮಗ ರಾಜಾ ರೆಡ್ಡಿ ಇವರೊಂದಿಗೆ ಪರಿಚಯವಾಗಿ ದಿನಗಳು ಕಳೆದಂತೆ ಸ್ನೇಹಿತನಾಗಿ ಇವರ ಗ್ರೂಪ್ ಸೇರಿಕೊಂಡನು. ಜೀಗಿರಿ ದೋಸ್ತುಗಳಾಗಿದ್ದ ಈ ನಾಲ್ಕು ಜನ ಸ್ನೇಹಿತರು ಅವರವರ ಕೆಲಸದಲ್ಲಿ ಬರುವ ಸಂಬಳದಲ್ಲಿದ್ದ ಸ್ವಲ್ಪ ಹಣವನ್ನು ಮನೆಯವರಿಗೆ ಕಳುಹಿಸಿಕೊಟ್ಟು ಉಳಿದ ಹಣದಲ್ಲಿ ಮೋಜು ಮಸ್ತಿ ಮಾಡಿಕೊಂಡು ಸುಖವಾಗಿ ಜೀವನ ಸಾಗಿಸುತ್ತಿದ್ದರು. ಕುಡಿತಕ್ಕೆ ದಾಸರಾಗಿರುವ ಈ ನಾಲ್ಕು ಜನ ಸ್ನೇಹಿತರು ವಾರದಲ್ಲಿ ಒಂದು-ಎರಡು ದಿನ ಬಾರ್‌ನಲ್ಲಿ ಅಥವಾ ಹೊರಗಡೆ ಎಲ್ಲಿಯಾದರೂ ಡ್ರಿಂಕ್ಸ್ ಪಾರ್ಟಿ ಮಾಡುತ್ತಿದ್ದರು. ಬಾರ್‌ನಲ್ಲಿ ಎಣ್ಣೆ ತೆಗೆದುಕೊಳ್ಳುವುದಲ್ಲದೆ ಅಲ್ಲಿಯೇ ಸ್ನಾಕ್ಸ್ ಮತ್ತು ಊಟ ತಿನ್ನುವುದು ಅಥವಾ ಪಾರ್ಸಲ್ ತೆಗೆದುಕೊಂಡು ಹೋಗುವುದರಿಂದ ಖರ್ಚು ಹೆಚ್ಚಾಗುತ್ತಿದ್ದು ಇನ್ನು ಮುಂದೆ ಎಣ್ಣೆ ಬಾಟಲಿಗಳನ್ನು ತೆಗೆದುಕೊಂಡು ಹೋಗಿ ಮನೆಗಳಲ್ಲಿಯೇ ಪಾರ್ಟಿ ಮಾಡೋಣವೆಂದು ಮಾತನಾಡಿಕೊಂಡರು. ಅದರಂತೆ ಒಂಟಿಯಾಗಿರುವ ಈ ನಾಲ್ಕು ಜನರು ವಾರದಲ್ಲಿ ಒಂದು ದಿನ ರಾತ್ರಿ ಒಬ್ಬರ ಮನೆಯಲ್ಲಿ ಡ್ರಿಂಕ್ಸ್ ಪಾರ್ಟಿ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಆ ದಿನ ಬೇಕಾದ ಅಡಿಗೆಯನ್ನು ಪಾರ್ಟಿ ಮಾಡುವವರ ಮನೆಗೆ ರಾಜಾ ರೆಡ್ಡಿಯೇ ಹೋಗಿ ತಯಾರು ಮಾಡುತ್ತಿದ್ದನು. ಪಾರ್ಟಿ ಪ್ರಾರಂಭವಾಗುವುದಕ್ಕೂ ಮುನ್ನ ಎಲ್ಲವು ಚೆನ್ನಾಗಿ ನಡೆದುಕೊಂಡು ಹೋಗುತ್ತಿರುತ್ತದೆ.

ದೇಹಕ್ಕೆ ನಶೆ ಏರುತ್ತಿದ್ದಂತೆ ಯಾವುದಾದರೊಂದು ವಿಷಯವನ್ನು ಪ್ರಸ್ತಾಪಿಸಿ ಅದರ ಬಗ್ಗೆ ಮಾತನಾಡುತ್ತಾ


☞ 15


ಕೊಲೆಗೆ ಉಪಯೋಗಿಸಿದ್ದ ಚಾಕು ಮತ್ತು ಮೊಬೈಲ್ ಫೋನ್

## ಬೆಳಗಾವಿ : ಅಥಣಿ ಸಿಪಿಐ ಸಂತೋಷ ಹಳ್ಳೂರ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆ

# ಮದುವೆಯಾಗುವುದಾಗಿ ನಂಬಿಸಿ ಅಪ್ರಾಪ್ತೆಯನ್ನು ಅಪಹರಿಸಿ ಬೆಂಗಳೂರಿಗೆ ಕರೆದೊಯ್ದು ಅತ್ಯಾಚಾರಗೈದ ಯುವಕ ಸೇರಿ ಮೂವರ ಬಂಧನ!


**ಆತ 21 ವರ್ಷದ ಅನ್ಯಕೋಮಿನ ಯುವಕ. ಮೈ ಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದೇ ಉಂಡಾಡಿ ಗುಂಡನಂತೆ ತಿರುಗುತ್ತಿದ್ದನು. ಕಳೆದ ಸುಮಾರು ದಿನಗಳಿಂದ ಅಂದಗಾತಿ ಅಪ್ರಾಪ್ತ ಕಾಲೇಜು ತರುಣಿಯ ಬೆನ್ನು ಬಿದ್ದಿದ್ದನು. ಹೋಟೆಲ್, ಪಾರ್ಕ್ ಎಂದೆಲ್ಲ ತಿರುಗಾಡಿ ಪರಿಚಯ ಬೆಳೆಸಿಕೊಂಡು 'ನಿನ್ನನ್ನೇ ಮದುವೆಯಾಗುತ್ತೇನೆ' ಎಂದು ಆಕೆಯನ್ನು ನಯವಾಗಿ ನಂಬಿಸಿದ್ದನು. ಇತ್ತೀಚೆಗೆ ತನ್ನಿಬ್ಬರು ಸ್ನೇಹಿತರೊಂದಿಗೆ ಸೇರಿ ಹೇಗಾದರೂ ಮಾಡಿ ಅಪ್ರಾಪ್ತೆಯನ್ನು ಅಪಹರಿಸಿ ಸುಖ ಪಡೆಯಲು ಸ್ಕೆಚ್ ಹಾಕಿದ್ದನು. ಅದರಂತೆ ಸ್ನೇಹಿತರ ನೆರವಿನಿಂದ ಅಪಹರಿಸಿ ಬೆಂಗಳೂರಿಗೆ ಕರೆದೊಯ್ದು ನಿರಂತರವಾಗಿ ಅತ್ಯಾಚಾರವೆಸಗಿದ್ದನು. ಪ್ರಕರಣ ದಾಖಲಿಸಿಕೊಂಡು ಡಿವೈಎಸ್ಪಿ ಪ್ರಶಾಂತ ಮುನ್ನೋಳ್ಳಿ ಅವರ ನಿರ್ದೇಶನದಲ್ಲಿ ತನಿಖೆಗಿಳಿದ ಚತುರ ಮತ್ತು ಧಾಡಸಿ ಸಿಪಿಐ ಸಂತೋಷ ಹಳ್ಳೂರ, ಪಿಎಸ್ಐ ಗಿರಿಮಲ್ಲ ಉಪ್ಪಾರ ಮತ್ತು ಸಿಬ್ಬಂದಿಗಳು ವಿಶೇಷ ಕಾರ್ಯಾಚರಣೆ ನಡೆಸಿ ಅತ್ಯಾಚಾರಿ ಯುವಕ ಮತ್ತು ಆತನಿಗೆ ಸಹಾಯ ಮಾಡಿದ ಯುವಕರಿಬ್ಬರು ಸೇರಿದಂತೆ ಮೂವರನ್ನು ಬಂಧಿಸಿ ಜೈಲಿಗಟ್ಟಿದ ಪ್ರಕರಣ ಬೆಳಗಾವಿ ಜಿಲ್ಲೆಯ ಅಥಣಿ ಪಟ್ಟಣದಿಂದ ವರದಿಯಾಗಿದೆ.**



ಅಪ್ರಾಪ್ತೆಯ ಮೇಲೆ ಅತ್ಯಾಚಾರಗೈದ ಇಕ್ಬಾಲ್ ಶೇಖ್

**ಬೆಳಗಾವಿ**
✍ ಮನ್ನಾಪೂರ

ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮತ್ತು ಡಿಜಿಟಲ್ ಯುಗದ ನಾಗಾಲೋಟದಲ್ಲಿ ಸಂಬಂಧಗಳು ಸುರಕ್ಷತೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಿವೆ. ವಾಟ್ಸಫ್, ಇನ್‌ಸ್ಟಾಗ್ರಾಂ, ಟೆಲಿಗ್ರಾಂ, ಯೂಟ್ಯೂಬ್‌ಗಳ ನಡುವೆ ನಮ್ಮ ವಿದ್ಯಾವಂತ ಯುವಕ-ಯುವತಿಯರು ತಮ್ಮತನ ಕಳೆದುಕೊಂಡು ವ್ಯವಸ್ಥಿತ ಸಂಚಿಗೆ ಬಲಿಯಾಗುತ್ತಿದ್ದಾರೆ. ಅಪ್ರಾಪ್ತ ಮನಸ್ಸುಗಳನ್ನು ಹದಗೆಡಿಸುವ ಐನಾತಿ ಪಡ್ಡೆ ಹುಡುಗರು ಇಂದು ತಮ್ಮ ಸ್ವಾರ್ಥ, ಮರೀಚಿಕೆಯಂತಹ ಸುಖಕ್ಕಾಗಿ ಯಾರನ್ನಾದರೂ ಅನಾಮತ್ತಾಗಿ ಮೋಸಗೊಳಿಸಿ ಮುಗ್ಧರನ್ನು ಬೀದಿಗೆ ತರುತ್ತಿದ್ದಾರೆ. ಇದರಿಂದ ಪ್ರಜ್ಞಾವಂತ ಯುವಜನತೆ ಮತ್ತು ಸಮಾಜ ಇಡೀಯಾಗಿ ಎಚ್ಚರಗೊಳ್ಳಬೇಕಾದ ಅನಿವಾರ್ಯತೆ ಇದೆ.

ಮೊನ್ನೆ... ಮೊನ್ನೆಯಷ್ಟೇ ಬೆಳಗಾವಿ ಜಿಲ್ಲೆಯ ಅಥಣಿ ಪಟ್ಟಣದಲ್ಲಿ ನಡೆದ ಅಪ್ರಾಪ್ತೆಯ ಅಪಹರಣ ಮತ್ತು ಅತ್ಯಾಚಾರದ ಘಟನೆ ಇಡೀ ನಾಗರೀಕ ಸಮಾಜವನ್ನು ತಲೆ ತಗ್ಗಿಸುವಂತಹ ಘಟನೆ ಎಂದು ಹೇಳಬೇಕು.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ


ಡಿವೈಎಸ್ಪಿ ಪ್ರಶಾಂತ ಮುನ್ನೋಳಿ

ಇಂದು ದಿನನಿತ್ಯ ಇಂತಹ ಅನೇಕ ಘಟನೆಗಳು ಎಗ್ಗಿಲ್ಲದೇ ನಡೆಯುತ್ತಿವೆ. ಅನ್ಯಕೋಮಿನ ಯುವಕ, ಹಿಂದೂ ಅಂದಗಾತಿ ಅಪ್ರಾಪ್ತೆಯನ್ನು ಅಪಹರಿಸಿ ಆಕೆಯನ್ನು ನಂಬಿಸಿ ದೂರದ ಬೆಂಗಳೂರಿಗೆ ಕರೆದೊಯ್ದು ಅತ್ಯಾಚಾರಗೈದಿದ್ದಾನೆ. ಮಾಡಿದ ತಪ್ಪಿಗಾಗಿ ತನ್ನ ಇಬ್ಬರು ಸ್ನೇಹಿತರೊಂದಿಗೆ ಜೈಲು ಸೇರಿ ತಂಗಳು ಮುರಿಯುತ್ತಿದ್ದಾನೆ. ಆದರೆ ಅಪ್ರಾಪ್ತೆ ಮತ್ತು ಕುಟುಂಬದವರಿಂದು ಮುಖವೆತ್ತಿ ತಿರುಗದಂತಾಗಿದೆ. ಇದರ ಬಗ್ಗೆ ಒಂದಿಷ್ಟು ವಿವರಣೆಯನ್ನು 'ಪೊಲೀಸ್ ನ್ಯೂಸ್' ನೀಡುತ್ತಿದೆ.

### ಐನಾತಿ ಇಕ್ಬಾಲ್ ಅಮೀನ್ ಶೇಖ್...

ಮೈ ಮುರಿದು ನಡುಬಗ್ಗಿಸಿ ತಿನ್ನಲಾರದ ಮಹಾ ಹರಾಮಿ ಶೋಕಿಲಾಲ ಯುವಕ ಇಕ್ಬಾಲ್ ಅಮೀನ್ ಶೇಖ್ (21 ವ) ಮೂಲತಃ ಮೂಡಲಗಿ ತಾಲ್ಲೂಕಿನ ಧರ್ಮಟ್ಟಿ ಗ್ರಾಮದವನು. ಈತನ ತಂದೆ ಅಮೀನ್ ಶೇಖ್ ತುತ್ತಿನ ಚೀಲ ತುಂಬಿಸಿಕೊಳ್ಳುವುದಕ್ಕಾಗಿ ಅಥಣಿಯ ಪರಿಸರದ ಚಿಕ್ಕಟ್ಟಿಯಲ್ಲಿ ಗ್ಯಾರೇಜ್ ಒಂದನ್ನು ಇಟ್ಟುಕೊಂಡಿದ್ದನು. ಈತನಿಗೆ ವಿದ್ಯೆ ತಲೆಗೆ ಹತ್ತಲಿಲ್ಲ. ಇನ್‌ಸ್ಟಾಗ್ರಾಂ, ಯೂಟ್ಯೂಬ್‌ಗಳಲ್ಲಿ ರಿಲ್ಸ್ ಮಾಡಿಕೊಂಡು ಕಾಲು ಬಿಟ್ಟ ಕತ್ತೆಯಂತೆ ಅಂಡಲೆಯುತ್ತಿದ್ದನು. ತಂದೆ ಬೈದಗೊಮ್ಮೆ ಕಾಟಾಚಾರಕ್ಕೆ ಗ್ಯಾರೇಜ್ ಒಳಗೆ ದುಡಿಯುತ್ತಲಿದ್ದನು. ತಂದೆಯನ್ನು ಕಾಡಿ-ಬೇಡಿ ಶೋಕಿಗಾಗಿ ದುಡ್ಡು ಪೀಕುತ್ತಿದ್ದನು. ಅದಾಗಲೇ ಐನಾತಿ ಇಕ್ಬಾಲ್‌ನಿಗೆ ಎಲ್ಲ ಚಟಗಳು ಬೆಳೆದುಕೊಂಡಿದ್ದವು. ಒಂದೇ ಮಾತಿನಲ್ಲಿ ಹೇಳುವುದಾದರೆ ಈತ ಕಟ್ಟರ್ ಮುಸ್ಲಿಂ ಕೋಮಿನ ಸಮರ್ಥಕನಾಗಿದ್ದನು.


ಎಸ್ಪಿ ಕೆ. ರಾಮರಾಜನ್

### ಮನೆಮುರುಕ ಗೆಳೆಯರಿದ್ದರು...

ಗೆಳೆತನ ಅಂದರೆ ಅದರ ಅರ್ಥ ಬಹಳ ವಿಶಾಲವಾಗಿದೆ. ಕೆಟ್ಟು ಕೆರ ಹಿಡಿದು ಹೋದ ಗೆಳೆಯನನ್ನು ಸರಿದಾರಿಗೆ ತರಲು ಹೆಣಗುವವರೇ ನಿಜವಾದ ಗೆಳೆಯರು. ಆದರೆ ಐನಾತಿ ಇಕ್ಬಾಲ್ ಶೇಖ್‌ನಿಗೆ ಚಿಕ್ಕಟ್ಟಿ ಪರಿಸರದಲ್ಲಿ ವಾಸಿಸುತ್ತಿದ್ದ ಶ್ರೀಧರ ರವಿ ಪತ್ತಾರ (26 ವ), ಅಥಣಿ ಪಟ್ಟಣದ ಸಿದ್ಧಾರ್ಥ ನಗರದ ರೋಹಿತ ಸಂತೋಷ ಖದ್ರಿ (19 ವ) ಎಂಬಿಬ್ಬರು ಜೀವದ ಗೆಳೆಯರಾಗಿದ್ದರು. ಇದರಲ್ಲಿ ರೋಹಿತನಿಗೆ ಆತನ ತಂದೆ ಸ್ವಿಫ್ಟ್ ಕಾರೊಂದನ್ನು ಕೊಡಿಸಿದ್ದನು. ಅದನ್ನೇ ಬಾಡಿಗೆಗೆ ಬಿಟ್ಟು ಬಂದ ದುಡ್ಡಿನಲ್ಲಿ ಚೈನಿ ಮಾಡುತ್ತಿದ್ದನು. ಇವರಿಬ್ಬರು ಮನೆ ಮುರುಕ ಗೆಳೆಯರು ಸೇರಿಕೊಂಡು ಐನಾತಿ ಇಕ್ಬಾಲ್ ಶೇಖ್‌ನು ಮಾಡಿಸುತ್ತಿದ್ದ ಬಾಡೂಟದ ತುಂಡಿಗಾಗಿ ಬೆನ್ನು ತಟ್ಟಿ ಆತನನ್ನು ಹೊಗಳುತ್ತಿದ್ದರು. ಇಲ್ಲಿ ಶ್ರೀಧರ ರವಿ ಪತ್ತಾರ ಹಾಗೂ ರೋಹಿತ ಸಂತೋಷ ಖದ್ರಿ ಇಕ್ಬಾಲ್ ಶೇಖ್‌ನ ಬೆನ್ನಿಗಿರದೇ ಹೋಗಿದ್ದರೆ ಇಂದು ಹಿಂದೂ ಅಪ್ರಾಪ್ತೆಯ ಅತ್ಯಾಚಾರವಾಗುತ್ತಿರಲಿಲ್ಲ. ಇಕ್ಬಾಲ್ ಶೇಖ್‌ನ ಜತೆಗೆ ಇವರು ಜೈಲು ಸೇರುತ್ತಿರಲಿಲ್ಲ.

### ಅಪ್ರಾಪ್ತೆ ಅಂದಗಾತಿ ಕಣ್ಣಿಗೆ ಬಿದ್ದಳು...

ಇಕ್ಬಾಲ್ ಶೇಖ್, ಶ್ರೀಧರ ಪತ್ತಾರ, ರೋಹಿತ ಖದ್ರೆ ಮೂವರು ಸೇರಿಕೊಂಡು ಅಂಡಲೆಯುತ್ತಿದ್ದರು. ಈಗ ಒಂದೂವರೆ ವರ್ಷಗಳ ಹಿಂದೆ ಅಥಣಿ ಪಟ್ಟಣದ ಕಾಲೇಜು ಒಂದರಲ್ಲಿ ಹಿಂದೂ ಕುಟುಂಬಕ್ಕೆ ಸೇರಿದ್ದ ಅಂದಗಾತಿಯೊಬ್ಬಳು ಐನಾತಿ ಇಕ್ಬಾಲ್ ಶೇಖ್‌ನ ಕಣ್ಣು ಕುಕ್ಕಿದಳು. ಅಸಾಧಾರಣ ರೂಪುವಂತೆಯಾಗಿದ್ದ ಈಕೆಯನ್ನು ಲವ್ ಮಾಡಬೇಕೆಂದು ಇಕ್ಬಾಲ್ ಶೇಖ್ ನಿರ್ಧರಿಸಿದನು. ಈ ಸಂದರ್ಭದಲ್ಲಿ ತನ್ನ ಗೆಳೆಯರಾದ ಶ್ರೀಧರ ಮತ್ತು ರೋಹಿತನಿಗೆ ತಿಳಿಸಿದನು. ಅವರು ಕೂಡಾ ಹುರುಪು ತುಂಬಿದರು. ಅಂದಿನಿಂದ ಇಕ್ಬಾಲ್ ಶೇಖ್ ಇನ್‌ಸ್ಟಾಗ್ರಾಂ, ಯೂಟ್ಯೂಬ್‌ನಲ್ಲಿ ರಿಲ್ಸ್ ಮಾಡುತ್ತ ಅವಳ ಓಲೈಕೆಗೆ ತೊಡಗಿದ್ದನು. ತನ್ನ ಸಂಬಂಧಿಕ ಯುವತಿಯ ನೆರವಿನಿಂದ ಹಿಂದೂ ಅಪ್ರಾಪ್ತೆಗೆ ಕಾಳು ಹಾಕುವಲ್ಲಿ ಯಶಸ್ವಿ ಆದನು.

### ಹೋಟೆಲ್, ಪಾರ್ಕ್ ಸುತ್ತಾಡಿ... ಪ್ರೀತಿ...

ಮೊದ... ಮೊದಲು ತನ್ನ ಸಂಬಂಧಿಕಳೊಡನೆ ಹಿಂದೂ ಅಂದಗಾತಿಯನ್ನು ಹೋಟೆಲಿಗೆ... ಪಾರ್ಕ್‌ಗೆ ಕರೆಯಿಸಿಕೊಂಡು ಇಕ್ಬಾಲ್ ಶೇಖ್ ಅಪ್ರಾಪ್ತೆಯ ಸ್ನೇಹ ಗಟ್ಟಿಗೊಳಿಸಿಕೊಂಡನು. ಪರಸ್ಪರರು ಮೊಬೈಲ್, ವಾಟ್ಸಫ್, ಇನ್‌ಸ್ಟಾಗ್ರಾಂಗಳಲ್ಲಿ ಬಿಜಿಯಾಗಿ ಬಿಟ್ಟರು. ಈ ನಡುವೆ ಅಪ್ರಾಪ್ತೆ ಏಕಾಂತದಲ್ಲಿ ಸಿಕ್ಕಾಗ ಟಚ್ಚಿಂಗ್, ಕಿಸ್ಸಿಂಗ್ ಕಾರ್ಯಕ್ರಮ ಎಗ್ಗಿಲ್ಲದೇ ನಡೆದಿದ್ದವು. ಕಳೆದ ಒಂದೂವರೆ ವರ್ಷದ ಇವರ ಸಲುಗೆ ಒಬ್ಬರನ್ನು ಒಬ್ಬರು ಬಿಟ್ಟಿರದಂತಾಗಿತ್ತು. ಐನಾತಿ ಇಕ್ಬಾಲ್ ಶೇಖ್ ಅಂದಗಾತಿ ಅಪ್ರಾಪ್ತೆಯನ್ನು ಮದುವೆಯಾಗುತ್ತೇನೆಂದು ಇನ್ನಿಲ್ಲದಂತೆ ಆಕೆಯನ್ನು ನಂಬಿಸುವಲ್ಲಿ ಯಶಸ್ವಿ ಆದನು. ಇಕ್ಬಾಲ್‌ನ ಕಥೆ ಅಪ್ರಾಪ್ತೆಯ ಮನೆಯಲ್ಲಿ ಗೊತ್ತಾಗಿ 'ಇದೆಲ್ಲಾ ಬೇಡ... ಸಾಬರ ಸಹವಾಸ ಸಾಕು' ಎಂದು ಬೈದು ಬುದ್ಧಿ ಹೇಳಿದ್ದರು. ಹರೆಯದ ವಯಸ್ಸಿನ ಅಂದಗಾತಿ ಆಗಷ್ಟು ಹೂಂ ಎಂದು ಮತ್ತದೇ ಚಾಳಿಯನ್ನು ಮುಂದುವರೆಸಿದ್ದಳು. ಈಗವಳು ಪಿಯುಸಿ ದ್ವಿತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಳು.


ಸಿಪಿಐ ಸಂತೋಷ ಹಳ್ಳೂರ


ಪಿಎಸ್ಐ ಗಿರಿಮಲ್ಲ ಉಪ್ಪಾರ

### ಮದುವೆಯಾಗೋಣವೆಂದು ಅಪಹರಿಸಿದ...

ಐನಾತಿ ಇಕ್ಬಾಲ್ ಶೇಖ್ ತುಂಬಾ ಅವಸರಗೇಡಿ ಪ್ರವೃತ್ತಿಯವನು. ಇನ್ನೊಂದು ತಿಂಗಳು ಸಮಾಧಾನವಿದ್ದರೆ ಹುಡುಗಿ ಮೇಜರ್ ಆಗುತ್ತಿದ್ದಳು. ಆದರೆ ಆತನಿಗೆ ತಡೆಯಲಾಗಲಿಲ್ಲ. ತನ್ನ ಸ್ನೇಹಿತರಿಗೆ ಮನದಿಂಗಿತ ತಿಳಿಸಿದ್ದಾನೆ. ಅವರು ಕೂಡಾ ಸಹಾಯ ಮಾಡಲು ಮುಂದೆ ಬಂದಿದ್ದಾರೆ.

ಅದರಂತೆ ದಿನಾಂಕ 09-01-2026ರಂದು ರಾತ್ರಿ 10 ಗಂಟೆಗೆ ಅಪ್ರಾಪ್ತೆಗೆ ಮೊಬೈಲ್ ಕರೆ ಮಾಡಿ 'ನಾವಿಬ್ಬರೂ ಮದುವೆ ಮಾಡಿಕೊಳ್ಳೋಣ... ಬೆಳಿಗ್ಗೆ ಬೇಗ ನೀನು ಬರಬೇಕು' ಎಂದು ಆಕೆಯ ಬ್ರೇನ್ ವಾಶ್ ಮಾಡಿದ್ದಾನೆ. ಇಕ್ಬಾಲ್‌ನ ಮಾತು ನಂಬಿದ ಅಪ್ರಾಪ್ತೆ 10-01-2026ರಂದು ಬೆಳಿಗ್ಗೆ 1 ಗಂಟೆಗೆ ಇಕ್ಬಾಲ್ ಹೇಳಿದಲ್ಲಿಗೆ ಬಂದಿದ್ದಾಳೆ. ಗೆಳೆಯ ರೋಹಿತನ ಕಾರಿನಲ್ಲಿ ಅಪ್ರಾಪ್ತೆಯನ್ನು ಅಪಹರಿಸಿಕೊಂಡು ಜತೆಗೆ ಶ್ರೀಧರನನ್ನು ಕರೆದುಕೊಂಡು ಬೆಂಗಳೂರಿನತ್ತ ಪ್ರಯಾಣವನ್ನು ಇಕ್ಬಾಲ್ ಬೆಳೆಸಿದ್ದಾನೆ. ದಾರಿಯುದ್ದಕ್ಕೂ ಅಪ್ರಾಪ್ತೆಯ ಬ್ರೇನ್ ವಾಶ್ ಮಾಡಲು ಇಕ್ಬಾಲ್ ಮತ್ತಾತನ ಸ್ನೇಹಿತರು ಯಶಸ್ವಿ ಆಗಿದ್ದಾರೆ. ದಿ. 11-01-2026ರಂದು ರಾತ್ರಿ ಬೆಂಗಳೂರಿನಲ್ಲಿರುವ ಇಕ್ಬಾಲ್‌ನ ಸ್ನೇಹಿತನ ಮನೆಯಲ್ಲಿ ಇಕ್ಬಾಲ್ ಮತ್ತು ಅಪ್ರಾಪ್ತೆಯನ್ನು ಬಿಟ್ಟು ಅದೇ ದಿನ ರಾತ್ರಿ ಇವರು ಅಥಣಿಗೆ ಹೊರಟು ಬಂದರು.

### ಗೆಳೆಯರ ಮನೆಯಲ್ಲಿ ಅತ್ಯಾಚಾರ...

ದಿ. 11-01-2026ರಂದು ಸ್ನೇಹಿತನೊಬ್ಬನ ಮನೆಯಲ್ಲಿ ಇಕ್ಬಾಲ್ ಶೇಖ್ ಅಪ್ರಾಪ್ತೆಯ ಮೇಲೆ ಬಲವಂತವಾಗಿ ಅತ್ಯಾಚಾರವೆಸಗಿದನು. ಈ ಸಂದರ್ಭದಲ್ಲಿ ಅಪ್ರಾಪ್ತೆ ತಾನಿನ್ನು ಮೈನರ್ ಎಂದರೂ ಕೂಡಾ ದುಷ್ಟ ಕಾಮುಕ ಅದನ್ನು ತಲೆಗೆ ಹಾಕಿಕೊಳ್ಳದೇ ಹೋದನು. ಮರುದಿನವೇ ಮತ್ತೊಬ್ಬ ಸ್ನೇಹಿತನ ಮನೆಗೆ ಬಂದು ಅಲ್ಲಿ ನಿರಂತರವಾಗಿ 15-01-2026ರವರೆಗೆ ಅಪ್ರಾಪ್ತೆಯ ಮೇಲೆ ಅತ್ಯಾಚಾರ ಮಾಡಿದ್ದನು. ಈ ಘಟನೆಯಿಂದ ಅಪ್ರಾಪ್ತೆ ತರುಣಿ ಮಾನಸಿಕವಾಗಿ ನೊಂದುಕೊಂಡಳು. 'ಇದೆಲ್ಲಾ ಬೇಡಾ ನಾನು ಊರಿಗೆ ಹೋಗುತ್ತೇನೆ' ಎಂದರೂ ಕೂಡಾ ಕಾಮಾಂಧ ಇಕ್ಬಾಲ್ 'ಅದೆಲ್ಲಾ ಬೇಡಾ ನಾವು ಮದುವೆಯಾಗಿ ಇಲ್ಲೇ ಇರೋಣ ಎಲ್ಲಿಯಾದರೂ ಕೆಲಸ ನೋಡುತ್ತೇನೆ' ಎಂದು ಅಪ್ರಾಪ್ತೆಗೆ ಹೆದರಿಸಿದ್ದನು.

☞ 14

# ಕಾನೂನು ರಕ್ಷಕನೇ ಭಕ್ಷಕನಾದಾಗ: ಕೆಂಭಾವಿ ಪೊಲೀಸ್ ದೌರ್ಜನ್ಯದ ಸತ್ಯಾಸತ್ಯತೆಗಳು!

ಸಮಾಜ ಮತ್ತು ಸರ್ಕಾರದ ನಡುವಿನ ಅಟಲ ಸೇತುವೆಯೇ ನಂಬಿಕೆ. ಆ ನಂಬಿಕೆಯ ಆಧಾರದಲ್ಲಿಯೇ ಪ್ರಜಾಪ್ರಭುತ್ವ ಉಸಿರಾಡುತ್ತದೆ. ಸಾಮಾನ್ಯ ನಾಗರಿಕನಿಗೆ ಅನ್ಯಾಯವಾದಾಗ, ಅಪಾಯ ಎದುರಾದಾಗ, ಆತ ಮೊದಲಿಗೆ ತಲುಪುವ ಸ್ಥಳ ಪೊಲೀಸ್ ಠಾಣೆ. ಖಾಕಿ ವಸ್ತ್ರವು ಭದ್ರತೆಯ ಸಂಕೇತ, ಕಾನೂನಿನ ಪ್ರತಿನಿಧಿ, ಸಂವಿಧಾನದ ಜೀವಂತ ರೂಪವೆಂದು ಜನರು ನಂಬಿದ್ದಾರೆ. ಆದರೆ ಆ ಖಾಕಿಯೇ ತನ್ನ ಕರ್ತವ್ಯ ಮರೆತು ಕ್ರೌರ್ಯದ ಮುಖವಾಡ ಧರಿಸಿದಾಗ, ಆಘಾತ ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗುವುದಿಲ್ಲ; ಅದು ಇಡೀ ವ್ಯವಸ್ಥೆಯ ಆತ್ಮವನ್ನೇ ಗಾಯಗೊಳಿಸುತ್ತದೆ. ಯಾದಗಿರಿ ಜಿಲ್ಲೆಯ ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ನಡೆದ ಘಟನೆ, ಇಂತಹದೇ ಒಂದು ಭೀಕರ ಎಚ್ಚರಿಕೆಯ ಗಂಟೆಯಾಗಿದೆ. ಇದು ಕೇವಲ ಪೊಲೀಸ್ ದೌರ್ಜನ್ಯದ ಒಂದು ಪ್ರಕರಣವಲ್ಲ; ಇದು ಸಂವಿಧಾನಾತ್ಮಕ ಮೌಲ್ಯಗಳ ಮೇಲೆ ನಡೆದ ನೇರ ದಾಳಿ, ಮಾನವೀಯತೆಯ ಮೇಲಿನ ಕಪ್ಪು ಮಸಿ.


ಮೆಹಬೂಬ್

ಈ ಘಟನೆಯ ಹಿನ್ನೆಲೆಯನ್ನು ಅರಿಯಲು ಹೋದರೆ, ಐದು ತಿಂಗಳ ಹಿಂದೆ ಸುರಪುರ ತಾಲ್ಲೂಕಿನ ಕರಡ್ಕಲ್ ಬಳಿ ಸಂಭವಿಸಿದ ಒಂದು ಆಟೋ ಅಪಘಾತದವರೆಗೆ ಹೋಗಬೇಕಾಗುತ್ತದೆ. ಸಾಹಿಲ್ ಎಂಬ ಯುವಕನ ಅಕಾಲಿಕ ಸಾವು, ಆ ಸಮಯದಲ್ಲಿ ಒಂದು ದುರ್ಘಟನೆಯೆಂದೇ ದಾಖಲಾಗಿತ್ತು. ಅಪಘಾತದ ನಂತರ ಐದು ತಿಂಗಳ ಕಾಲ ಯಾವುದೇ ಪ್ರಗತಿ ಇಲ್ಲದೆ ಮೌನವಾಗಿದ್ದ ತನಿಖಾ ಯಂತ್ರಾಂಗ, ಏಕಾಏಕಿ ಈ ಪ್ರಕರಣವನ್ನು 'ವ್ಯವಸ್ಥಿತ ಕೊಲೆ' ಎಂದು ಬಿಂಬಿಸಲು ಮುಂದಾಗಿರುವುದು ಅನೇಕ ಸಂಶಯಗಳಿಗೆ ಕಾರಣವಾಗಿದೆ. ಇಷ್ಟು ದಿನ ಸಾಕ್ಷ್ಯಾಧಾರಗಳಿಲ್ಲದೆ ನಿಶ್ಚಲವಾಗಿದ್ದ ಪೊಲೀಸರು, ಈಗ ತುರ್ತು ತುರ್ತಾಗಿ ಆರೋಪಿಗಳ ಹುಡುಕಾಟಕ್ಕೆ ಇಳಿದಿರುವುದರ ಹಿಂದೆ ನಿಜವಾದ ತನಿಖೆಯ ಉದ್ದೇಶವಿದೆಯೇ ಅಥವಾ ತಮ್ಮ ವಿಫಲತೆಯನ್ನು ಮುಚ್ಚಿಹಾಕುವ ಪ್ರಯತ್ನವಿದೆಯೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ.

✍ ವೀರನಗೌಡ

ಮೃತ ಸಾಹಿಲ್ ಅವರ ಕುಟುಂಬಸ್ಥರ ಅನುಮಾನಗಳನ್ನು ಸಂಪೂರ್ಣವಾಗಿ ತಳ್ಳಿಹಾಕಲಾಗದು. ಆದರೆ, ಕಾನೂನು ವ್ಯವಸ್ಥೆಯಲ್ಲಿ ಅನುಮಾನವೇ ಅಂತಿಮ ಸತ್ಯವಲ್ಲ. ಅನುಮಾನಕ್ಕೆ ಸಾಕ್ಷ್ಯದ ಬೆಂಬಲ ಬೇಕು, ವೈಜ್ಞಾನಿಕ ಪರಿಶೀಲನೆ ಬೇಕು, ನಿಷ್ಪಕ್ಷಪಾತ ತನಿಖೆ ಬೇಕು. ಆದರೆ ಇಲ್ಲಿ ನಡೆದದ್ದು ಅದಕ್ಕೆ ವಿರುದ್ಧ. ವೈಜ್ಞಾನಿಕ ಸಾಕ್ಷ್ಯ ಸಂಗ್ರಹಣೆ, ತಜ್ಞರ ಅಭಿಪ್ರಾಯ, ಕಾಲಮಿತಿಯೊಳಗಿನ ತನಿಖೆ ಇವೆಲ್ಲವನ್ನೂ ಬದಿಗೊತ್ತಿ, 'ಒಪ್ಪಿಗೆ' ಪಡೆಯುವುದೇ ತನಿಖೆಯ ಕೇಂದ್ರ ಬಿಂದುವಾಗಿರುವುದು ಅಪಾಯಕಾರಿ ಪ್ರವೃತ್ತಿಯ ಸೂಚಕವಾಗಿದೆ. ತನಿಖೆಯಲ್ಲಿ ವಿಳಂಬವಾದಾಗ, ಪ್ರಕರಣ ಕೈ ತಪ್ಪುತ್ತಿದೆ ಎಂಬ ಆತಂಕ ಬಂದಾಗ, ಕೆಲವರು ಅಧಿಕಾರವನ್ನು ಶಸ್ತ್ರವಾಗಿ ಬಳಸಿಕೊಳ್ಳುತ್ತಾರೆ. ಕೆಂಭಾವಿಯ ಪ್ರಕರಣದಲ್ಲಿ ಇದೇ ಮನಸ್ಥಿತಿ ಕೆಲಸ ಮಾಡಿರುವಂತೆ ಕಾಣುತ್ತದೆ.

ಈ ತನಿಖೆಯ ಬಲಿಪಶುವಾಗಿ ಹೊರಹೊಮ್ಮಿರುವವರು ಮೆಹಬೂಬ್ ಅಲಿ. ವಿಚಾರಣೆಯ ನೆಪದಲ್ಲಿ ಠಾಣೆಗೆ ಕರೆತರಲ್ಪಟ್ಟ ಈ ವ್ಯಕ್ತಿ, ಕಾನೂನಿನ ಪ್ರಕ್ರಿಯೆ ಎದುರಿಸುವ ಬದಲು ಅಮಾನವೀಯ ಹಿಂಸೆಗೆ ಒಳಗಾದರು ಎಂಬ ಆರೋಪಗಳು ಸಮಾಜವನ್ನು ಬೆಚ್ಚಿಬೀಳಿಸುತ್ತವೆ. ಅತ್ಯಂತ ಗಂಭೀರ ಸಂಗತಿ ಎಂದರೆ, ಮೆಹಬೂಬ್ ಅಲಿ ಅವರು ಕ್ಯಾನ್ಸರ್ ಎಂಬ ಮಾರಕ ರೋಗದಿಂದ ಬಳಲುತ್ತಿರುವುದು. ದೈಹಿಕವಾಗಿ ದುರ್ಬಲ, ಮಾನಸಿಕವಾಗಿ ಸಂಕಟದಲ್ಲಿರುವ ವ್ಯಕ್ತಿಯ ಮೇಲೆ ಹಲ್ಲೆ ನಡೆಸಲಾಗಿದೆ ಎಂಬ ಆರೋಪ, ಯಾವುದೇ ನಾಗರಿಕ ಸಮಾಜದಲ್ಲಿ ಕ್ಷಮಾರ್ಹವಲ್ಲ.


ಎಸ್ಪಿ ಪೃಥ್ವಿಕ್ ಶಂಕರ್

ಪಿಎಸ್‌ಐ ಅಮೋಜಿ ಕಾಂಬಳೆ ಅವರಿಂದ ತಮಗೆ ನಡೆದಿದೆ ಎನ್ನಲಾದ ಹಲ್ಲೆಯ ಕುರಿತು ಮೆಹಬೂಬ್ ಅಲಿ ನೀಡಿರುವ ವಿವರಣೆ ಎದೆ ನಡುಗಿಸುವಂತಿದೆ. 'ನಾನು ಕ್ಯಾನ್ಸರ್ ರೋಗಿ, ಬದುಕಲು ಅವಕಾಶ ಕೊಡಿ' ಎಂದು ಕೈಮುಗಿದು ಬೇಡಿಕೊಂಡರೂ, ಕರುಣೆಯ ಒಂದು ಕಿರಣವೂ ಕಾಣಿಸಲಿಲ್ಲ ಎಂಬ ಅವರ ಆಕ್ರಂದನ, ವ್ಯವಸ್ಥೆಯ ಮಾನವೀಯ ವೈಫಲ್ಯವನ್ನು ಪ್ರತಿಬಿಂಬಿಸುತ್ತದೆ. ಕಾನೂನನ್ನು ಪಾಲಿಸಬೇಕಾದ, ನಾಗರಿಕರ ಹಕ್ಕುಗಳನ್ನು ರಕ್ಷಿಸಬೇಕಾದ ಅಧಿಕಾರಿ, ಒಪ್ಪಿಗೆ ಪಡೆಯುವ ಏಕೈಕ ಉದ್ದೇಶಕ್ಕಾಗಿ ದೈಹಿಕ ಹಿಂಸೆಯನ್ನು ಆಯ್ದುಕೊಂಡಿದ್ದರೆ, ಅದು ಅಧಿಕಾರದ ಪರಮ ದುರುಪಯೋಗವಲ್ಲದೆ ಮತ್ತೇನು?


ಪಿಎಸ್‌ಐ ಅಮೋಜಿ ಕಾಂಬಳೆ

ಭಾರತೀಯ ಸಂವಿಧಾನದ 21ನೇ ವಿಧಿ ಪ್ರತಿಯೊಬ್ಬ ನಾಗರಿಕನಿಗೂ 'ಜೀವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು' ನೀಡುತ್ತದೆ. ಈ ಹಕ್ಕು ಕೇವಲ ಜೀವಂತವಾಗಿರುವುದಷ್ಟೇ ಅಲ್ಲ; ಗೌರವಯುತ ಜೀವನವನ್ನು ಒಳಗೊಂಡಿದೆ. ಕಸ್ಟಡಿಯಲ್ಲಿರುವ ವ್ಯಕ್ತಿಯೂ ಈ ಹಕ್ಕಿನಿಂದ ವಂಚಿತನಲ್ಲ. ರೋಗಗ್ರಸ್ತ ವ್ಯಕ್ತಿಯ ಮೇಲೆ ಹಲ್ಲೆ ನಡೆಸುವುದು, ಚಿಕಿತ್ಸೆ ನಿರಾಕರಿಸುವುದು ಅಥವಾ ಭೀತಿಯ ವಾತಾವರಣ ನಿರ್ಮಿಸುವುದು, ಸಂವಿಧಾನದ ಆಶಯಗಳಿಗೆ ಸಂಪೂರ್ಣ ವಿರೋಧಿ. ಇದಲ್ಲದೆ, ಪೊಲೀಸ್ ಕಸ್ಟಡಿಯಲ್ಲಿ ಪಡೆಯುವ ಬಲವಂತದ ಒಪ್ಪಿಗೆಗಳಿಗೆ ಭಾರತೀಯ ಸಾಕ್ಷ್ಯ ಕಾಯಿದೆಯಡಿ ಯಾವುದೇ ಕಾನೂನು ಮಾನ್ಯತೆ ಇಲ್ಲ ಎಂಬುದು ಮೂಲಭೂತ ಸತ್ಯ.

ಆದರೂ ಸಹ 'ನಾನೇ ಕೊಲೆ ಮಾಡಿದ್ದೇನೆ ಎಂದು ಒಪ್ಪಿಕೊ' ಎಂಬ ಏಕಪಕ್ಷೀಯ ಹಠವನ್ನು ಪ್ರದರ್ಶಿಸಿರುವುದು ತನಿಖಾ ವೃತ್ತಿಪರತೆಯ ಕುಸಿತವನ್ನು ತೋರಿಸುತ್ತದೆ. ಪೊಲೀಸರು ಸಾಕ್ಷ್ಯಗಳ ಆಧಾರದಲ್ಲಿ ಅಪರಾಧಿಯನ್ನು ಪತ್ತೆಹಚ್ಚಬೇಕೇ ಹೊರತು, ಮೊದಲು ಅಪರಾಧಿಯನ್ನು ನಿರ್ಧರಿಸಿ ನಂತರ ಸಾಕ್ಷ್ಯಗಳನ್ನು ಸೃಷ್ಟಿಸಬಾರದು. ಸುಳ್ಳು ಒಪ್ಪಿಗೆಗಳ ಮೂಲಕ ಪ್ರಕರಣ ಮುಚ್ಚಿಹಾಕುವ ಪ್ರಯತ್ನಗಳು, ನಿಜವಾದ ಅಪರಾಧಿ ಗಳು ಸಮಾಜದಲ್ಲಿ ಮುಕ್ತವಾಗಿ ಓಡಾಡಲು ಕಾರಣವಾಗುತ್ತವೆ. ಇದರ ಪರಿಣಾಮವಾಗಿ ನ್ಯಾಯ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸ ಕ್ಷೀಣಿಸುತ್ತದೆ.

ಈ ಘಟನೆಯ ಸುದ್ದಿ ಯಾದಗಿರಿ ಜಿಲ್ಲೆ ಮಾತ್ರವಲ್ಲದೆ ಸುತ್ತಮುತ್ತಲಿನ ಪ್ರದೇಶಗಳಲ್ಲೂ ಭಾರೀ ಆಕ್ರೋಶಕ್ಕೆ ಕಾರಣವಾಗಿದೆ. 'ಅಪರಾಧ ಸಾಬೀತುಪಡಿಸಲು ಅಸಮರ್ಥರಾದ ಪೊಲೀಸರು, ಅಮಾಯಕರ ಮೇಲೆ ದೌರ್ಜನ್ಯ ನಡೆಸುವುದು ಎಷ್ಟು ಸರಿ?' ಎಂಬ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ. ಸಾರ್ವಜನಿಕರ ತೆರಿಗೆಯಿಂದ ಸಂಬಳ ಪಡೆಯುವ ಅಧಿಕಾರಿಗಳು, ಕಾನೂನನ್ನು ಕೈಗೆತ್ತಿಕೊಂಡರೆ ಪ್ರಜಾಪ್ರಭುತ್ವದ ಅಸ್ತಿತ್ವವೇ ಸಂಕಟಕ್ಕೆ ಸಿಲುಕುತ್ತದೆ. ಪೊಲೀಸ್ ಇಲಾಖೆಯ ಮೇಲಿನ ನಂಬಿಕೆ ಕುಸಿದರೆ, ಕಾನೂನು ಪಾಲನೆ ಭಯದಿಂದ ನಡೆಯುತ್ತದೆ, ಗೌರವದಿಂದಲ್ಲ.

ಸದ್ಯ ಕಲಬುರಗಿಯ ಖಾಸಗಿ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಡುತ್ತಿರುವ ಮೆಹಬೂಬ್ ಅಲಿ ಅವರ ಸ್ಥಿತಿ, ನಮ್ಮ ವ್ಯವಸ್ಥೆಯ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಕ್ಯಾನ್ಸರ್‌ನಂತಹ ಮಾರಕ ರೋಗದ ವಿರುದ್ಧ ಹೋರಾಡುತ್ತಿದ್ದ ವ್ಯಕ್ತಿ, ಈಗ ವ್ಯವಸ್ಥೆಯ ಕ್ರೌರ್ಯದ ವಿರುದ್ಧವೂ ಹೋರಾಡಬೇಕಾಗಿರುವುದು ವಿಪರ್ಯಾಸ. ಈ ಪ್ರಕರಣದಲ್ಲಿ ತಕ್ಷಣದ ನಿಷ್ಪಕ್ಷಪಾತ ತನಿಖೆ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತು ಕ್ರಮ ಮತ್ತು ಸಂತ್ರಸ್ತನಿಗೆ ನ್ಯಾಯ ದೊರಕುವವರೆಗೂ ಮೇಲ್ವಿಚಾರಣೆ ಅತ್ಯಗತ್ಯ.

ಕೊನೆಗೆ ಒಂದು ಪ್ರಶ್ನೆ ನಮ್ಮೆಲ್ಲರ ಮುಂದಿದೆ: ರಕ್ಷಣೆ ನೀಡಬೇಕಾದವರೇ ಭಕ್ಷಕರಾದಾಗ, ನ್ಯಾಯಕ್ಕಾಗಿ ಸಾಮಾನ್ಯ ನಾಗರಿಕನು ಯಾರ ಕದ ತಟ್ಟಬೇಕು? ಕಾನೂನು, ಅಧಿಕಾರ ಮತ್ತು ಮಾನವೀಯತೆ ಈ ಮೂರರ ನಡುವೆ ಸಮತೋಲನ ಉಳಿಯದೆ ಹೋದರೆ, ಸಂವಿಧಾನ ಕೇವಲ ಪುಸ್ತಕದ ಪುಟಗಳಲ್ಲಿ ಉಳಿಯುತ್ತದೆ. ಕೆಂಭಾವಿಯ ಘಟನೆ ಒಂದು ಎಚ್ಚರಿಕೆ. ಇದನ್ನು ನಿರ್ಲಕ್ಷಿಸಿದರೆ, ನಾಳೆ ಯಾರೂ ಸುರಕ್ಷಿತರಾಗಿರುವುದಿಲ್ಲ. ☯


ಮರಣ ಹೊಂದಿದ ಮೆಹಬೂಬ್

---

5 ☞ ತಮ್ಮ ಲಿಟಿಗೇಷನ್ ಜಮೀನುಗಳಿಗೆ ಹಾಕಿಕೊಂಡು ಅಮಾಯಕ ಬಡದಲಿತರನ್ನೇ ಯಾಮಾರಿಸಿ, ಮೋಸ ಗೊಳಿಸಿ, ನಕಲಿ ದಾಖಲೆ ಸೃಷ್ಟಿಸಿ, ಜಮೀನು, ಸೈಟುಗಳನ್ನು ಕಬಳಿಸುತ್ತಿರುವುದನ್ನು ನೋಡಿಕೊಂಡೂ ನಿಜವಾದ ಅಂಬೇಡ್ಕರ್ ವಾದಿಗಳು ಖಂಡಿಸದೇ, ಪ್ರಶ್ನೆ ಮಾಡದೆ ಇರುವುದು ಆಶ್ಚರ್ಯವಾಗಿದೆ. ಆನೇಕಲ್‌ನಲ್ಲಿಯೂ ರಾತ್ರೋ ರಾತ್ರಿ ರಾಜ್ಯಾಧ್ಯಕ್ಷರಾಗುತ್ತಿರುವ ಅಂಬೇಡ್ಕರ್ ತತ್ವ ಸಿದ್ಧಾಂತಗಳ ಅರಿವಿಲ್ಲದ ಕೆಲವು ಕಿಡಿಗೇಡಿ ಮನಸ್ಥಿತಿಯ ರೌಡಿಗಳೂ ಈಗ ದುಡ್ಡು ಮಾಡಲು ಕಂಡೋರ ಜಮೀನಿಗೆ ಕಾಂಪೌಂಡ್ ಸುತ್ತಲು ಮಹಾತ್ಮಾ, ಭಾರತದ ಬಾಗ್ಯವಿದಾತ ಅಂಬೇಡ್ಕರ್ ಸಾಹೇಬರ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಅಂಬೇಡ್ಕರ್ ಹೆಸರಲ್ಲಿ ಯುವಕರ ಸಂಘ ಕಟ್ಟಿಕೊಂಡು ಪವಿತ್ರ ನೀಲಿಬಣ್ಣವನ್ನು ಅಪವಿತ್ರಗೊಳಿಸಿ ನೀಲಿಶಾಲು ನೀಲಿ ಕೋಟು ಮೈಮೇಲೆ ಹಾಕಿಕೊಂಡು ಬೀದಿಗಿಳಿದಿರುವ ರೌಡಿ ಶೀಟರ್ ಮರಸೂರುಕೃಷ್ಣಪ್ಪ ಅಲಿಯಾಸ್ ಕೋತಿ ಕೃಷ್ಣ ಈಗ ಆನೇಕಲ್ ಸುತ್ತಮುತ್ತ ಬಡ ದಲಿತರ ಜಮೀನುಗಳಿಗೇ ನಕಲಿ ದಾಖಲೆ ಮಾಡಿ ಬೇಲಿ ಸುತ್ತುತ್ತಿರುವ ಪ್ರಕರಣಗಳು ಪೊಲೀಸ್ ಇಲಾಖೆಯಲ್ಲಿ ವರದಿಯಾಗುತ್ತಿವೆ! ತನ್ನ ಸಂಘಟನೆಯ ಹೃದಯ ದೊಳಗೆ ಜಾಗ ಕೊಡತ್ತೇನೆಂದು ಹೆಣ್ಮಕ್ಕಳಿಗೆ ಅಪಾರ ಪ್ರೀತಿತೋರಿಸುವ ಕೋತಿ ಕೃಷ್ಣನಿಗೆ ಹೆಂಡತಿ ಮಂಗಳ ಇದ್ದರೂ ಬೀಮಪುತ್ರಿಯರಿಗೆ ಪುತ್ರಿಯರನ್ನು ಗಿಫ್ಟ್ ಕೊಡುವ ಶೋಕಿ ನಿಂತಿಲ್ಲವಂತೆ! ಈಗಾಗಲೇ ಆತನಿಗೆ ಮೂವರು ಅನಧಿ ಕೃತ ಮಡದಿಯರಿದ್ದಾರಂತೆ!!


ಹೊಸ ಗೆಟಪ್‌ನಲ್ಲಿ ಕೋತಿ!

### ಗೂಂಡಾ ಆಕ್ಟ್ ಅಡಿ ಜೈಲಿಗೆ ಕಳುಹಿಸಿದ್ದ ಡಿಸಿ ದಯಾನಂದ್....

ಕಳೆದ ವರ್ಷ 2025 ನವೆಂಬರ್ ತಿಂಗಳಲ್ಲಿ ಅತ್ತಿಬೆಲೆ ಇದೆ ಮರಸೂರು ಕೃಷ್ಣಪ್ಪ ಮತ್ತು ಸಹಚರರ ವಿರುದ್ಧ ರೌಡಿ ಶೀಟರ್ ಕೋತಿ ಕೃಷ್ಣ ಅಲಿಯಾಸ್ ಮರಸೂರು ಕೃಷ್ಣಪ್ಪ ನಕಲಿ ದಾಖಲೆ ಸೃಷ್ಟಿಸಿ ಜಮೀನು ಕಬಳಿಸುವ ಪ್ರಯತ್ನ ನಡೆಸಿದ್ದಾನೆಂದು ಹೋಬಳಿ ಯಡವನಹಳ್ಳಿಯ ಕೆ. ವೆಂಕಟಸ್ವಾಮಿಯವರ ಎರಡು ಎಕರೆ ಜಮೀನಿಗೆ ತನ್ನ ಸಹಚರರನ್ನು ಬಿಟ್ಟು ಅಕ್ರಮವಾಗಿ ಕಾಂಪೌಂಡ್ ಹಾಕಿ ಅನದಿಕೃತ ಶೆಡ್‌ಗಳನ್ನು ಹಾಕಿಸಿರುವ ಬಗ್ಗೆ ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಕಂಪ್ಲೇಂಟ್ ದಾಖಲಾಗಿದೆ. 2023ರಲ್ಲಿ ಬೆಂಗಳೂರು ಜಿಲ್ಲಾಧಿ ಕಾರಿ ದಯಾನಂದ್ ರವರು ರೌಡಿ ಕೋತಿ ಕೃಷ್ಣನನ್ನು ಗಾಂಜಾ ಡ್ರಗ್ಸ್ ಸಪ್ಲೈ ಕೇಸುಗಳಲ್ಲಿ ಈತನ ಹೆಸರು ದಾಖಲಾಗಿದ್ದರಿಂದ ಗೂಂಡಾ ಕಾಯ್ದೆಯಡಿ ಪರಪ್ಪನ ಅಗ್ರಹಾರ ಜೈಲಿಗಟ್ಟಿದ್ದರು! ಈ ಮತ್ತೆ ಪದೇಪದೇ ಹೆಬಿಚುವೆಲ್ ಅಫೆಂಢರ್ ರೀತಿಯಲ್ಲಿ ಬೆಂಗಳೂರಿನ ಕುಖ್ಯಾತ ರೌಡಿ ಕವಳನ ಸಹಚರರಾದ ರೌಡಿ ಶೀಟರ್ ಗುಂಡುತೋಪು ಶರವಣ, ವಿಲ್ಸನ್ ಗಾರ್ಡನ್ ನಾಗನ ಹೆಸರೇಳಿಕೊಂಡು ಹಲವರನ್ನು ಬೆದರಿಸುವುದು, ಕಂಡೋರ ಜಮೀನಿಗೆ ಬೇಲಿ ಸುತ್ತಿ ಅಕ್ರಮ ಪ್ರವೇಶ ಪಡೆದು ಹೆದರಿಸಿ ದುಡ್ಡು ಮಾಡುವುದು ನಡಸುತ್ತಿದ್ದರೂ ಆನೇಕಲ್ ಪೊಲೀಸರು ರೌಡಿ ಚಟುವಟಿಕೆ ನಡೆಸುತ್ತಿರುವ ಈ ರೌಡಿಯನ್ನು ಗೂಂಡಾ ಕಾಯ್ದೆ ಅಡಿ ಬಂಧಿಸದೇ, ಜಿಲ್ಲೆಯಿಂದ ಗಡಿಪಾರು ಮಾಡದೇ ಇನ್ನೂ ಮೀನಮೇಷ ಎಣಿಸುತ್ತಿರುವುದೇಕೇ ಎನ್ನುತ್ತಿದ್ದಾರೆ. ಈತನ ಕಿರುಕುಳ, ಉಪಟಳದಿಂದ ನೊಂದು ಬೇಸತ್ತಿರುವ ನಾಗರೀಕರು. ಸದ್ಯ, ರೌಡಿ ಶೀಟರ್ ಕೃಷ್ಣಪ್ಪ ಅಲಿಯಾಸ್ ಕೋತಿ ಕೃಷ್ಣ ಫ್ರಾಡ್ ಕೇಸ್ ನಲ್ಲಿ ಜೈಲು ಸೇರಿದ್ದಾನೆ. ಜೈಲಿಂದ ಹೊರಬಂದ ಮೇಲೆ ಮತ್ತೆ ಅಂಬೇಡ್ಕರ್ ಹೆಸರು ಹೇಳಿಕೊಂಡು ನಕಲಿ ಹೋರಾಟ ಮಾಡಿಕೊಂಡು ವಂಚನೆ ಕಾರ್ಯ ಮಾಡುವುದಿಲ್ಲ ಅಂತ ಏನು ಗ್ಯಾರೆಂಟಿ?! ಸೋ, ಡಿವೈಎಸ್ಪಿ ಮೋಹನ್ ಕುಮಾರ್ ಸರ್ ಹಾಗೂ ಎಸ್ಪಿ ಸಾಹೇಬ್ರು ಈತನ ಮೇಲೆ ನಿಗಾ ವಹಿಸಬೇಕಿದೆ... ☯

# ದಂಡುಪಾಳ್ಯ ಗ್ಯಾಂಗಿನ ಚಿಕ್ಕ ಹನುಮ ಕೊನೆಗೂ ಸಿಕ್ಕಿಬಿದ್ದ!

ಮಂಗಳೂರು
ಮೋಹನ್ ಬೋಳಂಗಡಿ

ಮೂರು ದಶಕಗಳ ಹಿಂದೆ ಇಡೀ ರಾಜ್ಯದಲ್ಲಿ ಕೊಲೆ, ದರೋಡೆ, ಸುಪಾರಿ ಹತ್ಯೆ ಮಾಡುತ್ತಿದ್ದ ಗ್ಯಾಂಗಿನ ಹೆಸರು ದಂಡುಪಾಳ್ಯ ಗ್ಯಾಂಗ್. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ದಂಡುಪಾಳ್ಯ ಎಂಬುದು ಸುಮಾರು 500 ಮನೆಗಳಿದ್ದ ಪ್ರದೇಶ. ಇಲ್ಲಿಂದ ಉದ್ಭವವಾದಂತಹ 8 ಮಂದಿಯ ತಂಡವೇ ದಂಡುಪಾಳ್ಯ ಗ್ಯಾಂಗ್. ಕೃಷ್ಣ ಎಂಬಾತ ಈ ತಂಡದ ನಾಯಕ. ಈ ತಂಡದಲ್ಲಿದ್ದವರೆಲ್ಲ ಪರಸ್ಪರ ಸಂಬಂಧಿಕರು. ಒಂಟಿ ಮನೆಗಳಿಗೆ ನುಗ್ಗಿ ಮನೆಯಲ್ಲಿದ್ದವರ ಕುತ್ತಿಗೆ ಕೊಯ್ದು ಕೊಲೆ ಮಾಡಿ ಚಿನ್ನಾಭರಣ ದೋಚುತ್ತಿದ್ದ ಈ ತಂಡ ರಾಜ್ಯದಾದ್ಯಂತ ಭೀತಿಯ ಅಲೆಗಳನ್ನೇ ಸೃಷ್ಟಿಸಿತ್ತು. ಈ ತಂಡವನ್ನು ಮೊದಲು ಪತ್ತೆ ಹಚ್ಚಿದ ಕೀರ್ತಿ ಮೈಸೂರು ನಗರದಲ್ಲಿ ಸಬ್ಇನ್ಸ್‌ಪೆಕ್ಟರ್ ಆಗಿದ್ದ ಕೆ.ಎಸ್. ತಮ್ಮಯ್ಯ ಅವರದ್ದು. ಆ ಸಂದರ್ಭದಲ್ಲಿ ಕೇವಲ ಕಳವು ಪ್ರಕರಣಗಳನ್ನು ಬಯಲಿಗೆಳೆಯಲಾಗಿತ್ತು. ಕೊಲೆ ಪ್ರಕರಣಗಳ ಬಗ್ಗೆ ಬಾಯಿ ಬಿಟ್ಟಿರಲಿಲ್ಲ. ತದನಂತರ ಬೆಂಗಳೂರಿನ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ಚಲಪತಿ ಅವರು ಈ ತಂಡವನ್ನು ಪತ್ತೆ ಹಚ್ಚಿ ಸುಮಾರು 36 ಕೊಲೆ ಪ್ರಕರಣಗಳನ್ನು ಭೇದಿಸಿದ್ದರು. ಜೈಲಿಗೆ ಹೋಗಿದ್ದ ಈ ತಂಡ ಆಂಧ್ರಪ್ರದೇಶದಲ್ಲಿ ಸಬ್ಇನ್ಸ್‌ಪೆಕ್ಟರ್ ಒಬ್ಬರನ್ನು ಕೊಲೆ ಮಾಡಿದ ಪ್ರಕರಣದಲ್ಲಿ ಆಂಧ್ರ ಜೈಲಿಗೆ ಶಿಫ್ಟ್ ಆಗಿದ್ದರು. ಈ ಸಂದರ್ಭದಲ್ಲಿ ಬೆಂಗಾವಲಿಗಿದ್ದ ಪೊಲೀಸರ ಮೇಲೆಯೇ ಹಲ್ಲೆ ನಡೆಸಿ ಇಡೀ ತಂಡ ಪರಾರಿಯಾಗಿತ್ತು. ಈ ತಂಡವು ಬೆಂಗಳೂರಿನಲ್ಲಿ ಹತ್ತು ಹಲವು ಕೊಲೆ ಕೃತ್ಯಗಳನ್ನು ನಡೆಸಿದಂತಹ ಸಂದರ್ಭದಲ್ಲಿ ವಿಜಯನಗರ ಇನ್ಸ್‌ಪೆಕ್ಟರ್ ಆಗಿದ್ದ ಚಲಪತಿ ಅವರ ನೇತೃತ್ವದಲ್ಲಿ ತಂಡವೊಂದನ್ನು ರಚಿಸಲಾಗಿತ್ತು. ಈ ತಂಡ ಸುಮಾರು 60,000 ಕಿ.ಮೀ. ಪ್ರಯಾಣಿಸಿ ಈ ತಂಡವನ್ನು ಪತ್ತೆ ಹಚ್ಚಿದ್ದರು. ಮತ್ತು ಒಟ್ಟು 87 ಪ್ರಕರಣಗಳನ್ನು ಬಯಲಿಗೆಳೆದಿದ್ದರು. ಇದರಲ್ಲಿ ಎರಡು ಪ್ರಕರಣಗಳು ಮಂಗಳೂರಿಗೆ ಸಂಬಂಧಿಸಿದ್ದು. ಈ ಪ್ರಕರಣಗಳಲ್ಲಿ ಭಾಗಿಗಳಾಗಿದ್ದ 7 ಜನರನ್ನು ಬಂಧಿಸಲಾಗಿದ್ದರೆ ಒಬ್ಬ ಪೊಲೀಸರ ಕೈಗೆ ಸಿಕ್ಕಿಬಿದ್ದಿರಲಿಲ್ಲ. ಆತನನ್ನು ಇದೀಗ ಮಂಗಳೂರಿನ ಉರ್ವ ಪೊಲೀಸರು ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯ ಮದನಪಳ್ಳಿ ವಿಜಯನಗರ ಕಾಲನಿಯಲ್ಲಿ ಪತ್ತೆಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

### ಯಾರೀತ ಚಿಕ್ಕ ಹನುಮ!?

ದಂಡುಪಾಳ್ಯ ಗ್ಯಾಂಗಿನ ಪ್ರಮುಖ ಮುಖಂಡ ಮುನಿಕೃಷ್ಣ ಅಲಿಯಾಸ್ ಕೃಷ್ಣ, ಈತನೊಂದಿಗೆ ದೊಡ್ಡ ಹನುಮ ಅಲಿಯಾಸ್ ಹನುಮ, ವೆಂಕಟೇಶ್ ಅಲಿಯಾಸ್ ಚಂದ್ರ, ನಲ್ಲತಿಮ್ಮ ಯಾನೆ ತಿಮ್ಮ, ಚಿಕ್ಕಹನುಮ, ಕೃಷ್ಣಾಡು ಅಲಿಯಾಸ್ ಕೃಷ್ಣ ಹಾಗೂ ವೆಂಕಟೇಶ್ ಅಲಿಯಾಸ್ ರಮೇಶ್, ಲಕ್ಷ್ಮೀ ಈ ತಂಡದ ಇತರ ಸದಸ್ಯರು. ಈ ತಂಡ 29.09.1996ರಲ್ಲಿ ಮಂಗಳೂರಿನ ಜ್ಯೋತಿ ವೃತ್ತದ ಬಳಿ ಇದ್ದ ಕಟ್ಟಡದಲ್ಲಿ ಕ್ಲಿನಿಕ್ ನಡೆಸುತ್ತಿದ್ದ ಮಂಗಳೂರಿನ ಪ್ರಸಿದ್ಧ ವೈದ್ಯರೂ, ಹೋಮ್‌ಗಾರ್ಡ್ಸ್ ಕಮಾಂಡೆಂಟ್ ಆಗಿದ್ದ ಆರೂರು ಭಾಸ್ಕರ್‌ರಾವ್ ಅವರನ್ನು ಬರ್ಬರವಾಗಿ ಕೊಲೆ ಮಾಡಿತ್ತು. ಈ ಪ್ರಕರಣ ಆ ಕಾಲಘಟ್ಟದಲ್ಲಿ ಭಾರಿ ಸಂಚಲನ ಸೃಷ್ಟಿ ಮಾಡಿತ್ತು.

ಈ ಪ್ರಕರಣದ ನಂತರ ಅಕ್ಟೋಬರ್ 12, 1997ರಂದು ಉರ್ವ ಮಾರಿಗುಡಿ ಬಳಿಯ ಮನೆಯೊಂದಕ್ಕೆ ನುಗ್ಗಿ 80ರ ಹರೆಯದ ಲೂವಿಸ್ ಡಿಮೆಲ್ಲೊ ಮತ್ತು 19ರ ಹರೆಯದ ರಂಜಿತ್ ವೇಗಸ್ ಎಂಬವರಿಬ್ಬರನ್ನು ಕುತ್ತಿಗೆ ಸೀಳಿ ಹತ್ಯೆ ಮಾಡಿತ್ತು. ಮನೆಯಲ್ಲಿದ್ದ ಚಿನ್ನಾಭರಣಗಳನ್ನು ದೋಚಲಾಗಿತ್ತು. ಆರೂರು ಭಾಸ್ಕರ್ ರಾವ್ ಕೊಲೆ ಪ್ರಕರಣವು ಬಂದರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದರೆ ಲೂವಿಸ್ ಡಿಮೆಲ್ಲೊ ಮತ್ತು ರಂಜಿತ್ ವೇಗಸ್ ಹತ್ಯಾ ಪ್ರಕರಣ ಉರ್ವಾ ಠಾಣೆಯಲ್ಲಿ ದಾಖಲಾಗಿತ್ತು. ಈ ಎರಡೂ ಪ್ರಕರಣಗಳನ್ನು ಮಂಗಳೂರು ನಗರ ಡಿವೈಎಸ್ಪಿ ಆಗಿದ್ದ ಟಿಸಿಎಂ ಶರೀಫ್ ಮತ್ತು ಬಂದರು ಇನ್ಸ್‌ಪೆಕ್ಟರ್ ಆಗಿದ್ದ ಜಯಂತ್ ವಿ. ಶೆಟ್ಟಿ ತನಿಖೆ ನಡೆಸಿದ್ದರಾದರೂ ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ. 2001ರಲ್ಲಿ ದಂಡುಪಾಳ್ಯ ಗ್ಯಾಂಗನ್ನು ವಿಜಯನಗರ ಇನ್ಸ್‌ಪೆಕ್ಟರ್ ಚಲಪತಿ ನೇತೃತ್ವದ ಪೊಲೀಸ್ ತಂಡ ಬಂಧಿಸಿ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಈ ಎರಡೂ ಪ್ರಕರಣಗಳು ಬೆಳಕಿಗೆ ಬಂದಿತ್ತು. ಪೊಲೀಸರು ಈ ಪ್ರಕರಣಗಳಲ್ಲಿ ದೋಚಲ್ಪಟ್ಟಿದ್ದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ತಂಡದ ಎಲ್ಲಾ ಆರೋಪಿಗಳು ಸಿಕ್ಕಿಬಿದ್ದು ವಿಚಾರಣೆಗೊಳಪಟ್ಟು ಮರಣದಂಡನೆ ಶಿಕ್ಷೆ ಸೇರಿದಂತೆ ಇತರ ಶಿಕ್ಷೆಗಳಿಗೆ ಒಳಗಾಗಿ ಪರಪ್ಪನ ಅಗ್ರಹಾರ ಜೈಲಿನ ಹೈ ಸೆಕ್ಯುರಿಟಿ ಸೆಲ್‌ನಲ್ಲಿ ಶಿಕ್ಷೆ ಅನುಭವಿಸುತ್ತಿದ್ದರೂ ಒಬ್ಬ ಆರೋಪಿ ಪೊಲೀಸರ ಕೈಗೆ ಸಿಕ್ಕಿಬಿದ್ದಿರಲಿಲ್ಲ. ಆತನೇ ಚಿಕ್ಕ ಹನುಮ. ಆತನನ್ನು ಇದೀಗ ಅಂದರೆ 29 ವರ್ಷಗಳ ಬಳಿಕ ಉರ್ವ ಪೊಲೀಸರು ಆಂಧ್ರಪ್ರದೇಶದಲ್ಲಿ ಪತ್ತೆಹಚ್ಚಿ ಬಂಧಿಸಿ ಕರೆದುಕೊಂಡು ಬಂದು ಮಂಗಳೂರಿನ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ಆತನಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.





ಆರೋಪಿ ಚಿಕ್ಕ ಹನುಮನನ್ನು ಬಂಧಿಸಿದ ಪೊಲೀಸ್ ತನಿಖಾ ತಂಡ

### ಆರೂರು ಭಾಸ್ಕರ್ ರಾವ್ ಹತ್ಯೆ

ಮಂಗಳೂರಿನ ಪ್ರತಿಷ್ಠಿತ ಕುಟುಂಬಗಳಲ್ಲಿ ಒಂದು ಆರೂರು ಫ್ಯಾಮಿಲಿ. ಟಾಟಾ ಮೋಟಾರ್ಸ್ ಸಂಸ್ಥೆಯ ಅಧಿ ಕೃತ ಫ್ರಾಂಚೈಸಿ ಇರುವುದು ಈ ಕುಟುಂಬದ ಕೈಯಲ್ಲಿ. ಈ ಕುಟುಂಬದ ಪ್ರತಿಷ್ಠಿತ ವೈದ್ಯ ಡಾ. ಆರೂರು ಭಾಸ್ಕರ್‌ರಾವ್. ಅವರು ಯೂರಾಲಾಜಿಸ್ಟ್. ನೂರಾರು ಮಂದಿ ಪೇಶೆಂಟ್‌ಗಳನ್ನು ಹೊಂದಿದ್ದರು. ಅವರಲ್ಲಿ ಬಹುತೇಕರು ಅಲ್ಪಸಂಖ್ಯಾತ ಕೋಮಿಗೆ ಸೇರಿದ ಮಹಿಳೆಯರು. ಮಂಗಳೂರಿನ ಕೇಂದ್ರ ಸ್ಥಾನವಾದ ಜ್ಯೋತಿ ವೃತ್ತದ ಬಳಿಯ ಕಟ್ಟಡದ ಮೊದಲ ಮಹಡಿಯಲ್ಲಿ ಅವರ ಕ್ಲಿನಿಕ್ ಇತ್ತು. ದಿನನಿತ್ಯ ನೂರಾರು ಪೇಶಂಟ್‌ಗಳು ಅವರಿಂದ ಚಿಕಿತ್ಸೆಗಾಗಿ ಬರುತ್ತಿದ್ದರು. ಅಂದು 29.09.1996 ಆದಿತ್ಯವಾರ. ಮಧ್ಯಾಹ್ನದ ವೇಳೆ ಅವರ ಸಹಾಯಕಿ ಊಟಕ್ಕೆಂದು ಹೊರಗೆ ಹೋಗಿದ್ದರು. ಡಾ. ಭಾಸ್ಕರ್‌ರಾವ್ ತನ್ನ ಚೆಯರ್‌ನಲ್ಲಿ ಕುಳಿತುಕೊಂಡು ಟೇಬಲ್‌ಗೆ ತಲೆ ಆನಿಸಿ ರೆಸ್ಟ್ ತೆಗೆದುಕೊಳ್ಳುತ್ತಿದ್ದರು. ರಸ್ತೆಯಲ್ಲಿ ಜನಸಂಚಾರ ವಿರಳವಾಗಿತ್ತು. ಇದೇ ಸಂದರ್ಭದಲ್ಲಿ ಅವರ ಕ್ಲಿನಿಕ್‌ಗೆ ನುಗ್ಗಿದ ಆಗಂತುಕರು ಅವರ ಕುತ್ತಿಗೆಗೆ ಚಾಕುವಿನಿಂದ ಇರಿದಿದ್ದರು. ದೈತ್ಯ ದೇಹದ ಅವರನ್ನು ಪಕ್ಕದ ಬಾತ್‌ರೂಮ್‌ಗೆ ಎಳೆದೊಯ್ದು ಕೈಯನ್ನು ಹಿಂಬದಿಗೆ ಕಟ್ಟಿ ದೇಹದ ಭಾಗಗಳಿಗೆ ತಿವಿದು ಹತ್ಯೆ ಮಾಡಿ ಅವರ ಮೈಮೇಲಿದ್ದ ಚಿನ್ನಾಭರಣ ಹಾಗೂ ಡ್ರಾವರ್‌ನಲ್ಲಿದ್ದ ನಗದನ್ನು ದೋಚಿ ಪರಾರಿಯಾಗಿದ್ದರು. ಊಟಕ್ಕೆ ಹೋಗಿದ್ದ ಅವರ ಸಹಾಯಕಿ ವಾಪಾಸ್ಸು ಬಂದಾಗ ಈ ಘೋರ ಘಟನೆ ಬೆಳಕಿಗೆ ಬಂದಿತ್ತು. ತಕ್ಷಣ ಬಂದರು ಪೊಲೀಸರಿಗೆ ದೂರು ನೀಡಲಾಗಿತ್ತು. ಹಿರಿಯ ಅಧಿಕಾರಿಗಳ ಸಹಿತ ಪೊಲೀಸರು ಸ್ಥಳಕ್ಕೆ ಧಾವಿಸಿದ್ದರು. ಕ್ಲಿನಿಕ್‌ನ್ನು ಪರಿಶೀಲನೆ ಮಾಡಿದಾಗ ಮಫ್ಲರ್, ಹೆಣ್ಣುಮಗುವಿನ ಡ್ರೆಸ್, ಕಾಂಡೋಮ್‌ಗಳ ಬಾಕ್ಸ್‌ಗಳು ಪತ್ತೆಯಾಗಿತ್ತು. ಇದರಿಂದಾಗಿ ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ಹತ್ಯೆ ನಡೆದಿರಬಹುದು ಎಂಬ ಶಂಕೆ ಮೂಡಿತ್ತು. ಈ ವದಂತಿ ಎಷ್ಟರಮಟ್ಟಿಗೆ ಹರಡಿತ್ತು ಅಂದರೆ ಅವರ ಇಡೀ ಕುಟುಂಬ ಮುಜುಗರ ಪಟ್ಟುಕೊಳ್ಳುವಂತಾಗಿತ್ತು. ಪೊಲೀಸರು ಹಲವು ಕೋನಗಳಲ್ಲಿ ತನಿಖೆ ನಡೆಸಿದರೂ ಫಲಕಾರಿ ಆಗಲಿಲ್ಲ. ಕೊನೆಗೆ ಪತ್ತೆಯಾಗದ ಪ್ರಕರಣವಾಗಿ ಮೂಲೆ ಸೇರಿತ್ತು.

### ಮತ್ತೊಂದು ಜೋಡಿ ಹತ್ಯೆ

ಆರೂರು ಭಾಸ್ಕರ್ ರಾವ್ ಹತ್ಯೆಯಾಗಿ ಒಂದು ವರ್ಷ ಕಳೆಯುವಷ್ಟರಲ್ಲಿ ಅಂದರೆ 1997 ಅಕ್ಟೋಬರ್ 12ರಂದು ಮಂಗಳೂರಿನ ಲೇಡಿಹಿಲ್- ಮಾರಿಗುಡಿ ರಸ್ತೆಯ ಬಲ ಭಾಗದಲ್ಲಿರುವ ಬಂಗಲೆಯೊಂದರಲ್ಲಿ ಜೋಡಿ ಹತ್ಯೆ ನಡೆದಿತ್ತು. ಅಲ್ಲಿ ಹತ್ಯೆಯಾದ ವೃದ್ದೆ ಲೂವಿಸ್ ಡಿಮೆಲ್ಲೊ (80) ಮತ್ತು ಅವರ ಸಹಾಯಕನಾಗಿದ್ದ 19ರ ಹರೆಯದ ಯುವಕ ರಂಜಿತ್ ವೇಗಸ್.


ಆರೋಪಿ ಚಿಕ್ಕ ಹನುಮ

ಲೂವಿಸ್ ಅವರನ್ನು ತಳ ಅಂತಸ್ತಿನಲ್ಲಿ ಕುತ್ತಿಗೆ ಸೀಳಿ ಹತ್ಯೆಗೈದು ಬಾತ್‌ರೂಮ್‌ನ ಟಬ್‌ನಲ್ಲಿ ಹಾಕಲಾಗಿದ್ದರೆ ಮೊದಲ ಮಹಡಿಯಲ್ಲಿ ಯುವಕ ರಂಜಿತ್‌ನನ್ನು ಅಟ್ಟಾಡಿಸಿ ಚೂರಿಯಿಂದ ತಿವಿದು ಕೊಲೆ ಮಾಡಲಾಗಿತ್ತು. ಲೂವಿಸ್ ಅವರ ಸಹೋದರಿ ಫೋನ್ ಮಾಡಿದಾಗ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಬಂದ ಸಂದರ್ಭದಲ್ಲಿ ಈ ಹತ್ಯೆ ಬೆಳಕಿಗೆ ಬಂದಿತ್ತು. ಉರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಜೋಡಿ ಕೊಲೆ ಆಗಿದ್ದರಿಂದ ತನಿಖೆಯನ್ನು ಅಂದಿನ ನಗರ ಡಿವೈಎಸ್ಪಿ ಟಿಸಿಎಂ ಶರೀಫ್ ಅವರು ವಹಿಸಿಕೊಂಡಿದ್ದರು. ವಿವಿಧ ಕೋನಗಳಲ್ಲಿ ತನಿಖೆ ನಡೆಸಿದ ಸಂದರ್ಭದಲ್ಲಿ ರಂಜಿತ್ ವೇಗಸ್‌ನ ತಂದೆಯ ಮೇಲೆ ಸಂಶಯ ಮೂಡಿತ್ತು. ಆತನನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆಗೊಳಪಡಿಸಿದಾಗ ಗೊಂದಲಕಾರಿ ಹೇಳಿಕೆ ನೀಡುತ್ತಿದ್ದ. ಕೊನೆಗೆ ಆತನನ್ನು ಪಾಲಿಗ್ರಾಫ್ ಮತ್ತು ಬ್ರೈನ್ ಮ್ಯಾಪಿಂಗ್ ಟೆಸ್ಟ್‌ಗೆ ಒಳಪಡಿಸಲಾಗಿತ್ತು. ಆದರೆ ಸಮರ್ಪಕವಾದ ವರದಿ ಬಾರದ ಹಿನ್ನೆಲೆಯಲ್ಲಿ ಆತನನ್ನು ಬಿಟ್ಟು ಕಳುಹಿಸಲಾಗಿತ್ತು.

### ಸಿಕ್ಕಿಬಿದ್ದ ದಂಡುಪಾಳ್ಯ ಗ್ಯಾಂಗ್

ಈ ಎರಡೂ ಘಟನೆಗಳು ನಡೆದು ನಾಲ್ಕು ವರ್ಷ ಕಳೆದ ನಂತರ ಅಂದರೆ 2001ರಲ್ಲಿ ಬೆಂಗಳೂರಿನ ವಿಜಯನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದ ಚಲಪತಿ ಮತ್ತವರ ತಂಡ ವಿವಿಧೆಡೆ ಕಾರ್ಯಾಚರಣೆ ನಡೆಸಿ ದಂಡುಪಾಳ್ಯ ಗ್ಯಾಂಗನ್ನು ಪತ್ತೆ ಹಚ್ಚಿ ವಿಚಾರಣೆಗೆ ಒಳಪಡಿಸಿತ್ತು. ಈ ಸಂದರ್ಭದಲ್ಲಿ ಮಂಗಳೂರಿನಲ್ಲಿ ನಡೆಸಿದ್ದ ಎರಡು ಕೊಲೆ ಪ್ರಕರಣಗಳ ಬಗ್ಗೆ ಮಾಹಿತಿ ನೀಡಿದ್ದರು. ಇನ್ಸ್‌ಪೆಕ್ಟರ್ ಚಲಪತಿಯವರು ಈ ಬಗ್ಗೆ ಡಿವೈಎಸ್ಪಿ ಟಿಸಿಎಂ ಶರೀಫ್ ಅವರಿಗೆ ದೂರವಾಣಿ ಕರೆ ಮಾಡಿ ಮಂಗಳೂರಿನಲ್ಲಿ ಪತ್ತೆಯಾಗದಿದ್ದ ಕೊಲೆ ಪ್ರಕರಣಗಳ ವಿವರ ಮತ್ತು ಭಾವಚಿತ್ರಗಳನ್ನು ಕಳುಹಿಸುವಂತೆ ಕೋರಿದ್ದರು. ಅದರಂತೆ ಆರೂರು ಭಾಸ್ಕರ್ ರಾವ್ ಮತ್ತು ಉರ್ವ ಜೋಡಿ ಕೊಲೆಯ ಭಾವಚಿತ್ರಗಳನ್ನು ಕಳುಹಿಸಲಾಗಿತ್ತು. ಇದನ್ನು ನೋಡಿದ ದಂಡುಪಾಳ್ಯ ಗ್ಯಾಂಗ್ ಎರಡೂ ಕೃತ್ಯಗಳನ್ನು ಮಾಡಿರುವುದನ್ನು ಒಪ್ಪಿಕೊಂಡಿದ್ದರು. ತದನಂತರ ದಂಡುಪಾಳ್ಯ ಕೃಷ್ಣ ಮತ್ತು ದೊಡ್ಡ ಹನುಮನನ್ನು ಸ್ಥಳ ಮಹಜರಿಗಾಗಿ ಮಂಗಳೂರಿಗೆ ಬಿಗಿ ಭದ್ರತೆಯಲ್ಲಿ ಕರೆತರಲಾಗಿತ್ತು.

☞ 14

# ಸೌಜನ್ಯ ಫೈಲ್ಸ್




16

ನಿರೂಪಣೆ :

**ಮೋಹನ್ ಬೋಳಂಗಡಿ**

# ವಿಠಲ ಗೌಡ ಪೊಲೀಸರಿಗೆ ನೀಡಿದ ಹೇಳಿಕೆ ಏನು?

**ಸೌ**ಜನ್ಯ ಹತ್ಯಾ ಪ್ರಕರಣದಲ್ಲಿ ವಿಠಲಗೌಡ ಪ್ರಮುಖ ಸಾಕ್ಷಿ. ಅವರು ಸೌಜನ್ಯಳ ಸೋದರಮಾವ. ಸೌಜನ್ಯಳನ್ನು ಕೊನೆಯ ಬಾರಿ ಜೀವಂತವಾಗಿ ನೋಡಿದ ವ್ಯಕ್ತಿ. ವಿಠಲಗೌಡರು 9-10-2012ರಂದು ಸಂಜೆ 4.15ರ ವೇಳೆಗೆ ಮನೆಯಿಂದ ಹೊರಟು ನೇತ್ರಾವತಿ ಸ್ನಾನಘಟ್ಟದ ಬಳಿಗೆ ಜೀಪಿನಲ್ಲಿ ಬರುತ್ತಿದ್ದಾಗ ಸೌಜನ್ಯ ಕಾಲೇಜು ಮುಗಿಸಿಕೊಂಡು ಸ್ನಾನಘಟ್ಟದ ಬಳಿ ಕೆಎಸ್‌ಆರ್‌ಟಿಸಿ ಬಸ್‌ನಿಂದ ಇಳಿದು ಕೊಡೆ ಹಿಡಿದುಕೊಂಡು ನಡೆದುಕೊಂಡು ಹೋಗುತ್ತಿದ್ದಾಗ ನೋಡಿದವರು. ಆ ದಿನ ಸಂಜೆ 6 ಗಂಟೆಯವರೆಗೂ ಸೌಜನ್ಯ ಮನೆಗೆ ಬಾರದಿದ್ದಾಗ ಆಕೆಯ ತಾಯಿ ಕುಸುಮಾವತಿಯವರು ಮೊದಲಿಗೆ ದೂರವಾಣಿ ಕರೆ ಮಾಡಿ ವಿಚಾರಿಸಿದ್ದು, ಇದೇ ವಿಠಲಗೌಡರನ್ನು. ತದನಂತರ ಅವರು ಸೌಜನ್ಯಳ ತಂದೆ ಚಂದಪ್ಪ ಗೌಡರೊಂದಿಗೆ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಹೋಗಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ಬಳಿ ಸೌಜನ್ಯ ನಾಪತ್ತೆಯಾದ ವಿಚಾರವನ್ನು ತಿಳಿಸಿದ್ದರು. ಅವರು ನೀಡಿದ ಸೂಚನೆಯಂತೆ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದ ಸಂದರ್ಭದಲ್ಲಿ ಜೊತೆಯಲ್ಲಿ ಇದ್ದವರು. ಮರುದಿನ ಸೌಜನ್ಯಳ ಬಗ್ಗೆ ಉಜಿರೆ ಎಸ್.ಡಿ.ಎಂ. ಕಾಲೇಜಿಗೆ ಹೋಗಿ ಪ್ರಾಂಶುಪಾಲರೊಂದಿಗೆ ವಿಚಾರಿಸಿದ್ದರು. ಇದೇ ಸಂದರ್ಭದಲ್ಲಿ ಸೌಜನ್ಯಳ ಮೃತದೇಹ ಪತ್ತೆಯಾದ ಬಗ್ಗೆ ಮಾಹಿತಿ ತಿಳಿದು ಸ್ಥಳಕ್ಕೆ ಬಂದವರು. ಸೌಜನ್ಯಳ ಮೃತದೇಹದ ಪಂಚನಾಮೆ ನಡೆಯುತ್ತಿದ್ದ ಸಂದರ್ಭದಲ್ಲಿ ಸ್ಥಳದಲ್ಲಿ ಇದ್ದವರು. ಮೃತದೇಹವನ್ನು ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ಕೊಂಡುಹೋದ ಸಂದರ್ಭದಲ್ಲಿ ಹಿಂಬಾಲಿಸಿಕೊಂಡು ಹೋದವರು. ಪೋಸ್ಟ್‌ಮಾರ್ಟಂ ಮುಗಿದ ಬಳಿಕ ಮೃತದೇಹವನ್ನು ಮನೆಗೆ ತಂದ ಸಂದರ್ಭದಲ್ಲಿಯೂ ಒಟ್ಟಿಗೆ ಇದ್ದವರು. ಅಂತಿಮ ಸಂಸ್ಕಾರದ ಸಂದರ್ಭದಲ್ಲಿಯೂ ಜೊತೆಯಲ್ಲಿ ಇದ್ದವರು. ಆದ್ದರಿಂದ ಈ ಪ್ರಕರಣದಲ್ಲಿ ವಿಠಲ ಗೌಡರ ಸಾಕ್ಷ್ಯ ಪ್ರಕರಣದ ತನಿಖಾಧಿಕಾರಿಯಾಗಿದ್ದ ಬೆಳ್ತಂಗಡಿ ಠಾಣೆಯ ವೃತ್ತ ನಿರೀಕ್ಷಕ ಭಾಸ್ಕರ್ ರೈ ಅವರಿಗೆ ಪ್ರಮುಖವಾಗಿತ್ತು.



ಡಿವೈಎಸ್ಪಿ ರುದ್ರಮುನಿ

ಸೌಜನ್ಯ ನಾಪತ್ತೆಯಾದ ದಿನ, ಮೃತದೇಹ ಪತ್ತೆಯಾದ ದಿನ, ಮಹಜರು ಮತ್ತು ಪೋಸ್ಟ್‌ಮಾರ್ಟಂ ನಡೆದ ದಿನ ಇನ್ಸ್‌ಪೆಕ್ಟರ್ ಭಾಸ್ಕರ್ ರೈಅವರು ಬೆಳ್ತಂಗಡಿಯಲ್ಲಿ ಇರಲಿಲ್ಲ. ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲ್ಪಟ್ಟಿದ್ದ ಮಧ್ಯ ಪ್ರದೇಶ ಮೂಲದ ಕಳ್ಳರ ತಂಡವನ್ನು ಕರೆದುಕೊಂಡು ಕಳವು ಸೊತ್ತುಗಳ ಸ್ವಾಧೀನಕ್ಕಾಗಿ ಮಧ್ಯ ಪ್ರದೇಶಕ್ಕೆ ತೆರಳಿದ್ದರು. ಸೌಜನ್ಯ ಪ್ರಕರಣ ನಡೆದ ಸಂದರ್ಭದಲ್ಲಿ ಭಾಸ್ಕರ್ ರೈ ಮಧ್ಯ ಪ್ರದೇಶದಲ್ಲಿದ್ದರು. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಜಿಲ್ಲಾ ಎಸ್ಪಿಯಾಗಿದ್ದ ಅಭಿಷೇಕ್ ಗೋಯಲ್ ಅವರ ಸೂಚನೆಯಂತೆ ವಾಪಾಸು ಬಂದು ಪ್ರಕರಣದ ತನಿಖೆಯನ್ನು ಬೆಳ್ತಂಗಡಿ ಎಸ್‌ಐ ಆಗಿದ್ದ ಯೋಗೀಶ್ ಕುಮಾರ್ ಅವರಿಂದ ತೆಗೆದುಕೊಂಡಿದ್ದರು.

ಅವರು ತನಿಖೆ ಆರಂಭಿಸುವ ಹಂತದಲ್ಲಿಯೇ ಧರ್ಮಸ್ಥಳ ಬಾಹುಬಲಿ ಬೆಟ್ಟದ ತಪ್ಪಲಿನಲ್ಲಿ ಶಂಕಿತ ಆರೋಪಿ ಸಂತೋಷ್‌ರಾವ್‌ನನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಠಾಣೆಯಲ್ಲಿ ಆತನನ್ನು ವಿಚಾರಣೆಗೆ ಗುರಿಪಡಿಸಿದ ಸಂದರ್ಭದಲ್ಲಿ ಠಾಣೆಯ ಸುತ್ತಮುತ್ತ ಧರ್ಮಸ್ಥಳ, ಉಜಿರೆ, ಬೆಳ್ತಂಗಡಿಯ ಸಾರ್ವಜನಿಕರು ಸೇರಿದ್ದರು ಮತ್ತು ಆರೋಪಿಯನ್ನು ತಮ್ಮ ವಶಕ್ಕೆ ಒಪ್ಪಿಸುವಂತೆ ಆಗ್ರಹಿಸಿದ್ದರು. ಈ ಸಂದರ್ಭದಲ್ಲಿ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದ ಕೆಎಸ್‌ಆರ್‌ಪಿ ಸಿಬ್ಬಂದಿಗಳು ಲಾಠಿಚಾರ್ಜ್ ನಡೆಸಿದ್ದು, ಈ ಸಂಬಂಧ ಎರಡು ಪ್ರಕರಣಗಳು ದಾಖಲಾಗಿದ್ದವು.

ಇನ್ಸ್‌ಪೆಕ್ಟರ್ ಭಾಸ್ಕರ್ ರೈಯವರು ಆರೋಪಿ ಸಂತೋಷ್‌ರಾವ್‌ನನ್ನು ಕೂಲಂಕಷವಾಗಿ ವಿಚಾರಣೆಗೆ ಗುರಿಪಡಿಸಿದ್ದರು. ಆತ ನೀಡಿದ ಹೇಳಿಕೆಯಂತೆ ಆತನೇ ಆ ಹತ್ಯೆಯ ಆರೋಪಿ ಎಂಬುದು ಖಚಿತವಾಗಿತ್ತು. ಆತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಎರಡು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಿದ್ದರು. ತದನಂತರ ಆತನನ್ನು ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜು ಆಸ್ಪತ್ರೆಯ ಫಾರೆನ್ಸಿಕ್ ತಜ್ಞರಾದ ಡಾ. ಮಹಾಬಲೇಶ್ ಶೆಟ್ಟಿ ಅವರ ಮುಂದೆ ಹಾಜರು ಪಡಿಸಿದ್ದರು. ಅವರು ಸಂತೋಷ್‌ರಾವ್‌ನನ್ನು ಪರೀಕ್ಷೆ ಮಾಡಿದ್ದು, ಆತನ ಮೈ ಮೇಲಿದ್ದ ಗಾಯಗಳ ಆಧಾರದಲ್ಲಿ ಆತನನ್ನು ಪ್ರಶ್ನೆ ಮಾಡಿ ಆತನೇ ಆರೋಪಿ ಎಂದು ದೃಢ ಪಡಿಸಿದ್ದರು. ತದನಂತರ ಆತನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಕೊಲೆ, ಅತ್ಯಾಚಾರ ಪ್ರಕರಣದ ಒಂದು ಹಂತದ ವಿಚಾರಣೆ ಮುಗಿದ ಬಳಿಕ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ಅವರು ಪ್ರಕರಣದ ತನಿಖೆಯನ್ನು ಮುಂದುವರಿಸಿದ ಸಂದರ್ಭದಲ್ಲಿ ಅವರಿಗೆ ಸಿಕ್ಕಿದ ಮೊದಲ ಸಾಕ್ಷಿಯೇ ವಿಠಲಗೌಡ. ಪ್ರಕರಣದ ದೂರುದಾರ ಸೌಜನ್ಯಳ ತಂದೆ ಚಂದಪ್ಪ ಗೌಡ ಮತ್ತು ಮೃತದೇಹ ಸಿಕ್ಕಿದ ನಂತರ ಕೊಲೆ ಪ್ರಕರಣದ ದೂರು ನೀಡಿದ್ದ ಜಗದೀಶ್ ಅವರ ಹೇಳಿಕೆಗಳು ಪ್ರಾಸಿಕ್ಯೂಷನ್‌ಗೆ ಪೂರಕವಾಗಿದ್ದವು. ಸೌಜನ್ಯಳ ಮಾವ ವಿಠಲಗೌಡನ ಹೇಳಿಕೆ ಪ್ರಕರಣದ ತನಿಖೆಯಲ್ಲಿ ಪ್ರಮುಖವಾಗಿತ್ತು. ಆದ್ದರಿಂದ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ಅವರು ಘಟನೆ ನಡೆದ ಏಳು ದಿನಗಳ ಬಳಿಕ ವಿಠಲಗೌಡ ಅವರನ್ನು ನೋಟೀಸು ನೀಡಿ ಠಾಣೆಗೆ ಕರೆಸಿಕೊಂಡಿದ್ದರು.



ಸಂತೋಷ್ ರಾವ್

ಆರಂಭದಲ್ಲಿ ವಿಠಲಗೌಡರೊಂದಿಗೆ ಲೋಕಾಭಿರಾಮವಾಗಿ ಮಾತನಾಡಿ ಅವರಿಗೆ ಗೊತ್ತಿದ್ದಂತಹ ಕೆಲವೊಂದು ಅಂಶಗಳನ್ನು ಕೇಳಿದ್ದರು. ವಿಠಲಗೌಡರು ಸಹಜವಾಗಿಯೇ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ಅವರ ಪ್ರಶ್ನೆಗಳಿಗೆ ಉತ್ತರಿಸಿದ್ದರು. ಘಟನೆ ನಡೆದ ದಿನದಿಂದ ಅವರು ವಿಚಾರಣೆಗೆ ಒಳಪಡುವ ದಿನದವರೆಗೆ ಏನೇನು ಘಟನೆಗಳು ನಡೆದಿದೆ. ಯಾರ್ಯಾರು ಯಾವ ಯಾವ ಮಾಹಿತಿಗಳನ್ನು ನೀಡಿದ್ದಾರೆ ಎಂಬ ಬಗ್ಗೆ ಕೂಲಂಕಷವಾಗಿ ವಿಚಾರಿಸಿದ್ದರು. ಬಂಧಿತ ಸಂತೋಷ್ ರಾವ್‌ನ ಬಗ್ಗೆಯೂ ವಿಚಾರಿಸಿದ್ದರು. ಆದರೆ ವಿಠಲಗೌಡರು ಆತನನ್ನು ನಾನು ಈತನಕ ನೋಡಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದರು. ಆದರೆ ಸಂತೋಷ್‌ರಾವ್ ಸೌಜನ್ಯ ನಾಪತ್ತೆಯಾಗುವ ಮೂರು ದಿನಗಳ ಮೊದಲಿನಿಂದ ಸ್ನಾನಘಟ್ಟದ ಪರಿಸರಕ್ಕೆ ಬರುತ್ತಿದ್ದು ವಿಠಲಗೌಡರ ಸುಪ್ರಭಾತ ಹೆಸರಿನ ಹೊಟೇಲಿನಲ್ಲಿಯೇ ಚಾ, ತಿಂಡಿ ತಿನ್ನುತ್ತಿದ್ದದ್ದು, ಊಟ ಪಾರ್ಸೆಲ್ ಕೊಂಡೊಯ್ಯುತ್ತಿದ್ದುದನ್ನು ವಿಠಲಗೌಡರು ವಿಚಾರಣೆಯ ಸಂದರ್ಭದಲ್ಲಿ ಹೇಳಿರಲಿಲ್ಲ. ಆದರೆ ಆರೋಪಿ ಸಂತೋಷ್‌ರಾವ್ ಈ ವಿಚಾರವನ್ನು ಪೊಲೀಸ್ ತನಿಖೆಯ ಸಂದರ್ಭದಲ್ಲಿ ಬಾಯಿ ಬಿಟ್ಟಿದ್ದ. ಆದರೆ ಅದನ್ನು ದಾಖಲು ಮಾಡಿಕೊಂಡಿರಲಿಲ್ಲ. ಆದ್ದರಿಂದ ವಿಠಲಗೌಡರು ಏನು ಹೇಳಿಕೆ ನೀಡಿದರೋ ಅದನ್ನೇ ಪೊಲೀಸರು ದಾಖಲಿಸಿಕೊಂಡಿದ್ದರು. ಅವರನ್ನು ಒತ್ತಾಯ ಮಾಡುವಂತಹ ಪರಿಸ್ಥಿತಿಯಲ್ಲಿ ಪೊಲೀಸರು ಇರಲಿಲ್ಲ. ಯಾಕಂತ ಹೇಳಿದರೆ ಅವರು ಸಂತ್ರಸ್ತೆಯ ಕುಟುಂಬಿಕರು.



ವಿಠಲಗೌಡ

ವಿಠಲಗೌಡರ ಹೇಳಿಕೆಯಲ್ಲಿ ಯಾವುದೇ ರೀತಿಯ ಸಂಶಯಾಸ್ಪದ ಘಟನೆಗಳು ಉಲ್ಲೇಖವಾಗಿರಲಿಲ್ಲ. ಅವರಿಗೆ ಇರಬಹುದಾದಂತಹ ಸಂಶಯಗಳ ಬಗ್ಗೆಯೂ ಅವರು ತುಟಿ ಬಿಚ್ಚಿರಲಿಲ್ಲ. ಆದ್ದರಿಂದ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ಅವರು ಅವರು ಏನು ಹೇಳಿದರೋ ಅದನ್ನಷ್ಟೇ ದಾಖಲು ಮಾಡಿಕೊಂಡಿದ್ದರು. ತದನಂತರದ ತನಿಖೆಯ ಸಂದರ್ಭದಲ್ಲಿಯೂ ವಿಠಲಗೌಡರಾಗಲೀ, ಸೌಜನ್ಯಳ ಮನೆಯವರಾಗಲೀ ಯಾರ ಬಗ್ಗೆಯೂ ಸಂಶಯ ವ್ಯಕ್ತಪಡಿಸಿ ಮಾಹಿತಿಯನ್ನು ತನಿಖಾಧಿಕಾರಿಗಳಿಗೆ ನೀಡಿರಲಿಲ್ಲ. ಪೊಲೀಸರು ತನಿಖೆಯನ್ನು ಮುಂದುವರಿಸಿದಂತೆಯೇ ಆರೋಪಿ ಸಂತೋಷ್‌ರಾವ್ ವಿರುದ್ಧವಾಗಿ ಹಲವಾರು ಸಾಕ್ಷ್ಯಗಳು ಲಭ್ಯವಾಗಿತ್ತು. ಅದನ್ನೆಲ್ಲಾ ಕ್ರೋಢೀಕರಿಸುವ ಕೆಲಸವನ್ನು ಮಾಡುತ್ತಿದ್ದಂತೆಯೇ ಸೌಜನ್ಯಳಿಗೆ ನ್ಯಾಯ ಒದಗಿಸಬೇಕು ಎಂಬ ನಿಟ್ಟಿನಲ್ಲಿ ಹೋರಾಟಗಳು ಆರಂಭವಾಗಿತ್ತು. ಕೊನೆಗೆ ಹೋರಾಟಗಳು ಸ್ತಬ್ಧಗೊಂಡ ನಂತರ ಸರಕಾರ ಈ ಪ್ರಕರಣವನ್ನು ಸಿಓಡಿಗೆ ವಿಸ್ತೃತ ತನಿಖೆಗಾಗಿ ಒಪ್ಪಿಸಿತ್ತು.



ಧೀರಜ್ ಜೈನ್

ಸಿಓಡಿ ಡಿವೈಎಸ್ಪಿ ರುದ್ರಮುನಿ ಅವರು ಬೆಳ್ತಂಗಡಿಗೆ ಬಂದು ಪ್ರಕರಣದ ಕಡತವನ್ನು ಸರಕಾರಿ ಆದೇಶದಂತೆ ಪಡೆದುಕೊಂಡು ಪರಿಶೀಲನೆ ಮಾಡಿದಾಗ ಅದರಲ್ಲಿ ಮನೆಯವರನ್ನು ಹೊರತುಪಡಿಸಿ ಮುಖ್ಯವಾದ ಸಾಕ್ಷಿ ಇದ್ದದ್ದು ವಿಠಲಗೌಡರದ್ದು. ಅವರು ಮನೆಯವರೇ ಆಗಿದ್ದರೂ ಸಂತ್ರಸ್ತ ಬಾಲಕಿಯನ್ನು ಕೊನೆಯ ಬಾರಿಗೆ ನೋಡಿದ್ದವರು ಮತ್ತು ಸಾಧಾರಣವಾಗಿ ಪ್ರಕರಣಗಳ ಮಾಹಿತಿ ಇದ್ದವರು. ಅವರ ಹೇಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರಿಗೆ ಆ ಸಂದರ್ಭದಲ್ಲಿ ಏನೆಲ್ಲ ತಿಳಿದಿತ್ತೋ ಅದನ್ನು ತನಿಖಾಧಿಕಾರಿಗಳ ಮುಂದೆ ಸವಿಸ್ತಾರವಾಗಿ ತೆರೆದಿಟ್ಟಿದ್ದರು. ಆದರೂ ಪ್ರಕರಣ ನಡೆದು ಒಂದು ತಿಂಗಳು ಕಳೆದಿದ್ದರಿಂದ ಹೆಚ್ಚುವರಿ ಮಾಹಿತಿಗಳು ಅವರಲ್ಲಿ ಇರಬಹುದೇ ಎಂಬ ಕುತೂಹಲದಿಂದ ಸಿಓಡಿ ಡಿವೈಎಸ್ಪಿ ರುದ್ರಮುನಿಯವರು ವಿಠಲಗೌಡರನ್ನು ಬೆಳ್ತಂಗಡಿ ಪ್ರವಾಸಿ ಬಂಗಲೆಗೆ ಕರೆಸಿ ವಿಚಾರಣೆ ನಡೆಸಿದ್ದರು. ಅದಕ್ಕಿಂತ ಮೊದಲು ಸೌಜನ್ಯಳ ತಾಯಿ ಕುಸುಮಾವತಿಯವರನ್ನು ಕರೆಸಿದ್ದರು. ಒಂದು ತಿಂಗಳ ಹಿಂದೆ ನೀಡಿದ್ದ ಹೇಳಿಕೆಯಲ್ಲಿ ಪ್ರಸ್ತಾಪಿಸಲಾಗಿದ್ದ ಅಂಶಗಳನ್ನು ಹೊರತುಪಡಿಸಿ ಹೆಚ್ಚಿನ ಮಾಹಿತಿಗಳನ್ನು ಅವರಿಬ್ಬರೂ ನೀಡಿರಲಿಲ್ಲ. ಆದ್ದರಿಂದ ಈ ಹಿಂದೆ ನೀಡಿದ್ದ ಹೇಳಿಕೆಗಳನ್ನೇ ಸಿಓಡಿ ಅಧಿಕಾರಿಗಳು ಮರು ದಾಖಲಿಸಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಕುಸುಮಾವತಿಯವರು ಮೂವರು ಯುವಕರ ಹೆಸರುಗಳನ್ನು ಚೀಟಿಯೊಂದರಲ್ಲಿ ಬರೆದುಕೊಂಡು ಬಂದು ನೀಡಿದ್ದರಾದರೂ ಅದನ್ನು ತನಿಖೆ ನಡೆಸಿದ ಸಂದರ್ಭದಲ್ಲಿ ಆ ಹೆಸರುಗಳಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂಬ ಅಂಶ ಸ್ಪಷ್ಟಗೊಂಡಿತ್ತು. ವಿಠಲಗೌಡರು ಪ್ರಕರಣದ ಮೊದಲ ತನಿಖಾಧಿಕಾರಿ ಭಾಸ್ಕರ್ ರೈ ಮತ್ತು ನಂತರದ ತನಿಖಾಧಿಕಾರಿ ರುದ್ರಮುನಿ ಅವರಿಗೆ ನೀಡಿದ ಹೇಳಿಕೆಯಲ್ಲಿ ಸಂತೋಷ್‌ರಾವ್‌ನನ್ನು ಹೊರತುಪಡಿಸಿ ಮತ್ಯಾರ ಹೆಸರುಗಳನ್ನು ಉಲ್ಲೇಖಿಸಿರಲಿಲ್ಲ. ಆದರೆ ವಿಠಲಗೌಡರು 2016ರಲ್ಲಿ ಅಂದರೆ ಘಟನೆ ನಡೆದ ನಾಲ್ಕು ವರ್ಷಗಳ ನಂತರ ನಡೆದಿದ್ದ ನ್ಯಾಯಾಲಯದ ವಿಚಾರಣೆ ಸಂದರ್ಭದಲ್ಲಿ ಮಲ್ಲಿಕ್ ಜೈನ್, ಉದಯ್ ಜೈನ್ ಮತ್ತು ಧೀರಜ್ ಕೆಲ್ಲ ಅವರ ಹೆಸರನ್ನು ಸಿಬಿಐ ಪ್ರಾಸಿಕ್ಯೂಟರ್ ಶಿವಾನಂದ ಪೆರ್ಲ ಅವರು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದರು. ಈ ಮೂವರನ್ನು ನಾಲ್ಕು ವರ್ಷಗಳ ಹಿಂದೆಯೇ ಸಿಓಡಿ ಅಧಿಕಾರಿಗಳು ಪ್ರಶ್ನಿಸಿದ್ದರು ಇವರ ಹೆಸರುಗಳನ್ನು ಚೀಟಿಯಲ್ಲಿ ಬರೆದು ಕುಸುಮಾವತಿಯವರು ನೀಡಿದ್ದರು. ಆ ಸಂದರ್ಭದಲ್ಲಿ ಈ ಮೂರು ಮಂದಿ ಯುವಕರ ಮೊಬೈಲ್ ಟವರ್ ಲೊಕೇಶನ್‌ಗಳ ಆಧಾರದಲ್ಲಿ ತನಿಖೆ ನಡೆಸಲಾಗಿತ್ತು. ಅದನ್ನು ಕ್ರಾಸ್ ವೆರಿಫಿಕೇಶನ್ ಮಾಡಲಾಗಿತ್ತು. ಸಿಓಡಿ ಅಧಿಕಾರಿಗಳ ಮುಂದೆ ಅವರು ನೀಡಿದ್ದ ಹೇಳಿಕೆ ಸತ್ಯಕ್ಕೆ ಹತ್ತಿರವಾಗಿದೆ ಎಂಬ ತೀರ್ಮಾನಕ್ಕೆ ಬರಲಾಗಿತ್ತು.



ಉದಯ್ ಜೈನ್




ಮಲ್ಲಿಕ್ ಜೈನ್

ಪೊಲೀಸರು ಮತ್ತು ಸಿಓಡಿ ಅಧಿಕಾರಿಗಳು ತನಿಖೆ ನಡೆಸಿದ ಸಂದರ್ಭದಲ್ಲಿ ಯಾವುದೇ ಅನುಮಾನಗಳನ್ನು ವ್ಯಕ್ತಪಡಿಸದೇ ಇದ್ದ ವಿಠಲಗೌಡರು ನ್ಯಾಯಾಲಯದ ವಿಚಾರಣೆಯ ಸಂದರ್ಭದಲ್ಲಿ ಮುಖ್ಯ ವಿಚಾರಣೆಯಲ್ಲಿಯೇ ಉದಯ್ ಜೈನ್, ಮಲ್ಲಿಕ್ ಜೈನ್, ಧೀರಜ್ ಕೆಲ್ಲ ಅವರ ಹೆಸರುಗಳನ್ನು ಪ್ರಸ್ತಾಪಿಸಿದ್ದರು. ಈ ಹೆಸರುಗಳನ್ನು ಪ್ರಸ್ತಾಪಿಸಿದ ಮುಖ್ಯ ಉದ್ದೇಶವೇ ಆರೋಪಿ ಸಂತೋಷ್‌ರಾವ್‌ಗೆ ಸಂಶಯದ ಲಾಭವನ್ನು ಒದಗಿಸುವುದಾಗಿತ್ತು. ಈ ಹೇಳಿಕೆಯ ಆಧಾರಲ್ಲಿಯೇ ಇಡೀ ಪ್ರಕರಣವು ಮತ್ತೊಂದು ತಿರುವನ್ನು ಪಡೆಯಿತು.

**ಮುಂದುವರಿಯುವುದು.....**

**ನೋಡೋಕೇನೋ ಇರಾನ್ ಹಠವನ್ನೂ ಬಿಡದೆ, ಅಮೆರಿಕಾದ ಆರ್ಭಟಕ್ಕೂ ಅಲುಗದೆ ನಿಶ್ಚಲವಾಗಿ ನಿಂತಿದೆ. ಆದ್ರೆ, ಆ ದೇಶದ ಒಳಗೇ ಈಗ ಆಕ್ರೋಶದ ಕಾಳ್ಗಿಚ್ಚು ಧಗಧಗ ಉರಿಯುತ್ತಿದೆ. ಅದರಿಂದ ಅಂದ್ರೆ ಅಮೇರಿಕಾ ಹಿಂಸೆಯಿಂದ ಬಚಾವ್ ಆಗೋಕೆ ಸಾಧ್ಯವೇ ಇಲ್ಲದಂಥಾ ಸ್ಥಿತಿ ನಿರ್ಮಾಣವಾಗಿದೆ. ಇರಾನ್ ಈಗ ಬರೀ ದೇಶವಲ್ಲ. ಜ್ವಾಲಾಮುಖಿ ಆಸ್ಫೋಟಗೊಳ್ತಾ ಇರೋ ಅಗ್ನಿಪರ್ವತ! ಒಳಗೊಳಗೇ ಕೊತಕೊತ ಅಂತ ಕುದಿಯುತ್ತಿರೋ ಆ ಅಗ್ನಿ ಪರ್ವತವನ್ನ, ಹೊರಗಿನಿಂದಲೇ ಸರ್ವನಾಶ ಮಾಡೋಕೆ, ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತುದಿಗಾಲಲ್ಲಿ ನಿಂತಿದ್ದಾರೆ!!**



# ಇರಾನ್ v/s ಅಮೇರಿಕ ಯುದ್ಧ ನಡೆದರೆ ಭಾರತದ ಮೇಲಾಗುವ ಪರಿಣಾಮಗಳೇನು?

ಮಹದೇವ್ ಕೆಂಪಯ್ಯ

ಇರಾನ್ ಎಂದರೆ ಅದೂ ಭಾರತದ ಪುರಾಣದಲ್ಲಿ ಬರುವ ಆರ್ಯವರ್ತ ಪ್ರದೇಶ. ಹೀಗಾಗಿ, ಪರ್ಷಿಯ ಎಂದಿದ್ದ ದೇಶವನ್ನು ಇರಾನ್ ಅಂತಾ ನಾಮಕರಣ ಮಾಡಿಕೊಂಡರು. ಆರ್ಯನ್ ಅಪಭ್ರಂಶ ಪದವೇ ಇರಾನ್. ಸುಮಾರು ಇಪ್ಪತ್ತು ಸಾವಿರ ವರ್ಷಗಳ ಹಿಂದೆ ಬಂದ ಆಫ್ರಿಕಾ ಖಂಡದ ಕರಿ ಜನ ಮತ್ತು ಹತ್ತು ಸಾವಿರ ವರ್ಷಗಳ ಹಿಂದೆ ಯುರೋಪ್ ನಿಂದ ಬಂದ ಬಿಳಿ ಜನರ ಸಂಘರ್ಷ ಭೂಮಿಯೇ ಮಧ್ಯ ಏಷ್ಯಾ. ಬಹುಶಃ ಏಷ್ಯಾ ಖಂಡ ಪೂರಾ ಚೀನಿ ಮಾದರಿ ಜನ ವಾಸವಿದ್ದಿರ ಬಹುದು. ಇವರನ್ನು ಆಫ್ರಿಕಾದಿಂದ ಬಂದ ಬಲಿಷ್ಠ ಕರಿ ಜನ, ದೈಹಿಕವಾಗಿ ದುರ್ಬಲರಾದ ಚೀನಿ ಮಾದರಿ ಜನರನ್ನು ಪೂರ್ವ ಏಷ್ಯಾ ಕಡೆ ಅಟ್ಟಿರಬಹುದು.



ಮಾನವ ಇತಿಹಾಸಕಾರು 30 ಸಾವಿರ ವರ್ಷಗಳ ಹಿಂದೆ ಆಹಾರ ಅರಸಿ ಮಾನವರ ಮಹಾ ವಲಸೆ ಆರಂಭವಾಯಿತು ಅಂತಾ ಹೇಳುತ್ತಾರೆ. ಹೀಗೇ ಆಫ್ರಿಕಾದಿಂದ ಏಷ್ಯಾ ಕಡೆ ಮೊದಲು ಹೆಜ್ಜೆ ಹಾಕಿದ್ದು ಈಗಿನ ಭಾರತೀಯರು. ಈ ಬಗ್ಗೆ 15 ವರ್ಷಗಳ ಹಿಂದೆ ಸಂಶೋಧನೆಗೆ ಇಳಿದ ವಿಜ್ಞಾನಿಗಳಿಗೆ ತಮಿಳುನಾಡಿನ ವ್ಯಕ್ತಿ ಒಬ್ಬರಲ್ಲಿ 20 ಸಾವಿರ ವರ್ಷಗಳ ಹಿಂದಿನ ಆಫ್ರಿಕನ್ ಜೀನ್ಸ್‌ನ್ನು ಕಂಡು ಹಿಡಿದು ಪ್ರಕಟಿದರು. ಆದರೆ ಉತ್ತರ ಭಾರತದ ದಡ್ಡರು ತಾವು ಆರ್ಯರು ಅಂತ ತಾವೇ ಭ್ರಮೆ ಹುಟ್ಟಿಸಿಕೊಂಡು, ಅದನ್ನು ಸಮಾಜ ವಿಜ್ಞಾನಕ್ಕೆ ಸೇರಿಸುವ ಪ್ರಯತ್ನ ಮಾಡಲೇ ಇಲ್ಲಾ. ಭಾರತದ ಸುನ್ನಿ ಮುಸ್ಲಿಮರು ಮೂಲತಃ ದಲಿತರಾಗಿದ್ದರೂ, ತಮ್ಮ ಮೈ ಬಣ್ಣ ತುಸು ಬೆಳ್ಳಗಿದೆ ಅಂತಾ ನಾವೆಲ್ಲರೂ ಅರಬ್ ಮೂಲದವರು ಅಂತಾ ಭ್ರಮಿಸಿದರಂತೆ. ಇದೇನೇ ಇರಲಿ, ಬಿಳಿ ಜನರ ದಾಳಿ ಹಿಮ್ಮೆಟ್ಟಿಸಿ ಮೊದಲು ಆಫ್ರಿಕಾದಿಂದ ಬಂದ ಕರಿಯರು ಮೊದಲು ಆಧುನಿಕ ನಾಗರಿಕತೆ ಕಟ್ಟಿದ್ದು ಈಜಿಪ್ಟ್ ನಲ್ಲಿ.

ಹಾಗೇ ಕರಿ ಜನರ ದಾಳಿಯನ್ನು ಸಾವಿರಾರು ವರ್ಷಗಳಿಂದ ಸಂಘರ್ಷಿಸಿ ಒಂದು ದೊಡ್ಡ ನೆಲೆ ಕಂಡು ಕೊಂಡ ಬಿಳಿ ಜನರು ಕಟ್ಟಿದ ತಾಣವೇ ಇರಾಕಿನ ಮೆಸೋಪೊಟೇಮಿಯ ನಾಗರೀಕತೆ. ಆದರೆ, ಇವರೆಲ್ಲರಿಗಿಂತ ಹತ್ತು ಸಾವಿರ ವರ್ಷಗಳ ಹಿಂದೆ ನಾಗರೀಕತೆ ಕಟ್ಟಿ ಸೌದಿ, ಇರಾಕ್ ಇರಾನ್ ಅಫ್ಘಾನಿಸ್ತಾನ್ ಪಾಕಿಸ್ತಾನ ಭಾರತದ ಭಾಗಗಳಲ್ಲಿ ನೆಲೆ ನಿಂತಿದ್ದು ಕರಿ ಜನರಿದ್ದ ಸಿಂಧು ನಾಗರೀಕತೆ. ಸದಾ ಸಂಘರ್ಷ ನಡೆಸುತ್ತಿದ್ದ ಕರಿ ಬಿಳಿಯರು ತಮ್ಮ ಕಚ್ಚಾಟದಲ್ಲಿ ಗೆಲ್ಲಲು ತೋಳ್ಬಲಕ್ಕಿಂತ ಆತೀಂದ್ರ, ಶಕ್ತಿಗಳ ಮೊರೆ ಹೋದರು. ಇದು ನರಬಲಿ, ಪ್ರಾಣಿಬಲಿಯಂಥ ಅತಿರೇಕಕ್ಕೆ ಹೋದಾಗ ಕೆಲ ಜ್ಞಾನಿಗಳು ಸಾತ್ವಿಕ ದೈವಗಳ ಆವಿಷ್ಕಾರ ಮಾಡಿದರು. ಇದು ಮೊದಲಿಗೆ ಅನುಷ್ಠಾನಕ್ಕೆ ಬಂದಿದ್ದೆ, ಮೆಸೋಪೊಟೇಮಿಯ ನಾಗರೀಕತೆಯಲ್ಲಿ. ಅದೇ ಈಗಿನ ಹಿಂದೂ ಧರ್ಮ. ಹೀಗಾಗಿ ಇರಾಕ್‌ನ ಮೆಸಪೋತೇಮಿಯ ನಾಗರೀಕ ಅವಶೇಷಗಳಲ್ಲಿ ಹಿಂದೂ ದೇವತೆಗಳ ಶಿಲ್ಪಗಳು ದೊರೆತಿವೆ. ಇವರೆಲ್ಲ ಮೂಲ ಆರ್ಯರು ಅಥವಾ ಬಿಳಿ ಜನ. ಆದರೆ ಮಾನವ ಇತಿಹಾಸಕಾರರು ಏಷ್ಯಾದಲ್ಲಿರುವ ಬಿಳಿ ಜನ ಮತ್ತು ಕರಿ ಜನ ಸಮ್ಮಿಶ್ರವಾಗಿ 20 ಸಾವಿರ ವರ್ಷಗಳೇ ಕಳೆದು ಹೋಗಿವೆ. ಆರ್ಯ ದ್ರಾವಿಡ ಅನ್ನೋ ತಳಿಗಳೆಲ್ಲ ಮಿಶ್ರ ತಳಿಗಳು ಅನ್ನುತ್ತಾರೆ. ಇದು ಸತ್ಯ ಕೂಡಾ. ಆಫ್ರಿಕಾ ಮೂಲ ತಳಿಗಳಾಗಿದ್ದರೆ ಸಂಪೂರ್ಣ ನೀಗ್ರೋ ಅಂಶ ಇರಬೇಕಿತ್ತು. ಶುದ್ಧ ಬಿಳಿ ತಳಿಗಳಾಗಿದ್ದರೆ ಗೋಲ್ಡನ್ ಬಣ್ಣದ ಕೆಂಚು ಕೂದಲು ಇರಬೇಕಿತ್ತು ಅನ್ನುತ್ತಾರೆ. ಯುರೋಪ್‌ನಲ್ಲಿ ಕರಿ ಕೂದಲು ಇರುವವರೆಲ್ಲ ಮಿಶ್ರ ತಳಿಗಳು ಅನ್ನುತ್ತಾರೆ.



ಮುಂದೆ ಈ ವರ್ಣ ಸಂಘರ್ಷ ಅತಿರೇಕಕ್ಕೆ ಹೋಗಿ ತಮ್ಮ ನಾಗರೀಕತೆಗಳನ್ನು ನಾಶ ಮಾಡಿಕೊಂಡರು. 5 ಸಾವಿರ ವರ್ಷಗಳ ಹಿಂದಿನ ಈಜಿಪ್ಟ್ ಮೆಸೋ ಸಿಂಧೂ ನಾಗರೀಕತೆ ಗಮನಿಸಿದರೆ ಬಹಳ ವೈಜ್ಞಾನಿಕವಾಗೇ ಬೆಳೆದಿರುವುದು ಸ್ಪಷ್ಟವಾಗುತ್ತೆ. ಇರಾಕ್‌ನಲ್ಲಿ ದೊರೆತ ದಾಖಲೆಗಳ ಪ್ರಕಾರ ಗಣಿತ ವಿಜ್ಞಾನದಲ್ಲಿ ಬಹಳ ಮುಂದುವರೆದಿದ್ದರು. ಯಾವುದೇ ಘರ್ಷಣೆ ಇಲ್ಲದೆ ಆ ನಾಗರೀಕತೆಗಳು ಬೆಳೆದಿದ್ದರೆ, ಇಷ್ಟರಲ್ಲಾಗಲೇ ಈ ಮನುಕುಲ ಮಂಗಳನಲ್ಲಿ ನೆಲೆಸಿ, ಅಲ್ಲಿಂದಾಚೆ ಸಹ ಸೂರ್ಯನಿಂದಾಚೆಗೂ ಬಾಹ್ಯ ಪರ್ಯಟನೆ ಮಾನವ ಸಹಿತ ಹೊರಟಿರುತ್ತಿದ್ದ. ಮೂರ್ಖ ಮಾನವರು ತಮ್ಮಲ್ಲೇ ಹೊಡೆದಾಡಿಕೊಂಡು ಹಿಂದಕ್ಕುಳಿದರು. ಇದಾದ ನಂತರ ದೇವರು ಧರ್ಮ ಅಂತ ಮಾನವರಲ್ಲಿ ಗುಣಮೌಲ್ಯ ತುಂಬುವ ಪ್ರಯತ್ನವಾಯಿತು. ಆದರೂ ಮನುಷ್ಯನ ಮೂಲ ದುರ್ಗುಣವಾದ ತಾವು ಶ್ರೇಷ್ಠ, ಮಿಕ್ಕವರು ನಿಕೃಷ್ಟ ಅನ್ನುವ ತಾರತಮ್ಯ ಮಾತ್ರ ಅಳಿಸಿ ಹೋಗಲಿಲ್ಲ.

ಮೊದಲಿಗೆ ಹಿಂದೂಗಳು ಅಂದರೆ ಇರಾಕಿನ ಆರ್ಯರು ವೇದ ರಚಿಸಿಕೊಂಡು ಪ್ರವರ್ಧಮಾನಕ್ಕೆ ಬರುತ್ತಿದ್ದಂತೆ, ಇವರಿಗೆ ಸೋತು, ಗುಲಾಮರಾಗಿ ದುಡಿಯುತ್ತಿದ್ದ ದ್ರಾವಿಡ ಜನ ಅಂದರೆ ಕರಿ ಜನ ಕಾಲಾನಂತರ ಆರ್ಯರಿಗೆ ಪ್ರತಿಯಾಗಿ ಜೈನ ಧರ್ಮ ಪಾರ್ಸಿ ಧರ್ಮ ಸ್ಥಾಪಿಸಿಕೊಂಡರು. ಲಿಂಗಾರಾಧನೆ ಬಹಳ ಪ್ರಾಚೀನ ಆಚರಣೆ. ಟರ್ಕಿಯಲ್ಲಿ ಸಿಕ್ಕ 12 ಸಾವಿರ ವರ್ಷಗಳ ಹಿಂದಿನ ಅವಶೇಷವೇ ಸಾಕ್ಷಿ. ಹೀಗಾಗಿ ಮೂರೂವರೆ ಸಾವಿರ ವರ್ಷಗಳ ಹಿಂದೆ ಸ್ಥಾಪಿತವಾದ ಜೈನ ಧರ್ಮ ಶೈವ ಪಂಥಕ್ಕೆ ಸೇರಿರಬೇಕು. ಪಶುಪತಿ ಅಥವಾ ವೃಷಭನಾಥರಿಂದ ಜೈನ ಧರ್ಮ ಸ್ಥಾಪಿತವಾಯಿತು. ವ್ಯಕ್ತಿ ಒಬ್ಬರಿಂದ ಸ್ಥಾಪಿತವಾದ ಮೊದಲ ಧರ್ಮ ಇದೇ ಅನ್ನಿಸುತ್ತೆ. ಅವರು ಒಂದಷ್ಟು ಸಂಘಟಿತರಾಗಿ ಆರ್ಯ ಧರ್ಮ ಧ್ವಂಸ ಮಾಡಿ. ಅವರನ್ನು ಇರಾನ್ ಕಡೆ ಅಟ್ಟಿದರು.



ಮುಂದೆ, ಜೈನರ ಕೈ ಕೆಳಗೆ ಗುಲಾಮರಂತೆ ದುಡಿಯುತ್ತಿದ್ದ ಈಜಿಪ್ಟ್ ಮೂಲದ ಯಹೂದಿಗಳು ಮೋಸೆಸ್ ಎಂಬ ಪ್ರವಾದಿಯಿಂದ ಜೈನರನ್ನು ಅಟ್ಟಿ ಇರಾಕ್ ಆಕ್ರಮಿಸಿಕೊಂಡರು. ಇವರು ತಮ್ಮ ಮೂಲ ಪುರುಷ ಜುಡಾ ಅಂತ ಅವರೊಂದು ಕತೆಕಟ್ಟಿಕೊಂಡು ಚತುರ್ ವೇದಗಳಂತೆ ತೋರಾ, ನೇವಿಯಿಮ್, ಕೇತುವಿಮ್ ಎಂಬ ಮೂರೂ ಗ್ರಂಥಗಳ ಜೊತೆಗೆ ಕ್ಷುದ್ರ ವಿದ್ಯೆ ಕಲಿಸುವ ಅಥರ್ವಣ ವೇದದಂತೆ ನಾಲ್ಕನೇ

☞ 14

**ಡೊನಾಲ್ಡ್ ಟ್ರಂಪ್ ಅವರ ಎರಡನೇ ಅವಧಿಯ 'ಅಮೆರಿಕಾ ಫಸ್ಟ್' ನೀತಿಯು ಜಾಗತಿಕ ರಾಜಕೀಯದಲ್ಲಿ ಅಲ್ಲೋಲ ಸೃಷ್ಟಿಸಿದೆ. ಇರಾನ್ ಮೇಲಿನ ಆರ್ಥಿಕ ನಿರ್ಬಂಧಗಳು ಭಾರತದ ಆಮದುರಫ್ತಿನ ಮೇಲೆ ಪರಿಣಾಮ ಬೀರಿದ್ದು, ಟ್ರಂಪ್ ಅವರ ಸರ್ವಾಧಿಕಾರಿ ಧೋರಣೆಯು ವಿಶ್ವವನ್ನು ಗಂಡಾಂತರದತ್ತ ತಳ್ಳುತ್ತಿದೆ.**

## ದಿ ಡೇಂಜರಸ್ ಟ್ರಂಪ್!!

ಡೊನಾಲ್ಡ್ ಟ್ರಂಪ್ ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷ ಗಾದಿಗೇರುತ್ತಿದ್ದಂತೆ ಜಾಗತಿಕ ರಾಜಕಾರಣದಲ್ಲಿ ಅಲ್ಲೋಲಕಲ್ಲೋಲ ಶುರುವಾಗಿದೆ. ವೆನುಜುವೇಲ ಅಧ್ಯಕ್ಷ ನಿಕೋಲಸ್ ಮಡುರೊ ಬಂಧನ, ಗ್ರೀನ್‌ಲ್ಯಾಂಡ್ ಖರೀದಿಸುವ ಹಠ ಹಾಗೂ ಇರಾನ್ ಮೇಲೆ ವಿಽಸುತ್ತಿರುವ ಕಠಿಣ ಆರ್ಥಿಕ ಸುಂಕಗಳು ಟ್ರಂಪ್ ಅವರ 'ಅಮೆರಿಕಾ ಫಸ್ಟ್' ನೀತಿಯ ಭೀಕರ ರೂಪವನ್ನು ತೋರಿಸುತ್ತಿವೆ. ಟ್ರಂಪ್ ಅವರ ಈ ನಡೆಗಳನ್ನು ಹಲವರು 'ಸರ್ವಾಧಿಕಾರಿ ಧೋರಣೆ' ಎಂದು ಕರೆಯುತ್ತಿದ್ದಾರೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಮೆರಿಕ ಇತರ ದೇಶಗಳ ಸಾರ್ವಭೌಮತ್ವಕ್ಕೆ ಧಕ್ಕೆ ತರುತ್ತಿದೆ ಎಂಬ ಚರ್ಚೆ ಶುರುವಾಗಿದೆ. ಇರಾನ್ ಮೇಲೆ ವಿಧಿಸಿರುವ ಶೇ. 25ರಷ್ಟು ಹೆಚ್ಚುವರಿ ಸುಂಕವು ಭಾರತದ ರಫ್ತು ಮತ್ತು ತೈಲ ಆಮದಿನ ಮೇಲೆ ನೇರ ಪರಿಣಾಮ ಬೀರಲಿದೆ. ಹೀಗಾಗಿ, ಭಾರತ ಸದ್ಯಕ್ಕೆ ಜಾಗರೂಕತೆಯ ನಿಲುವು ತಳೆದಿದ್ದು, ಅಮೆರಿಕದೊಂದಿಗೆ ಮಾತುಕತೆಯ ಮೂಲಕ ಸುಂಕದ ಹೊರೆ ಇಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ವಿಶ್ವ ಸಂಸ್ಥೆಯಂಥ ಜಾಗತಿಕ ಸಂಸ್ಥೆಗಳಿಗೂ ಕ್ಯಾರೆ ಎನ್ನದ ಟ್ರಂಪ್ ಅವರ ಈ 'ದಾದಾಗಿರಿ'ಗೆ ಅಂಕುಶ ಹಾಕುವವರು ಯಾರೂ ಇಲ್ಲದಂತಾಗಿದೆ. ಯುದ್ಧ ಮತ್ತು ಆರ್ಥಿಕ ನಿರ್ಬಂಧಗಳ ಮೂಲಕ ಟ್ರಂಪ್ ತುಳಿಯುತ್ತಿರುವ ದಾರಿ ಇಡೀ ವಿಶ್ವವನ್ನು ಮಹಾ ಗಂಡಾಂತರಕ್ಕೆ ತಳ್ಳುವ ಮುನ್ಸೂಚನೆ ನೀಡುತ್ತಿದೆ!

# ...ಅತ್ಯಾಚಾರಗೈದ ಯುವಕ ಸೇರಿ ಮೂವರ ಬಂಧನ!

7 ☞

**ಪೊಲೀಸರಿಗೆ ದೂರು...**

ತಮ್ಮ ಅಪ್ರಾಪ್ತ ವಯಸ್ಸಿನ ಮಗಳನ್ನು ಅದ್ಯಾರೋ ಅದ್ಯಾವುದೋ ಕಾರಣಕ್ಕೆ ಅಪಹರಿಸಿದ್ದಾರೆ. ಅವಳನ್ನು ಹುಡುಕಿ ಪತ್ತೆ ಮಾಡಿಕೊಡಲು ಅಪ್ರಾಪ್ತೆಯ ತಾಯಿ ಅಥಣಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದಳು.



ಅತ್ಯಾಚಾರಿಗೆ ಸಹಾಯ ಮಾಡಿದ್ದ ಶ್ರೀಧರ ಪತ್ತಾರ, ರೋಹಿತ ಖದ್ರಿ

ವಿಷಯದ ಗಂಭೀರತೆಯನ್ನು ಅರಿತುಕೊಂಡ ಪಿಎಸ್ಐ ಗಿರಿಮಲ್ಲ ಉಪ್ಪಾರ ಅವರು ಸಿಪಿಐ ಸಂತೋಷ ಹಳ್ಳೂರ, ಡಿವೈಎಸ್ಪಿ ಪ್ರಶಾಂತ ಮುನ್ನೊಳಿ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾರ್ಯಾಚರಣೆಗೆ ತೊಡಗಿದರು.

**ವಿಶೇಷ ತನಿಖಾ ತಂಡ ರಚನೆ...**

ಅಪ್ರಾಪ್ತ ಯುವತಿಯ ಅಪಹರಣದ ಪ್ರಕರಣವನ್ನು ಸಿಪಿಐ ಸಂತೋಷ ಹಳ್ಳೂರ ಕೈಗೆತ್ತಿಕೊಂಡರು. ಇದರ ಕುರಿತಾಗಿ ಅಥಣಿಯ ಡಿವೈಎಸ್ಪಿ ಪ್ರಶಾಂತ ಮುನ್ನೊಳಿ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಕೆ. ರಾಮರಾಜನ್ ಅವರ ಜತೆಗೆ ವಿವರವಾಗಿ ಸಮಾಲೋಚಿಸಿ ಅವರಿಂದ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡು ಪಿಎಸ್ಐ ಗಿರಿಮಲ್ಲ ಉಪ್ಪಾರ, ಮುಖ್ಯಪೇದೆಗಳಾದ ಪುರುಷೋತ್ತಮ ನಾಯಿಕ, ಬಿ.ಆರ್. ಪಾಟೀಲ, ಪೇದೆಗಳಾದ ಜಮೀರ್ ಡಾಂಗೆ, ಗುಂಡುರಾವ ರಾಠೋಡ, ಸಂಗಮ್ಮಾ ಹರನಾಳ ಅವರನ್ನೊಳಗೊಂಡಂತೆ ಒಂದು ವಿಶೇಷ ತನಿಖಾ ತಂಡ ರಚಿಸಿ ಅದರ ನೇತೃತ್ವವನ್ನು ಧಾಡಸಿ ಸಿಪಿಐ ಸಂತೋಷ ವಹಿಸಿಕೊಂಡರು. ಅಂದುಕೊಂಡಂತೆ ವಿಶೇಷ ತನಿಖಾ ತಂಡ ತಾಂತ್ರಿಕ ಸಾಕ್ಷಿಗಳಾದ ಸಿಡಿಆರ್, ಮೊಬೈಲ್ ಟವರ್ ಲೋಕೇಶನ್ ಟ್ರ್ಯಾಕಿಂಗ್ ಅತ್ಯಂತ ಯಶಸ್ವಿಯಾಗಿ ಬಳಸಿಕೊಂಡಿತು. ಜತೆಗೆ ಅಪ್ರಾಪ್ತೆ ತಾಯಿ ನೀಡಿದ ಮಹತ್ವದ ಹೇಳಿಕೆಗಳು ಉಪಯೋಗಕ್ಕೆ ಬಂದವು. ಅತ್ಯಂತ ಖಚಿತವಾಗಿ ಅಪ್ರಾಪ್ತೆ ಇರುವಿಕೆಯ ಮೂಲವನ್ನು ಪತ್ತೆ ಹಚ್ಚಿದ ವಿಶೇಷ ತನಿಖಾ ತಂಡ ತಡ ಮಾಡದೇ ಬೆಂಗಳೂರಿನತ್ತ ತೆರಳಿ ಸಂತ್ರಸ್ತ ಅಪ್ರಾಪ್ತೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿತು. ಆದರೆ ಐನಾತಿ ಇಕ್ಬಾಲ್ ಶೇಖ್ ತಲೆಮರೆಸಿಕೊಂಡಿದ್ದನು.

**ಅಪ್ರಾಪ್ತೆ ತರುಣಿಯ ಮಹತ್ವದ ಹೇಳಿಕೆ...**

ನಂಬಿ ಮೋಸ ಹೋಗಿ ಬಲವಂತದ ಅತ್ಯಾಚಾರದ ಕ್ರಿಯೆಗೆ ಒಳಪಟ್ಟ ಅಪ್ರಾಪ್ತೆ ತನ್ನ ಮೇಲೆ ನಡೆದಂತಹ ಎಲ್ಲಾ ದೌರ್ಜನ್ಯಗಳನ್ನು ತನಿಖಾಧಿಕಾರಿಗಳಿಗೆ ಹೇಳಿದಳು. ಅದಲ್ಲದೇ ನ್ಯಾಯಾಧೀಶರ ಮುಂದೆಯೂ ಕೂಡಾ ಇಕ್ಬಾಲ್ ಶೇಖ್ ನಡೆಸಿದ ನಿರಂತರ ಅತ್ಯಾಚಾರದ ಘಟನೆ ತನ್ನನ್ನು ಮದುವೆಯಾಗುತ್ತೇನೆ ಎಂದು ಅಪಹರಿಸಿದ್ದು ಇದರಲ್ಲಿ ಇಕ್ಬಾಲ್‌ನ ಸ್ನೇಹಿತರಾದ ಶ್ರೀಧರ ಪತ್ತಾರ, ರೋಹಿತ ಖದ್ರಿ, ಭಾಗಿಯಾದದ್ದನ್ನು ಹೇಳಿದಳು. ಸಂತ್ರಸ್ತೆಯ ವಿವರವಾಗಿ ಹೇಳಿಕೆಯನ್ನು ದಾಖಲಿಸಿಕೊಂಡ ಸಿಪಿಐ ಸಂತೋಷ ಹಳ್ಳೂರ, ಪಿಎಸ್ಐ ಗಿರಿಮಲ್ಲ ಉಪ್ಪಾರ ಇವರು ಅತ್ಯಾಚಾರಿ ಇಕ್ಬಾಲ್ ಶೇಖ್ ಹಾಗೂ ಸ್ನೇಹಿತರಾದ ಶ್ರೀಧರ ಪತ್ತಾರ, ರೋಹಿತ ಖದ್ರಿ ಬಂಧನಕ್ಕೆ ಬಲೆ ಬೀಸಿದರು.

**ಮೂವರು ಆರೋಪಿಗಳ ಬಂಧನ...**

ಹಿಂದೂ ಅಪ್ರಾಪ್ತೆ ತರುಣಿ ಮೇಲೆ ಅತ್ಯಾಚಾರಗೈದ ಅನ್ಯಕೋಮಿನ ಯುವಕ ಇಕ್ಬಾಲ್ ಶೇಖ್, ಆತನಿಗೆ ಸಹಕರಿಸಿದ ಸ್ನೇಹಿತರಾದ ಶ್ರೀಧರ ಪತ್ತಾರ, ರೋಹಿತ ಖದ್ರಿ ಬಂಧನವನ್ನು ತಕ್ಷಣ ಮಾಡಬೇಕೆಂದು ಎಸ್ಪಿ ಕೆ. ರಾಮರಾಜನ್, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಡಿವೈಎಸ್ಪಿ ಪ್ರಶಾಂತ ಮುನ್ನೊಳಿ ಅವರುಗಳು ಸಿಪಿಐ ಸಂತೋಷ ಹಳ್ಳೂರ, ಪಿಎಸ್ಐ ಗಿರಿಮಲ್ಲ ಉಪ್ಪಾರ ಅವರಿಗೆ ನಿರ್ದೇಶನಗಳನ್ನು ನೀಡಿದ್ದರು. ದಿನಾಂಕ 17-01-2026ರಂದು ಅತ್ಯಾಚಾರದ ಆರೋಪಿ ಇಕ್ಬಾಲ್ ಶೇಖ್‌ನ ಮೇಲೆ ಸಂಪೂರ್ಣ ಚಲನ-ವಲನದ ಮೇಲೆ ನಿಗಾವಹಿಸಿದ್ದ ತನಿಖಾ ತಂಡ ಆತನನ್ನು ಅಥಣಿ ಪರಿಸರದ ಘಟನಟ್ಟಿಯಲ್ಲಿ ವಶಕ್ಕೆ ತೆಗೆದುಕೊಂಡು ವಿಚಾರಿಸಿದಾಗ ಆತ ತನ್ನ ಕೃತ್ಯ ಒಪ್ಪಿಕೊಂಡನು. ಆತ ನೀಡಿದ ಹೇಳಿಕೆ ಆಧರಿಸಿ ಇನ್ನಿಬ್ಬರು ಆರೋಪಿಗಳಾದ ಶ್ರೀಧರ ಮತ್ತು ರೋಹಿತರನ್ನು ವಶಕ್ಕೆ ತೆಗೆದುಕೊಂಡು ವಿಚಾರಿಸಿದಾಗ ಅವರು ಕೂಡಾ ತಮ್ಮ ತಪ್ಪು ಒಪ್ಪಿಕೊಂಡರು.

ಮೂವರು ಆರೋಪಿತರ ವೈದ್ಯಕೀಯ ಪರೀಕ್ಷೆ ಮಾಡಿಸಿ ಅವರ ಮೇಲೆ ದೋಷಾರೋಪಣಾ ಪತ್ರದೊಂದಿಗೆ ನ್ಯಾಯಾಧೀಶರ ಮುಂದೆ ಹಾಜರು ಮಾಡಿದಾಗ ಅವರು ಆರೋಪಿಗಳನ್ನು ಜೈಲಿಗಟ್ಟಲು ಆದೇಶ ಮಾಡಿದ್ದಾರೆ. ಅಥಣಿ ಡಿವೈಎಸ್ಪಿ ಪ್ರಶಾಂತ ಮುನ್ನೊಳಿ ನಿರ್ದೇಶನದಲ್ಲಿ ತನಿಖಾಧಿಕಾರಿ ಸಂತೋಷ ಹಳ್ಳೂರ, ಪಿಎಸ್ಐ ಗಿರಿಮಲ್ಲ ಉಪ್ಪಾರ ಮತ್ತು ಸಿಬ್ಬಂದಿಗಳ ವಿಶೇಷ ಕಾರ್ಯಾಚರಣೆ ಇಲ್ಲಿ ಮೆಚ್ಚುವಂತಹುದು.

# ದಂಡುಪಾಳ್ಯ ಗ್ಯಾಂಗಿನ ಚಿಕ್ಕ ಹನುಮ ಕೊನೆಗೂ ಸಿಕ್ಕಿಬಿದ್ದ!

11 ☞

ಅವರು ಎರಡೂ ಘಟನೆಗಳ ಸ್ಥಳಗಳನ್ನು ತೋರಿಸಿದರಲ್ಲದೆ ಯಾವ ರೀತಿಯಲ್ಲಿ ಕೊಲೆ ಮಾಡಿದ್ದೇವೆ ಎಂಬುದನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿಕೊಟ್ಟಿದ್ದರು. ತದನಂತರ ಆ ಪ್ರಕರಣಗಳಲ್ಲಿ ಅವರ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿತ್ತು. ಈ ಎಲ್ಲಾ ಪ್ರಕರಣಗಳ ವಿಚಾರಣೆಗಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡಲಾಗಿತ್ತು. ಆ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಆರೋಪಿಗಳಿಗೆ ಮರಣದಂಡನೆ, ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು.

ಮಂಗಳೂರಿನ ಉರ್ವ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣದಲ್ಲಿ ಭಾಗಿಗಳಾಗಿದ್ದ ಆರೋಪಿಗಳಿಗೆ ಮರಣ ದಂಡನೆ ಶಿಕ್ಷೆ ವಿಧಿಸಲಾಗಿತ್ತು. ಆ ಪ್ರಕರಣದಲ್ಲಿ ಚಿಕ್ಕ ಹನುಮನನ್ನು ತಲೆ ಮರೆಸಿಕೊಂಡ ಆರೋಪಿಯೆಂದು ಪ್ರತ್ಯೇಕಿಸಲಾಗಿತ್ತು. 2011ರಲ್ಲಿ ಚಿಕ್ಕ ಹನುಮನ ವಿರುದ್ಧ ಎಲ್‌ಪಿಸಿ ವಾರಂಟ್ ಹೊರಡಿಸಲಾಗಿತ್ತು. ಈ ವಾರಂಟ್‌ನ ಆಧಾರದಲ್ಲಿ ಉರ್ವ ಠಾಣೆಯ ಇನ್ಸ್‌ಪೆಕ್ಟರ್ ಶ್ಯಾಮ್ ಸುಂದರ್ ಎಚ್.ಎಂ., ಎಸ್ಐ ಗುರಪ್ಪ ಕಾಂತಿ, ಪಿಎಸ್ಐ ಎಲ್. ಮಂಜುಳಾ, ಎ.ಎಸ್.ಐ ವಿನಯ್ ಕುಮಾರ್ ಮತ್ತು ಸಿಬ್ಬಂದಿಗಳಾದ ಲಲಿತಾ ಲಕ್ಷ್ಮೀ, ಅನಿಲ್, ಪ್ರಮೋದ್, ಆತ್ಮಾನಂದ, ಹರೀಶ್ ಅವರು ಕಾರ್ಯಾಚರಣೆ ನಡೆಸಿ ಚಿಕ್ಕ ಹನುಮನನ್ನು ಬಂಧಿಸಿದ್ದಾರೆ. ಪೊಲೀಸರ ಈ ತಂಡದ ಕಾರ್ಯಾಚರಣೆಯ ಪೈಕಿ ಸಿಬ್ಬಂದಿಯವರಾದ ಲಲಿತಾ ಲಕ್ಷ್ಮೀಯವರು ಅತ್ಯಂತ ಮುತುವರ್ಜಿ ವಹಿಸಿ ಹಲವು ಬಾರಿ ಬೆಂಗಳೂರಿಗೆ ಹೋಗಿ ಚಿಕ್ಕ ಹನುಮನ ಬಗ್ಗೆ ಮಾಹಿತಿ ಪಡೆದುಕೊಂಡು ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಲು ಕಾರಣರಾಗಿದ್ದಾರೆ.


# ಭಾರತದ ಮೇಲಾಗುವ ಪರಿಣಾಮಗಳೇನು?

13 ☞

ಗ್ರಂಥವಾಗಿ ತಾಲ್ಮಡ್ ಎಂಬ ಗ್ರಂಥ ಸಹ ಸೇರಿತು. ಈ ನಾಲ್ಕನೇ ಗ್ರಂಥವೇ ಯಹೂದಿಗಳು ಹಾಳು ಬೀಳಲು ಮೂಲ ಕಾರಣ ಅನ್ನಿಸುತ್ತೆ. ಯಹುದೇತರರನ್ನು ಕೊಲ್ಲುವುದು ಪಾಪವಲ್ಲ, ದೇವರು ಸಂಪ್ರೀತನಾಗುತ್ತಾನೆ ಅಂತ ಅನ್ಯ ಜನಾಂಗ ಅಥವಾ ಧರ್ಮೀಯರನ್ನು ಪ್ರೇತಾತ್ಮಗಳಿಗೆ ಬಲಿ ಕೊಡುವ ಕುಕೃತ್ಯಗಳು ಹೆಚ್ಚಾದವು. ಯಹೂದಿಗಳು ಕ್ರಿಸ್ತ ಪೂರ್ವದಲ್ಲಿ ನಡೆಸಿದ ನರಮೇಧ ಅಷ್ಟಿಷ್ಟಲ್ಲ. ಅದರಲ್ಲೂ ಇರಾನ್‌ನಲ್ಲಿ ಎರಡು ಲಕ್ಷಕ್ಕೂ ಕೊಂದ ದಾಖಲೆ ಇದೆ.

ಹೀಗೇ ಪಶ್ಚಿಮ ಏಷ್ಯದಲ್ಲಿ ಯಹೂದಿಗಳ ಹಾವಳಿ ಹೆಚ್ಚಾಗುತ್ತಿರುವಾಗಲೇ ಭಾರತದಲ್ಲಿ ಉಪನಿಷತ್ ಎಂಬ ಅದ್ಭುತವಾದ ಜ್ಞಾನಾಮೃತ ಬೆಳೆಯಿತು. ಎಲ್ಲ ಧರ್ಮಗಳನ್ನು ನಿವಾಳಿಸಿ ಎಸೆಯುವಂತೆ ಬೌದ್ಧ ಧರ್ಮ ಹುಟ್ಟಿತು. ಅದ್ಭುತವಾದ ಜ್ಞಾನ ಸಂಪತ್ತುಳ್ಳ ಕನ್ಫ್ಯೂಷಿಯಸ್ ಸಾರ ಚೀನಾದಲ್ಲಿ ಹರಡಿದರೆ, ಶಿಂತೋ ಧರ್ಮ ಜಪಾನ್‌ನಲ್ಲಿ ಬೆಳೆಯಿತು. 2025 ವರ್ಷಗಳ ಹಿಂದೆ ಯೇಸು ಹುಟ್ಟಿ, ಧರ್ಮ ಪ್ರಚಾರ ಮಾಡುವಾಗ ಯಹೂದಿಗಳಿಂದ ಹತನಾದ. ಕ್ರುಸೈಡರ್‌ಗಳೆಂಬ ಧರ್ಮ ಯೋಧರು ಯುರೋಪ್ ನಾದ್ಯಂತ ಕ್ರೈಸ್ತ ಧರ್ಮ ಹರಡಿದರು.

ಹೀಗೇ ಧರ್ಮದ ಹೆಸರಿನಲ್ಲಿ ಜನಾಂಗಗಳು ಸಂಘಟಿತವಾಗಿ ಸಾಮ್ರಾಜ್ಯ ಸ್ಥಾಪಿಸಿಕೊಳ್ಳುವುದನ್ನು ಕಂಡ ಅರಬ್ ಸುನ್ನಿ (ಕರಿ ಬಣ್ಣದವರು)ಖುರೈಷಿ ಎಂಬ ಜನಾಂಗದ ಮಹಮದ್ ಪೈ ಗಂಬರ್ ಇಸ್ಲಾಂ ಸ್ಥಾಪಿಸಿದರು. ಅದೂ ಸಹ ಮಾನವತೆಯ ಹಾದಿಯಲ್ಲಿ ಸಾಗದೆ



ಮಾನವ ರಕ್ತದೋಕುಳಿಯಲ್ಲಿ ಮಿಂದಿತು. ಯಹೂದಿಗಳ ಅಟ್ಟ ಹಾಸದಂತೆಯೇ ಬೆಳೆಯಲು ಫಿದಾಯಿದೀನ್ ಎಂಬ ಆತ್ಮಹುತಿ ಪಡೆ ಈಗಿನ ಐಸಿಸ್ ಮತ್ತಿತರ ಉಗ್ರ ಪಡೆಗಳಂತೆ, ಇಸ್ಲಾಂ ಸ್ವೀಕರಿಸದ ಜನರನ್ನು ಕೊಲ್ಲುತ್ತಿತ್ತು. ಹೀಗೇ ಧರ್ಮಗಳು ಮನುಕುಲಕ್ಕೆ ಎಷ್ಟು ಒಳ್ಳೇದು ಮಾಡಿವೆಯೋ ಅಷ್ಟೇ ಹಾನಿ ಮಾಡಿವೆ. ಜಗತ್ತಿಗೆ ಜ್ಞಾನ ವಿಜ್ಞಾನ ಸಾರಿದ ಇರಾನ್ ಇರಾಕ್‌ನಲ್ಲಿ ಶಿಯಾ (ಬಿಳಿಯ) ಹೆಣ್ಣುಗಳ ಅಪಹರಣ ಅತ್ಯಾಚಾರ ಹೆಚ್ಚಾಯಿತು. ಇಸ್ಲಾಮ್ ಸಂಪೂರ್ಣ ಸ್ವೀಕರಿಸಿದ ಇರಾನ್ ಇರಾಕ್‌ನಲ್ಲಿ ಜನಾಂಗೀಯ ಹಿಂಸೆಗಳು ನಿಲ್ಲಲೇ ಇಲ್ಲಾ. ಆಧುನಿಕವಾಗಿ ಮತ್ತು ವೈಜ್ಞಾನಿಕವಾಗಿ ಬೆಳೆಯುತ್ತಿದ್ದ ಇರಾನ್ ಇರಾಕ್ ಭಾಗಗಳು ಅಜ್ಞಾನದ ಕತ್ತಲೆಗೇ ಸಿಲುಕಿದವು. ಹೀಗೇ ಸಾವಿರಾರು ವರ್ಷಗಳ ಹಿಂದೆಯೇ ಧರ್ಮ ಸಂಘರ್ಷದಲ್ಲಿ ಮಾನವ ಜನಾಂಗ ಜೈವಿಕವಾಗಿ ಅಲ್ಲದೇ, ಬೌದ್ಧಿಕವಾಗಿಯೂ ದಿವಾಳಿಯಾದವು. ಇತ್ತ ಭಾರತದಲ್ಲಿ ಯಹೂದಿಗಳಿಂದ ದಾಳಿಯಿಂದ ಬಂದ ಬ್ರಹ್ಮ ಕುಮಾರರು ವೇದಗಳನ್ನು ಕಲಿಸಿ ನವ ಬ್ರಾಹ್ಮಣರನ್ನು ಸೃಷ್ಟಿಸಿದರು. ಇದರಿಂದ ಮೇಲೂ ಕೀಳು ಎಂಬ ಭೇದಭಾವ ಬೆಳೆದು ಬಹು ಸಂಖ್ಯಾತ ಶೂದ್ರರು ಅಜ್ಞಾನಿಗಳಾದರು. ಪರಕೀಯರು ಸುಲಭವಾಗಿ ದಾಳಿ ಮಾಡಿ ಮೆರೆಯತೊಡಗಿದರು.

ಹೀಗೆ ಮಾನವರ ನಡುವಿನ ಸ್ವಾರ್ಥ ದ್ವೇಷಕ್ಕೆ ಜ್ಞಾನ ಸಂಪತ್ತು ಆಗ ಬೆಳೆಯಲಿಲ್ಲ. ಈಗ ಅಂಥದ್ದೇ ಮಾನವರ ಸ್ವಾರ್ಥದ ವ್ಯಾಪಾರಿಕರಣಕ್ಕೆ ಜಗತ್ತು ತುತ್ತಾಗುತ್ತಿದೆ. ಮಾನವ ಜಗತ್ತು ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಮೂಲಕ ಬಹು ದೊಡ್ಡ ಜ್ಞಾನ ಧಾತು ಅಭಿವೃದ್ಧಿ ಪಡಿಸಿಕೊಳ್ಳುವ ಹೊತ್ತಿನಲ್ಲಿ ವ್ಯಾಪಾರಿ ಬುದ್ಧಿ ಮಾನವ ಇನ್ನೆಂತಹ ಪ್ರಳಯ ಸೃಷ್ಟಿಸುತ್ತಾನೋ ಗೊತ್ತಿಲ್ಲ. ಹಿಂದಿನ ಅಮೇರಿಕಾ ಅಧ್ಯಕ್ಷ ಜೊ ಬೈಡೆನ್ ನಿರ್ಗಮನ ಭಾಷಣದಲ್ಲಿ ಟ್ರಂಪ್ ನಂಥ ವ್ಯಾಪಾರಿಗೇ ಅಧಿಕಾರ ಕೊಟ್ಟರೆ, ದೇಶ ಉಳಿಯುತ್ತಾ? ಅಂತ ಪ್ರಶ್ನಿಸಿದ್ದರು. ಈಗ ಅದಕ್ಕೆ ಉತ್ತರ ಸಿಗುತ್ತಿದೆ, ವೇನಿಜುಲಾ, ಗ್ರೀನ್ ಲ್ಯಾಂಡ್ ಕಬಳಿಕೆಯಲ್ಲಿ ಮತ್ತು ಇರಾನ್ ಹಣಿಯುವ ಅಮೇರಿಕಾ ನಡೆಸುತ್ತಿರುವ ಹುನ್ನಾರದಲ್ಲಿ! ನೋಡೋಕೇನೋ ಇರಾನ್ ಹಠವನ್ನೂ ಬಿಡದೆ, ಅಮೇರಿಕಾದ ಆರ್ಭಟಕ್ಕೂ ಅಲುಗದೆ ನಿಶ್ಚಲವಾಗಿ ನಿಂತಿದೆ. ಆದ್ರೆ, ಆ ದೇಶದ ಒಳಗೇ ಈಗ ಆಕ್ರೋಶದ ಕಾಳ್ಗಿಚ್ಚು ಧಗಧಗ ಉರಿಯುತ್ತಿದೆ. ಅದರಿಂದ ಅಂದ್ರೆ, ಅಮೇರಿಕಾ ಹಿಂಸೆಯಿಂದ ಬಚಾವ್ ಆಗೋಕೆ ಸಾಧ್ಯವೇ ಇಲ್ಲದಂಥಾ ಸ್ಥಿತಿ ನಿರ್ಮಾಣವಾಗಿದೆ. ಇರಾನ್ ಈಗ ಬರೀ ದೇಶವಲ್ಲ, ಜ್ವಾಲಾಮುಖಿ ಆಸ್ಫೋಟಗೊಳ್ತಾ ಇರೋ ಅಗ್ನಿಪರ್ವತ!

ಒಳಗೊಳಗೇ ಕೊತಕೊತ ಅಂತ ಕುದಿಯುತ್ತಿರೋ ಆ ಅಗ್ನಿ ಪರ್ವತವನ್ನ, ಹೊರಗಿನಿಂದಲೇ ಸರ್ವನಾಶ ಮಾಡೋಕೆ, ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತುದಿಗಾಲಲ್ಲಿ ನಿಂತಿದ್ದಾರೆ. ಜಸ್ಟ್ 18 ದಿನಗಳ ಹಿಂದಷ್ಟೇ ಶುರುವಾದ, ಆಂದೋಲನ, ಇಡೀ ಮಧ್ಯ ಪ್ರಾಚ್ಯದ ಭೂಪಟವನ್ನೇ ಬದಲಿಸೋ ಹಾಗೆ ಕಾಣ್ತಾ ಇದೆ! ಅಷ್ಟೇ ಅಲ್ಲ, ಟ್ರಂಪ್ ಕೈಗೆತ್ತಿಕೊಂಡಿರೋ ಒಂದು ನಿರ್ಧಾರ, ಟ್ರಂಪ್ ವಿರುದ್ಧ ಖಮೇನಿಗಿರೋ ಮತ್ಸರ, ಮೂರನೇ ಮಹಾಯುದ್ಧಕ್ಕೆ ಕಾರಣವಾಗೋ ಸರ್ವಸಾಧ್ಯತೆಗಳೂ ದಟ್ಟವಾಗಿ ಕಾಣ್ತಾ ಇವೆ! ಅಕಸ್ಮಾತ್ ಯುದ್ಧ ಶುರುವಾದ್ರೆ, ಇದೆಲ್ಲದರ ನಮ್ಮ ಮೇಲೆ ಅಂದ್ರೆ, ಭಾರತದ ಮೇಲೆ ಯಾವ ಪರಿಣಾಮ ಬೀರಬಹುದು? ನಿಜಕ್ಕೂ ಭಯಾನಕವಾಗಿರುತ್ತದೆ ಕಣ್ರೀ!

# ಕುಡಿದ ನಶೆಯಲ್ಲಿ ಸ್ನೇಹಿತರ ನಡುವೆ ಕಿತ್ತಾಟ ; ಜಾರ್ಖಂಡ್ ಯುವಕನ ಮರ್ಡರ್!

6 ☞

ಚರ್ಚೆಗೆ ಬಾರದ ವಿಚಾರದ ಬಗ್ಗೆ ಪರಸ್ಪರ ಬೈದಾಡಿಕೊಳ್ಳುತ್ತಾ ಕುಡಿದ ಅಮಲಿನಲ್ಲಿ ಅವರ ಮನೆಗಳಿಗೆ ಹೋಗುತ್ತಿದ್ದರು. ಇಲ್ಲವಾದರೆ ಪಾರ್ಟಿ ಮುಗಿಸಿಕೊಂಡು ಅಲ್ಲಿಯೇ ಮಲಗಿಕೊಂಡು ಬೆಳಿಗ್ಗೆ ಇಲ್ಲಿಂದಲೇ ಕೆಲಸಕ್ಕೆ ಹೋಗುತ್ತಿದ್ದರು. ಸ್ನೇಹಿತರ ನಡುವೆ ಎಲ್ಲವೂ ಚೆನ್ನಾಗಿ ನಡೆದುಕೊಂಡು ಹೋಗುತ್ತಿರುವಾಗ ಭಾಷೆ ಸಮಸ್ಯೆಯೊಂದು ಎದುರಾಯಿತು. ಜಾರ್ಖಂಡ್‌ನ




ಸಂದೀಪ್‌ಕುಮಾರ್ ಸಿಂಗ್‌ಗೆ ಜಾರ್ಖಂಡ್ ಮತ್ತು ಹಿಂದಿ ಭಾಷೆ ಬಿಟ್ಟರೆ ಮಾತನಾಡಲು ಕನ್ನಡ ಬರುತ್ತಿರಲಿಲ್ಲ. ಈ ವಿಚಾರವಾಗಿ ಮನೋಜ್ ಒಡೆಯರ್ ಕರ್ನಾಟಕಕ್ಕೆ ಬಂದು ಕೆಲಸಕ್ಕೆ ಸೇರಿ ಆರು ತಿಂಗಳು, ವರ್ಷವಾಗಿದೆ. ಇಲ್ಲಿ ಕೆಲಸ ಮಾಡಿ ಹಣ ಸಂಪಾದನೆ ಮಾಡುತ್ತಿದ್ದೀರಾ, ಇಲ್ಲಿನ ನೀರು, ಗಾಳಿಯನ್ನು ಸೇವಿಸಿಕೊಂಡು ನೆಲೆಸಿದ್ದೀರಾ ಆದರೆ ಈ ನಾಡಿನ ಕನ್ನಡ ಭಾಷೆ ಮಾತ್ರ ಬೇಡ ಯಾಕೆ? ಕೆಲಸ ಬೇಕಾದರೆ ಮೊದಲು ಕನ್ನಡ ಕಲಿಯಿರಿ ಎಂದು ಒತ್ತಾಯಿಸುತ್ತಿದ್ದನು. ಅದಕ್ಕೆ ಸಂದೀಪ್‌ಕುಮಾರ್ ಸಿಂಗ್ ಕನ್ನಡ್ ಬರೋಲ್ಲ, ಕಲಿಯೋಲ್ಲ ಹಿಂದಿಯಲ್ಲಿಯೇ ಮಾತನಾಡುತ್ತೇನೆ ಏನು ಮಾಡುತ್ತಿಯಾ ಎಂದು ಅವನೊಂದಿಗೆ ವಾದಕ್ಕೆ ಇಳಿಯುತ್ತಿದ್ದನು. ಆಗ ಉಳಿದವರು ಇಬ್ಬರಿಗೂ ಸಮಾಧಾನ ಪಡಿಸುವುದಲ್ಲದೆ ಸಂದೀಪ್‌ಕುಮಾರ್ ಸಿಂಗ್‌ಗೆ ಕನ್ನಡ ಕಲಿತರೇನೆ ಇಲ್ಲಿ ಕೆಲಸ ಅದಕ್ಕೆ ಬೇಗನೇ ಕನ್ನಡ ಕಲಿತುಕೊಳ್ಳುವಂತೆ ಎಚ್ಚರಿಕೆ ಕೊಟ್ಟರು. ಕನ್ನಡ ಕಲಿಸುವ ಹಾಗೂ ಕಲಿಯುವ ವಿಷಯದಲ್ಲಿ ಮನೋಜ್ ಒಡೆಯರ್ ಮತ್ತು ಸಂದೀಪ್‌ಕುಮಾರ್ ಸಿಂಗ್ ನಡುವೆ ಸಣ್ಣದಾಗಿ ಜಗಳವಾಗುತ್ತಿದ್ದು ಕುಡಿದಾಗಂತು ಜೋರು, ಜೋರಾಗಿ ಮಾತನಾಡುತ್ತಾ ಪೈಪೋಟಿಗೆ ನಿಲ್ಲುತ್ತಿದ್ದರು. ಆಗ ರಾಜಾ ರೆಡ್ಡಿ ಇಬ್ಬರನ್ನು ಸಮಾಧಾನ ಪಡಿಸುತ್ತಿದ್ದನು. ಒಂದು ದಿನ ಈ ವಿಷಯದಲ್ಲಿ ನಡೆಯಬಾರದ ಘಟನೆಯೊಂದು ನಡೆದು ಹೋಯಿತು.

### ಕುಡಿದ ನಶೆಯಲ್ಲಿ ಸಂದೀಪ್‌ಕುಮಾರ್ ಸಿಂಗ್ ಕೊಲೆ

ವೇಮಗಲ್ ಪೊಲೀಸ್ ಠಾಣೆಯ ಎಎಸ್‌ಐ ನಾರಾಯಣಸ್ವಾಮಿರವರು ನೀಡಿರುವ ದೂರಿನಲ್ಲಿ ಡಿಸೆಂಬರ್ 26ರಂದು ಮಧ್ಯರಾತ್ರಿ 2.15 ಗಂಟೆ ಸಮಯದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ನನ್ನ ಮೊಬೈಲ್ ಫೋನ್‌ಗೆ ಕರೆ ಮಾಡಿ ನನ್ನ ಹೆಸರು ಮನೋಜ್ ಒಡೆಯರ್ ಎಂತಲೂ, ನಾನು ಮತ್ತು ನನ್ನ ಸ್ನೇಹಿತರಾದ ರಾಜಾ ರೆಡ್ಡಿ ಮತ್ತು ಅನಿರುದ್ ಪ್ರದಾನ್ ಎಂಬುವರುಗಳು ಸೇರಿಕೊಂಡು ಕುರುಗಲ್ ಗೇಟ್‌ನ ಸಂದೀಪ್ ಕುಮಾರ್ ಸಿಂಗ್ ಎಂಬುವವರನ್ನು ಕೊಲೆ ಮಾಡಿರುತ್ತೇವೆ ಎಂಬುವುದಾಗಿ ವಿಷಯ ತಿಳಿಸಿದರು. ಆಗ ನಾನು ಮಾನ್ಯ ಪಿಐರವರಿಗೆ ಮಾಹಿತಿ ನೀಡಿದೆನು. ಅದರಂತೆ ನಾನು ಫೋನ್ ಮಾಡಿದ ವ್ಯಕ್ತಿಗೆ ಜೊತೆಯಲ್ಲಿದ್ದವರನ್ನು ಕರೆದುಕೊಂಡು ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದೆನು. ನಾನು ಪೊಲೀಸ್ ಠಾಣೆಗೆ ಬಂದಾಗ ಠಾಣೆ ಬಳಿ ಇದ್ದ ಇಬ್ಬರು ಆಸಾಮಿಗಳನ್ನು ವಿಚಾರ ಮಾಡಲಾಗಿ ಆ ಪೈಕಿ ನನಗೆ ಫೋನ್ ಮಾಡಿದ ಮನೋಜ್ ಒಡೆಯರ್ ಎಂಬುವನು ಮತ್ತು ಅವನೊಂದಿಗೆ ಇಟ್ಟ ಮತ್ತೊಬ್ಬ ಆಸಾಮಿಯನ್ನು ತೋರಿಸಿ ಇವನು ರಾಜಾರೆಡ್ಡಿ ಎಂಬುವುದಾಗಿ ತಿಳಿಸಿದನು. ಪೊಲೀಸ್ ಠಾಣೆಗೆ ಬಂದ ಪಿಎಸ್‌ಐ ಬಿ.ಜಿ. ಮಂಜುನಾಥರವರು ಆಸಾಮಿಗಳ ಬಳಿ ವ್ಯಕ್ತಿಯನ್ನು ಕೊಲೆ ಮಾಡಿರುವ ಬಗ್ಗೆ ವಿಚಾರಿಸಲಾಗಿ ಆಗ ಮನೋಜ್ ಒಡೆಯರ್ ಮಾತನಾಡುತ್ತಾ ಡಿಸೆಂಬರ್ 25ರಂದು ಸಂಜೆ 6.30ರ ಸಮಯದಲ್ಲಿ ನಾನು ಕೆಲಸ ಮಾಡುವ ಲೀಕೋ ಕಂಪನಿಯಲ್ಲಿ ನನ್ನೊಂದಿಗೆ ಕೆಲಸ ಮಾಡುವ ಒರಿಸ್ಸಾ ವಾಸಿ ಅನಿರುದ್ ಪ್ರದನ್ ಮತ್ತು ಸಂದೀಪ್ ಸಿಂಗ್ ಸೇರಿಕೊಂಡು ಶರಣಯ್ಯ ಎಂಬುವವರಿಗೆ ಸೇರಿದ ಬಾಡಿಗೆ ರೂಂನಲ್ಲಿ ಮದ್ಯಪಾನ ಮಾಡಿ ರಾತ್ರಿ 9 ಗಂಟೆ ಸಮಯದಲ್ಲಿ ನಾನು ಮತ್ತು ಅನಿರುದ್ ಪ್ರದಾನ್‌ನೊಂದಿಗೆ ಸಂದೀಪ್ ಸಿಂಗ್‌ನನ್ನು ದ್ವಿಚಕ್ರ ವಾಹನದಲ್ಲಿ ಕೂರಿಸಿಕೊಂಡು ಕುರುಗಲ್ ಗೇಟ್‌ನಲ್ಲಿರುವ ಆತನ ರೂಂಗೆ ಬಿಡಲು ಹೋದಾಗ ಪುನಃ ಸಂದೀಪ್ ಸಿಂಗ್ ಸಿಂಗ್ ರೂಂನಲ್ಲಿದ್ದ ಮದ್ಯವನ್ನು ಎತ್ತಿಕೊಂಡು ಮೂರು ಜನರು ಕುಡಿಯುತ್ತಿದ್ದಾಗ ನನಗೆ ಮತ್ತು ಸಂದೀಪ್ ಸಿಂಗ್ ನಡುವೆ ಜಗಳವಾಯಿತು. ನಂತರ ನಾನು ಸತೀಶ್ ಎಂಬುವವರ ಹೋಟೆಲ್ ಬಳಿಗೆ ಹೋಗಿ ಸಿಗರೇಟ್ ತೆಗೆದುಕೊಂಡು ಅಲ್ಲಿಂದ ಪುನಃ ಸಂದೀಪ್ ಸಿಂಗ್ ರೂಂಗೆ ಹೋಗಿ ಮತ್ತೆ ಮೂರು ಜನ ಮದ್ಯಪಾನ ಮಾಡುತ್ತಿದ್ದೆವು.

ಆಗ ರಾತ್ರಿ ಸುಮಾರು 10.30 ಗಂಟೆ ಸಮಯದಲ್ಲಿ ಹೋಟೆಲ್‌ನಲ್ಲಿ ಅಡಿಗೆ ಕೆಲಸ ಮಾಡುವ ಬಳ್ಳಾರಿ ವಾಸಿ ರಾಜಾರೆಡ್ಡಿಯ ರೂಂ ಮುಂಭಾಗ ನಡೆದುಕೊಂಡು ಹೋಗುತ್ತಿದ್ದವನನ್ನು ಸಂದೀಪ್ ಸಿಂಗ್




ಎಎಸ್‌ಐ ನಾರಾಯಣಸ್ವಾಮಿ, ತನಿಖಾ ಸಹಾಯಕ ಹೆಚ್.ಎಂ. ಸುರೇಶ್

ಕರೆದಿದ್ದು ಅವನೂ ಸಹ ನಮ್ಮೊಂದಿಗೆ ಸೇರಿಕೊಂಡು ಮದ್ಯಪಾನ ಮಾಡಿದನು. ಎಲ್ಲರೂ ರೂಂನಲ್ಲಿ ಕುಳಿತುಕೊಂಡು ಮದ್ಯಪಾನ ಮಾಡುತ್ತಾ ಅವನ ರೂಂನಲ್ಲಿ ರಾತ್ರಿ 11.30 ಗಂಟೆ ಸಮಯದಲ್ಲಿ ಸಂದೀಪ್ ಸಿಂಗ್ ಇದ್ದಕ್ಕಿದ್ದಂತೆ ಕನ್ನಡ ಭಾಷೆಯ ಬಗ್ಗೆ ಕೀಳಾಗಿ ಮಾತನಾಡಿ ರಾಜಾರೆಡ್ಡಿಯನ್ನು ಬೈದನು. ಆಗ ಅನಿರುದ್ ಅವನನ್ನು ಬಿಡಬೇಡ ಹೊಡಿ ಒಂದು ಹೇಳಿದಾಗ ರಾಜಾರೆಡ್ಡಿ ತನ್ನ ಬಳಿ ಇದ್ದ ಚಾಕುವಿನಿಂದ ಸಂದೀಪ್ ಸಿಂಗ್ ಕುತ್ತಿಗೆ ಬಳಿ ತಿವಿದನು. ಆಗ ಸಂದೀಪ್ ಸಿಂಗ್ ಕುತ್ತಿಗೆಯಿಂದ ರಕ್ತ ಸುರಿಯುತ್ತಿತ್ತು ಕೂಡಲೇ ನಾನು ಮತ್ತು ರಾಜಾರೆಡ್ಡಿಯು ಸಂದೀಪ್ ಸಿಂಗ್‌ನನ್ನು ಕೆಎ-08 ಇಬಿ-4319 ಟಿವಿಎಸ್ ಜುಪಿಟರ್‌ನ ಮಧ್ಯದಲ್ಲಿ ಕೂರಿಸಿಕೊಂಡು ಹೆಚ್. ಕ್ರಾಸ್ ಆಸ್ಪತ್ರೆಗೆ ಹೋಗಲು ಮರಿಯಪ್ಪನಹಳ್ಳಿ ಗೇಟಿನ ಸಮೀಪ ಹೋಗುತ್ತಿದ್ದಾಗ ಎಚ್ಚರಗೊಂಡ ಸಂದೀಪ್ ಸಿಂಗ್ ಏನೋ ನನನ್ನ ಮಕ್ಕಳಾ ನಾನು ಬದುಕಿದ್ರೆ ನಿಮ್ಮನ್ನು ಜೀವಸಹಿತ ಬಿಡೋದಿಲ್ಲ ಎಂದು ಹಿಂದಿ ಭಾಷೆಯಲ್ಲಿ ಹೇಳಿದನು. ಇವನನ್ನು ಬಿಟ್ಟರೆ ನಮಗೆ ತೊಂದರೆ ಕೊಡುವುದು ಗ್ಯಾರಂಟಿ ಎಂದು ಮಾತನಾಡಿಕೊಂಡು ಹೆಚ್. ಕ್ರಾಸ್ ಕಡೆಗೆ ಹೋಗುವ ನಾನು ಗಾಡಿಯನ್ನು ಕೈಗಾರಿಕಾ ಪ್ರದೇಶದ ಕಡೆಗೆ ತಿರುಗಿಸಿ ಸ್ವಲ್ಪ ಮುಂದೆ ಹೋಗಿ ದ್ವಿಚಕ್ರ ವಾಹನವನ್ನು ನಿಲ್ಲಿಸಿದೆವು. ನಂತರ ರಾಜಾರೆಡ್ಡಿ ಚಾಕುವನ್ನು ತೆಗೆದುಕೊಂಡು ಸಂದೀಪ್ ಸಿಂಗ್‌ನ ಹೊಟ್ಟೆಗೆ ತಿವಿದನು. ಆಗ ಅವನು ನೋವಿನಿಂದ ಚೀರಾಡುತ್ತಿದ್ದನು. ತಕ್ಷಣ ನಾನು ರಾಜಾರೆಡ್ಡಿ ಬಳಿಯಿಂದ ಚಾಕುವನ್ನು ಕಿತ್ತುಕೊಂಡು ಸಂದೀಪ್ ಸಿಂಗ್‌ನ ಕುತ್ತಿಗೆಯನ್ನು ಕೊಯ್ದು ಅವನನ್ನು ಚರಂಡಿಗೆ ತಳ್ಳಿದ್ದು ಆಮೇಲೆ ಅಲ್ಲಿಯೇ ಇದ್ದ ಒಂದು ಕಲ್ಲನ್ನು ಎತ್ತಿ ಅವನ ತಲೆಯ ಮೇಲೆ ಹಾಕಿ ಕೊಲೆ ಮಾಡಿದೆವು. ಸಂದೀಪ್ ಸಿಂಗ್ ಸ್ಥಳದಲ್ಲಿಯೇ ಸತ್ತು ಹೋದನು. ಸಂದೀಪ್ ಸಿಂಗ್‌ನ ದೇಹವೆಲ್ಲ ರಕ್ತವಾಗಿದ್ದು ಇದನ್ನು ನೋಡಿ ನಮಗೆ ಗಾಬರಿಯಾಗಿ ನಾವು ಸ್ವಲ್ಪ ಹೊತ್ತು ಅಲ್ಲಿಯೇ ಇದ್ದು ನಂತರ ತಮಗೆ ಫೋನ್ ಮಾಡಿ ತಿಳಿಸಿರುವುದಾಗಿ ಹೇಳಿದರು. ಮನೋಜ್ ಒಡೆಯರ್ ನೀಡಿದ ಸುಳಿವಿನ ಮೇರೆಗೆ ಪಿಐ ಬಿ.ಪಿ. ಮಂಜು, ಎಎಸ್‌ಐ ನಾರಾಯಣಸ್ವಾಮಿ, ತನಿಖಾ ಸಹಾಯಕರಾದ ಹೆಚ್.ಎಂ. ಸುರೇಶ್ ಮತ್ತು ಸಿಬ್ಬಂದಿ ವರ್ಗದವರು ಪೊಲೀಸ್ ಠಾಣೆಯಿಂದ ಹೊರಟು ಮರಿಯಪ್ಪನಹಳ್ಳಿ ಗೇಟಿನ ಸಮೀಪ ಹೊಸದಾಗಿ ನಿರ್ಮಾಣ ಹಂತದಲ್ಲಿರುವ ಕಾರ್ಖಾನೆ ಕಡೆಗೆ ಹೋಗುವ ರಸ್ತೆಯ ಮೋರಿಯಲ್ಲಿ ಸಂದೀಪ್ ಸಿಂಗ್ ಎಂಬುವವರ ಮೃತದೇಹ ಬಿದ್ದಿರುವುದು ನಿಜವಾಗಿರುತ್ತದೆ.

### ಆರೋಪಿಗಳ ಬಂಧನ


ಸಂದೀಪ್ ಸಿಂಗ್‌ನ ಕೊಲೆ ನಡೆದಿರುವ ಬಗ್ಗೆ ಪಿಐ ಬಿ.ಪಿ. ಮಂಜುರವರು ಹಿರಿಯ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಿದ್ದು ಕೂಡಲೇ ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ನಾಗ್ತೆರವರು ಆಗಮಿಸಿ ಪರಿಶೀಲಿಸಿದ ಮೇಲೆ ಎಸ್ಪಿ ಬಿ. ನಿಖಿಲ್‌ರವರು ಕ್ರಮಕ್ಕೆ ಆದೇಶಿಸಿದ್ದು ದರಂತೆ ಎಎಸ್‌ಐ ನಾರಾಯಣ ಸ್ವಾಮಿರವರು ನೀಡಿದ ದೂರಿನ ಅನ್ವಯ





ಆರೋಪಿಗಳಾದ
ರಾಜಾರೆಡ್ಡಿ, ಅನಿರುದ್ ಪ್ರದಾನ್

ಠಾಣಾ ಸಿಆರ್ ನಂ. 246/2025 ಯು/ಎಸ್ 103(1), 61(2)(ಎ) ರೆಡ್‌ವಿತ್ 3(5) ಬಿಎನ್‌ಎಸ್ 2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡರು. ಆರೋಪಿ ಎ1 ಮನೋಜ್ ಒಡೆಯರ್, ಎ2 ರಾಜಾರೆಡ್ಡಿ, ಎ3 ಅನಿರುದ್ ಪ್ರದಾನ್ ಸೇರಿದಂತೆ ಮೂವರನ್ನು ವಶಕ್ಕೆ ಪಡೆದು ಕೂಲಂಕುಶವಾಗಿ ವಿಚಾರಣೆ ಮಾಡಲಾಗಿ ಆರೋಪಿಗಳು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದು, ಪಂಚರ ಸಮಕ್ಷಮದಲ್ಲಿ ಶವದ ಮಹಜರ್ ನಡೆಸಿದ ಮೇಲೆ ಶವವನ್ನು ಆರ್.ಎಲ್. ಜಾಲಪ್ಪ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದ್ದು ಅಲ್ಲಿ ಶವದ ಪಂಚನಾಮೆಯಾದ ನಂತರ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವ ಪರೀಕ್ಷೆ ನಡೆಸಿದ ನಂತರ ಮೃತ ದೇಹವನ್ನು ಸಂದೀಪ್‌ಸಿಂಗ್ ಸ್ನೇಹಿತರಿಗೆ ಒಪ್ಪಿಸಿದ್ದು ಅವರು ಶವವನ್ನು ಜಾರ್ಖಂಡ್‌ಗೆ ತೆಗೆದುಕೊಂಡು ಹೋಗಿ ಅವರ ಗ್ರಾಮದಲ್ಲಿಯೇ ಶವಸಂಸ್ಕಾರವನ್ನು ನೆರವೇರಿಸಿದರು. ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ್ದ ಚಾಕುವನ್ನು, ಮೊಬೈಲ್ ಫೋನನ್ನು ಗಿಡಗಳ ಮಧ್ಯೆ ಬಿಸಾಡಿದ್ದು ಅವುಗಳನ್ನು ಪಂಚರ ಸಮಕ್ಷಮದಲ್ಲಿ ತೆಗೆದುಕೊಟ್ಟಿದ್ದು, ನಂತರ ಪೊಲೀಸರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ☯






# ಸಂಧಾನವೊ ಸಂವಿಧಾನವೊ... ಲ್ಯಾಂಡ್ ಲಾರ್ಡ್ ಹವಾ ಜೋರು!

ದಲಿತ ಸಮುದಾಯದಿಂದ ಬಂದು ಐಪಿಎಸ್ ಅಧಿಕಾರಿಯಾಗಿದ್ದ ಸುಭಾಷ್ ಭರಣಿ ಅವರು ಬಳ್ಳಾರಿ ಎಸ್ಪಿ ಆಗಿದ್ದಾಗ, ದೇವದಾಸಿ ಪದ್ಧತಿ ಮತ್ತು ಹೆಣ್ಣು ಮಕ್ಕಳ ಮೇಲೆ ಬಣ್ಣದ ನೀರು ಎರಚುವ ಹೀನ ಆಚರಣೆಗಳನ್ನು ನಿಷೇಧಿಸುವಂತೆ ಮಾಡಿದ್ದೂ ಅಲ್ಲದೆ. ಅದಕ್ಕೆ ಕಾರಣರಾದವರನ್ನು ಮಟ್ಟ ಹಾಕಿದ್ದರು. ಆಗ ಅದು ಸಾಧಾರಣ ವಿಷಯವೇ ಅಲ್ಲ; ಜಮೀನ್ದಾರಿ ಪದ್ಧತಿ ಮತ್ತು ಅದರ ದರ್ಪಗಳನ್ನು ಅಭಿವ್ಯಕ್ತಿಸುವಲ್ಲಿ ಆಂಧ್ರ, ಗಡಿಯಲ್ಲಿದ್ದ ಬಳ್ಳಾರಿ ಮುಂಚೂಣಿಯಲ್ಲಿತ್ತು. ವಿದ್ಯೆ ಕಲಿತರೆ ಸಮಾಜ ಸಂವಿಧಾನ ಅರ್ಥೈಸಿ ಉತ್ತಮ ಬಾಳು ಬದುಕುವುದಕ್ಕೆ ಅವಕಾಶವಾಗುತ್ತದೆ ಮತ್ತು ಅಧಿಕಾರದಿಂದ ದುಂಡಾವರ್ತಿ ಮಾಡುವವರನ್ನು (ಎಂಥಾ ಪ್ರಭಾವಿ ಆದರೂ) ಮಟ್ಟ ಹಾಕಬಹುದು ಎಂಬುದಕ್ಕೆ ಇದು ಅತ್ಯುತ್ತಮ ಉದಾಹರಣೆ.

ದೇಶದ ಎರಡು ಅತ್ಯಂತ ದೊಡ್ಡ ಮೂಲ ಭೂತ ಸಮಸ್ಯೆಗಳೆಂದರೆ, ಮೊದಲನೇಯದು ಅಸ್ಪೃಶ್ಯತೆಯ ಆಚರಣೆ. ಎರಡನೇಯದು ಹಕ್ಕನ್ನು ಕಸಿದುಕೊಳ್ಳುವುದು. ಎರಡರ ಮೇಲೂ ಬೆಳಕು ಚೆಲ್ಲುವ ಈ ಚಿತ್ರದಲ್ಲಿ ತಾಂತ್ರಿಕತೆ ಮತ್ತು ಮಾತುಗಾರಿಕೆಯ ವೇಗ ಎಲ್ಲಿಯೂ ಪ್ರೇಕ್ಷಕನನ್ನು ಅಲುಗಾಡಲು ಬಿಡುವುದಿಲ್ಲ ಎಂಬುದು ಹೆಚ್ಚುಗಾರಿಕೆ. ಶ್ರೇಷ್ಠತೆಯ ವ್ಯಸನದಿಂದ ಮತ್ತು ದಬ್ಬಾಳಿಕೆ ನಡೆಸುವ ಮನೋ ವ್ಯಸನದ ಅಸ್ವಸ್ಥ ಮನಸ್ಥಿತಿಯಿಂದ ದುರ್ಬಲರ ಮೇಲೆ ಅಟ್ಟಹಾಸ ಮಾಡುತ್ತಾ ಮೆರೆಯುವ ಖಳರನ್ನು ಧ್ವಂಸ ಮಾಡುವ ವ್ಯಕ್ತಿ ಇಲ್ಲಿ ಇತಿಹಾಸವನ್ನು ಮೆರೆಸುವವನಂತೆ ಕಾಣುತ್ತಾನೆ. ಹಾಗಾಗಿ ಕೊಡ್ಲಿ ರಾಚಯ್ಯ ಎಂಬುದು ಕೇವಲ ವ್ಯಕ್ತಿಯಲ್ಲ; ಆತ ದಮನಿತ ಸಮಾಜದ ಪ್ರಜ್ವಲ ಪ್ರತಿನಿಧಿ. ರಾಚಯ್ಯನ ಮಗಳು ರಥ ಮುಟ್ಟಿದಳು ಎಂಬ ಕಾರಣಕ್ಕೆ ರಥವನ್ನೇ ಸುಟ್ಟು ಹಾಕುವ ಹೀನ ಮನಸ್ಥಿತಿಗಳು ಬಹಳ ಕಾಲದ ನಂತರವಾದರೂ ಟೀಕೆ ಮತ್ತು ಆಕ್ರೋಶಕ್ಕೆ ಗುರಿಯಾಗುವುದು ದಮನಿತ ಸಮಾಜದ ವಿಜಯೋತ್ಸವದಂತೆ ಕಾಣುತ್ತದೆ.

ಎರಡು ಎಕರೆ ಭೂಮಿಗಾಗಿ ಹೋರಾಟ ನಡೆಸುವ ರಾಚಯ್ಯ, ಮಗಳ ವಿದ್ಯಾಭ್ಯಾಸಕ್ಕೂ ತುಡಿಯುವುದು ಸಂವಿಧಾನದ ಆಶಯಗಳನ್ನು ಅರ್ಥೈಸಿಕೊಂಡ ನಿಲುವು. ಆದರೂ ಆತ ಕೊಡಲಿಯಂತಹ ಶಸ್ತ್ರ ಹಿಡಿಯ ಬೇಕಾಗಿ ಬರುವುದು ಸಾಮಾಜಿಕ ನೆಲೆಯಲ್ಲಿನ ದೌರ್ಜನ್ಯ ಮತ್ತು ಅಸಮಾನತೆಯ ಶಾಪದಿಂದಲೇ. ಅವ್ವನ ಕೈ ತುತ್ತು ಆತನ ಸಾಮರ್ಥ್ಯ. ಆದರೆ ಅವ್ವನನ್ನೇ ಮುಗಿಸುವ ಖಳರ ಅಟ್ಟಹಾಸ ಆತನನ್ನು ಶಾಂತಿಯ ಹೊಸ್ತಿಲನ್ನು ದಾಟುವಂತೆ ಮಾಡುವುದು ವಿಪರ್ಯಾಸ. ತನ್ನವರೇ ದ್ರೋಹ ಬಗೆಯುವ (ನೀರಿಗೆ ಪಾಚಿ ವೈರಿ) ಕ್ರೌರ್ಯದ ನಡುವೆಯೂ ಆತ ಬದುಕುಳಿಯುವುದು ಅಪ್ರತಿಮ ಎದೆಗಾರಿಕೆ ಮತ್ತು ಸಂಯಮದಿಂದ.



ಒಬ್ಬ ಸ್ಟಾರ್ ನಟನಾಗಿ ಚಪ್ಪಲಿ ಹಾರ ಹಾಕಿಸಿಕೊಳ್ಳುವ ಮಟ್ಟಕ್ಕೆ ಪಾತ್ರದಲ್ಲಿ ತಲ್ಲೀನತೆ ಪಡೆದಿರುವ ವಿಜಯಕುಮಾರ್ ನಿಜವಾಗಿ ದಮನಿತ ಸಮುದಾಯದ ಪ್ರತಿನಿಧಿಯಾಗೇ ಕಾಣುತ್ತಾರೆ. 'ಸಾಹಸ'ದ ಮೂಲಕವೇ ಚಿತ್ರರಂಗಕ್ಕೆ ಬಂದ ವಿಜಯಕುಮಾರ್ ಆಕ್ರೋಶ ಭರಿತನಾಗಿ ಅಷ್ಟು ಜನರನ್ನು ಹೊಡೆದು ಹಾಕುವಾಗ ನೈಜತೆ ಕಾಣುವುದೇ ಈ ಚಿತ್ರದ ಹೈಲೈಟ್. ಮುಖ ಮತ್ತು ಕಣ್ಣಿನ ಕಿಚ್ಚು ಹೊಡೆದಾಟದಲ್ಲೂ ಅಭಿವ್ಯಕ್ತಿ ಪಡೆದಿರುವುದರಿಂದ ಅದು ಸಾಧ್ಯ. ಅದೂ ಅಲ್ಲದೆ ವಿಜಯ್ ಕೋಟು ಧರಿಸುವಾಗ ಸಂವಿಧಾನ ಮತ್ತು ಬಾಬಾ ಸಾಹೇಬರನ್ನು ಮೈಮೇಲೆ ಹೊದ್ದಂತೆ ಕಾಣುತ್ತಾರೆ.

ನಿರ್ದೇಶಕ ಜಡೇಶ್ ಕೆ. ಹಂಪಿ ಸಿಕ್ಕ ಅವಕಾಶವನ್ನು ಎಲ್ಲಿಯೂ ಸಡಿಲಗೊಳಿಸಿಲ್ಲ; ಸಾಮಾಜಿಕ ಸಮಸ್ಯೆಯನ್ನು ಕಮರ್ಷಿಯಲ್ ಗುಣಕ್ಕೆ ಒಗ್ಗಿಸುವ ಅಪರಿಮಿತ ಶಕ್ತಿ ಅವರಲ್ಲಿದೆ. ಹಾಗಾಗಿ ಯಾವ ಪಾತ್ರ ಮತ್ತು ಸನ್ನಿವೇಶ ಕೂಡ ಬೋರ್ ಎನಿಸುವುದಿಲ್ಲ. ಅದಕ್ಕೆ ಮತ್ತೊಂದು ಕಾರಣ ಚಿತ್ರದ ಬೆಂಕಿಯಂತಹ ಸಂಭಾಷಣೆ. ಮಾಸ್ತಿ ಮತ್ತು ಇತರರು ಶಕ್ತಿಯ ಅರಿವು ಮಾಡಿಕೊಟ್ಟಿದ್ದಾರೆ. ಸಾಕವ್ವ ಉಮಾಶ್ರೀ ಪಾತ್ರವನ್ನು ನುಂಗಿ ಹಾಕಿದ್ದಾರೆ. ಅಚ್ಚರಿ ಎಂಬಂತೆ ರಚಿತಾ ರಾಮ್ ತಾನೊಬ್ಬ ಅಪ್ರತಿಮ ಕಲಾವಿದೆ ಎಂಬುದನ್ನು ನಿಂಗವ್ವನ ಪಾತ್ರದ ಮೂಲಕ ಸಾಬೀತು ಪಡಿಸಿದ್ದಾರೆ. ಹಾಗೆಯೇ ವಿಜಯಕುಮಾರ್ ಪುತ್ರಿ ರಿತನ್ಯ, ಭಾಗ್ಯ ಪಾತ್ರದಲ್ಲಿ ಸಹನೆಯ ಪೊಲೀಸ್ ಆಗಿ ಮಿಂಚಿದ್ದಾರೆ. ಸಂಯಮದ ಖಳನ ಪಾತ್ರದಲ್ಲಿ ರಾಜ್ ಬಿ. ಶೆಟ್ಟಿ ಅವರದು ಅದ್ಭುತ ಅಭಿನಯ ಎಂದು ಹೇಳಲೇ ಬೇಕಿಲ್ಲ. ರಾಕೇಶ್ ಅಡಿಗ ಖಳ ನಟನಾಗಿಯೂ ಮಿಂಚಬಲ್ಲೆ ಎಂದು ತೋರಿದ್ದಾರೆ.

ಬಿ.ಸುರೇಶ್, ಗೋಪಾಲಕೃಷ್ಣ ದೇಶಪಾಂಡೆ, ಶರತ್ ಲೋಹಿತಾಶ್ವ, ಅಚ್ಯುತ್ ಕುಮಾರ್, ಮಿತ್ರ, ಸಂಪತ್ ಕುಮಾರ್ ಮೈತ್ರಿ, ಸನತ್ ಹೀಗೆ ಎಲ್ಲಾ ಕಲಾವಿದರು ತಮ್ಮ ಪಾತ್ರಗಳಲ್ಲೇ ಜೀವಿಸಿರುವುದು ವಿಶೇಷ.. ಸ್ವಾಮಿ ಜೆ. ಗೌಡ ಛಾಯಾಗ್ರಹಣ ಚಿತ್ರದ ಮೆರುಗನ್ನು ಹೆಚ್ಚಿಸಿದರೆ, ಅಜನೀಶ್ ಲೋಕನಾಥ್ ಅವರ ಹಿನ್ನೆಲೆ ಸಂಗೀತ ಚಿತ್ರ ಮುಗಿದ ನಂತರವೂ ಅದೇ ಚಮತ್ಕಾರಿಕ ತನ್ಮಯತೆ ನೀಡುವಂತೆ ಅಬ್ಬರಿಸುತ್ತದೆ. ☯




# ಕಲ್ಟ್ ಅಂದ್ರೇನು ಮಿ. ಅನಿಲ್?!

ಹ್ಯಾಂಡ್ಸಂ ಹೀರೋ ಝೈದ್ ಖಾನ್ ನಟನೆಯ 2ನೇ ಸಿನಿಮಾ 'ಕಲ್ಟ್' ರಿಲೀಸ್ ಆಗಿದೆ. 'ಬನಾರಸ್' ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದ ಝೈದ್ ಖಾನ್ ಮೊದಲು ವಿಭಿನ್ನ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದರು. ಅದರ ಹಾಡುಗಳ ಸೂಪರ್ ಹಿಟ್ ಆಗಿದ್ದವು. ಆದರೆ, 'ಕಲ್ಟ್'ನಲ್ಲಿ ಅದಕ್ಕೆ ತದ್ವಿರುದ್ಧ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ, ಮಿಸ್ಟರ್ ಖಾನ್! ಇದರಲ್ಲಿ ರಗಡ್ ಲುಕ್‌ನಲ್ಲಿ, ಮಾಸ್ ಲುಕ್ ನಲ್ಲಿ ತೆರೆಮೇಲೆ ಕಾಣಿಸಿಕೊಂಡಿದ್ದಾರೆ. ಇವರೊಂದಿಗೆ ರಚಿತಾ ರಾಮ್, ಮಲೈಕಾ ವಸುಪಾಲ್ ಪ್ರಮುಖ ಪಾತ್ರದಲ್ಲಿ ಕಾಣಿಕೊಂಡಿದ್ದಾರೆ. ರ್‍ಯಾಂಬೋ 2 ಹಿಟ್ ಸಿನಿಮಾದ ನಿರ್ದೇಶಕ ಅನಿಲ್ ಕುಮಾರ್ ನಿರ್ದೇಶನ ಮಾಡಿರುವ ಈ ಸಿನಿಮಾ ಸ್ವಲ್ಪ ಮಟ್ಟಿಗೆ ಚನ್ನಾಗಿದ್ದರು ಕೊಡ್ಲಿ ರಾಚಯ್ಯನ(ಲ್ಯಾಂಡ್ ಲಾರ್ಡ್) ಮುಂದೆ ಮಂಕಾಗಿ ಪ್ರದರ್ಶನ ಕಾಣುತ್ತಿದೆ!



'ಕಲ್ಟ್' ಒಂದು ಅಪ್ಪಟ ಪ್ರೇಮಕಥೆ. ಒಬ್ಬ ಹುಡುಗನಿಗೆ ಲವ್ ಫೆಲ್ಯೂರ್ ಆದಾಗ ಅವನು ದು:ಖಕ್ಕೆ ಒಳಗಾಗುತ್ತಾನೆ. ಅವನು ಕುಡಿಯುವುದಕ್ಕೆ ಶುರು ಮಾಡುತ್ತಾನೆ. ಅವನ ಬದುಕಿನಲ್ಲಿ ಏರಿಳಿತಗಳು ಬರುತ್ತವೆ. ಇನ್ನೂ ಏನೇನೋ ಬದಲಾವಣೆಗಳು ಆಗುತ್ತವೆ.ಒಟ್ಟಾರೆ,ಲವ್ ಫೇಲ್ಯೂರ್ ಆದವನ ಲೈಫ್ ಬರ್ಬಾದ್ ಆಗುತ್ತದೆ! ಅನ್ನೋದನ್ನ ಇಟ್ಕೊಂಡು ಈ ಸಿನಿಮಾ ಮಾಡಲಾಗಿದೆ. ಇಂಜಿನಿಯರಿಂಗ್ ಓದುತ್ತಿದ್ದ ಮಾಧವ ಉರ್ಫ್ ಮ್ಯಾಡಿ ವಿದ್ಯಾಭ್ಯಾಸವನ್ನ ಅರ್ಧಕ್ಕೆ ಬಿಟ್ಟು ಕುಡಿತಕ್ಕೆ ದಾಸನಾಗುತ್ತಾನೆ. ಅದಕ್ಕೆ ಕಾರಣ, ಲವ್ ಫೇಲ್ಯೂರ್! ಲವರ್ ಗೀತಾ (ಮಲೈಕಾ) ಕೈಕೊಟ್ಟು ಹೋಗಿರುತ್ತಾಳೆ.

ಇಂತಹ ಸ್ಥಿತಿಯಲ್ಲಿ ದೇವದಾಸನ ಎದಿರು ಇತಿಹಾಸಿನಿ (ರಚಿತಾ) ಎಂಟ್ರಿ ಆಗುತ್ತದೆ! ಗೀತಾ ಬಿಟ್ಟು ಹೋಗಿದೇಕೆ? ಇತಿಹಾಸಿನಿ ಬಂದಿದ್ದೇಕೆ? ಮತ್ತೆ ಇಬ್ಬರೂ ಒಂದಾಗುತ್ತಾರಾ? ಮಾಧವ ಅಲಿಯಾಸ್ ಮ್ಯಾಡಿ ಜೊತೆಯಾಗೋದು ಇತಿಹಾಸಿನಿನಾ? ಗೀತಾನಾ? ಅನ್ನೋದು ಸಿನಿಮಾ ಕಥೆ!! 'ಕಲ್ಟ್' ಟೆಕ್ನಿಕಲಿ ಸ್ವಲ್ಪ ವೀಕ್ ಆಗಿದೆ. ಒಂದು ಶಾಟ್ ಮುಗಿಯುತ್ತಿದ್ದಂತೆ ಇನ್ನೊಂದು ಶಾಟ್‌ಗೆ ಹೋಗಬೇಕು ಎನ್ನುವಾಗ ಡಿಸ್ಟರ್ಬ್ ಆಗುತ್ತೆ! ಕೆಲವೊಮ್ಮೆ ಕಂಟಿನ್ಯೂಟಿ ಇಲ್ಲ ಅಂತ ಅನಿಸುತ್ತೆ!! ಆದರೆ, ಪಂಚಿಂಗ್ ಡೈಲಾಗ್‌ಗಳು ಪ್ರೇಕ್ಷಕರಿಂದ ಶಿಳ್ಳೆಗಳನ್ನು ಗಿಟ್ಟಿಸಿಕೊಳ್ಳುತ್ತವೆ. 'ಕಲ್ಟ್' ಸಿನಿಮಾದ ಪ್ಲಸ್ ಪಾಯಿಂಟ್ ಅಂದರೆ, ಅರ್ಜುನ್ ಜನ್ಯ ಕಂಪೋಸ್ ಮಾಡಿರುವ ಹಾಡುಗಳು!

ಅಯ್ಯೋ ಶಿವನೇ ಹಾಡು ಬಹಳ... ಬಹಳ...ಇಷ್ಟ ಆಗುತ್ತೆ. ಇನ್ನು 'ಆಲ್ ಓಕೆ'ಚಿತ್ರದ 'ಹ್ಯಾಪಿಯಾಗಿದೆ' ಹಾಗೂ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಸಿನಿಮಾದ 'ಹೇ ಶಾರದೆ...' ಹಾಡನ್ನು ಮರು ಬಳಕೆ ಮಾಡಿಕೊಳ್ಳಲಾಗಿದೆ.ಸ್ಟಂಟ್ ಮಾಸ್ಟರ್ ರವಿ ವರ್ಮಾ ಕಂಪೋಸ್ ಮಾಡಿರುವ ಆಕ್ಷನ್ ಸೀಕ್ವೆನ್ಸ್ ಗಮನ ಸೆಳೆಯುತ್ತವೆ. ಕ್ಯಾಮರಾ ವರ್ಕ್ ಕಣ್ಣಿಗೆ ತಂಪು ತಂಪು. ಸೆಂಟಿಮೆಂಟ್ ಸೀನ್‌ಗಳು ಹೈಲೈಟ್ ಎನ್ನಬಹುದು! ಅಂದಹಾಗೆ, ಕನ್ನಡದಲ್ಲಿ ಕಾಮಿಡಿ ಟೈಮ್ ಗಣೇಶ್ ನಟಿಸಿದ್ದ 'ಕೃಷ್ಣ' ಹಾಗೂ ತೆಲುಗಿನಬ್ಲಾಕ್ ಬಸ್ಟರ್ ಮೂವಿ 'ಬೇಬಿ' ಸಿನಿಮಾಗಳ ದೃಶ್ಯಗಳನ್ನು ಕದ್ದು ಇಲ್ಲಿ ಇನ್ನೊಂದು ರೀತಿಯಲ್ಲಿ ತೋರಿಸಲಾಗಿದೆ ಎಂಬ ಡೌಟ್ ಬರುತ್ತದೆ!! ಈ ಚಿತ್ರದಲ್ಲಿ ಹೀರೋಯಿನ್‌ಗೆ ಇಬ್ಬಿಬ್ಬರು ಬಾಯ್ ಫ್ರೆಂಡ್ಸ್ ಇಲ್ಲವೇ ಇಲ್ಲ, ಆದರೂ 'ಕಲ್ಟ್' ಅಂತ ಏಕೆ ಹೆಸರಿಟ್ಟರೋ?! ☯

Vol. 41 No. 34 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 ttps://www.instagram.com/police_news?igsh=MWJ6bHJwZDRmZDc1aQ==